# ಮೌಲ್ಯಾಧಾರಿತ ಶಿಕ್ಷಣ

## ಶಿಕ್ಷಕರ ಕೈಪಿಡಿ

**4 – 5 ನೇ ವರ್ಗ**

## ರಾಷ್ಟ್ರೀಯ ಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ

## (Foundation for Restoration of National Values)

# ಪರಿವಿಡಿ


1. ಪ್ರಸ್ತಾವನೆ 4

2. ಅಧ್ಯಕ್ಷರಿಂದ ಸಂದೇಶ 6

3. ಕೈಪಿಡಿ – ಒಂದು ಪರಿಚಯ 8

3.1 ರಾಷ್ಟ್ರೀಯ ಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ ಮತ್ತು ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಕಿರು ಪರಿಚಯ 9

3.2 ಮೌಲ್ಯಾಧಾರಿತ ಶಿಕ್ಷಣದಲ್ಲಿ ಸಾಮಾನ್ಯ ಪಠ್ಯಕ್ರಮದ ಅವಶ್ಯಕತೆ 11

4. ಬೋಧಕರಿಗೆ ಸೂಚನೆಗಳು 13

5. ರಾಷ್ಟ್ರೀಯ ಶಾಶ್ವತ ಮೌಲ್ಯಗಳು 14

5.1 ರಾಷ್ಟ್ರೀಯ ಧ್ಯೇಯ ವಾಕ್ಯ – 'ಸತ್ಯಮೇವ ಜಯತೆ' 15

5.1.1 ಪ್ರಾಮಾಣಿಕತೆ ಹಾಗು ಸತ್ಯಸಂಧತೆ 16

5.1.2 ನ್ಯಾಯ 21

5.1.3 ಸಮಾನತೆ 24

5.2 ರಾಷ್ಟ್ರಧ್ವಜ – ಸಂಕ್ಷಿಪ್ತ ಪರಿಚಯ 29

5.2.1 ಧೈರ್ಯ – ರಾಷ್ಟ್ರಧ್ವಜದಲ್ಲಿನ ಕೇಸರಿ ವರ್ಣಾಧಾರಿತ 30

5.2.2 ತ್ಯಾಗ – ಕಾಳಜಿ ಮತ್ತು ಸಹಾನುಭೂತಿ : ರಾಷ್ಟ್ರಧ್ವಜದಲ್ಲಿನ ಕೇಸರೀವರ್ಣಾಧಾರಿತ 34

5.2.3 ರಾಷ್ಟ್ರಪ್ರೇಮ – ಕೇಸರಿವರ್ಣಾಧಾರಿತ 37

5.2.4 ಶಾಂತಿ ಮತ್ತು ಸೌಹಾರ್ದತೆ – ರಾಷ್ಟ್ರಧ್ವಜದಲ್ಲಿನ ಶ್ವೇತವರ್ಣಾಧಾರಿತ 39

5.2.5 ಸಹಬಾಳ್ವೆ – ರಾಷ್ಟ್ರಧ್ವಜದಲ್ಲಿನ ಶ್ವೇತವರ್ಣಾಧಾರಿತ 44

5.2.6 ಸ್ವಚ್ಛತೆ – ರಾಷ್ಟ್ರಧ್ವಜದಲ್ಲಿನ ಶ್ವೇತವರ್ಣಾಧಾರಿತ 47

5.2.7 ಪರಿಸರಸಂರಕ್ಷಣೆ ಹಾಗು ಪ್ರಕೃತಿಯ ಬಗ್ಗೆ ಗೌರವ – ರಾಷ್ಟ್ರಧ್ವಜದಲ್ಲಿನ ಹಸಿರುವರ್ಣಾಧಾರಿತ 52

5.2.8 ನಿಮ್ಮ ಅತ್ಯುತ್ತಮ ಪ್ರಯತ್ನಕ್ಕೆ ದೊರಕುವ ಯಶಸ್ಸು – ರಾಷ್ಟ್ರಧ್ವಜದಲ್ಲಿನ ಹಸಿರುವರ್ಣಾಧಾರಿತ 57

5.2.9 ಸಂತೋಷ – ರಾಷ್ಟ್ರಧ್ವಜದಲ್ಲಿನ ಹಸಿರುವರ್ಣಾಧಾರಿತ 61

5.2.10 ಅಶೋಕ ಚಕ್ರ 65

5.2.10.1 ಅಶೋಕನ ಧಮ್ಮ 67

5.2.10.2 ಅಹಿಂಸೆ 70

5.2.10.3 ಗೌರವ 74

5.2.10.4 ಉತ್ತಮ ನಡವಳಿಕೆ 78

5.2.10.5 ನಿಷ್ಠೆ 83

5.2.10.6 ಕರುಣೆ 86

5.2.10.7 ಉತ್ತಮಆರೋಗ್ಯದ ಅಭ್ಯಾಸಗಳು 89

ಅನುಬಂಧ 1 - ಮೌಲ್ಯಗಳ ಪಟ್ಟಿ 92

ಅನುಬಂಧ 2 - ಶಿಕ್ಷಕರಿಗೆ ಮಾರ್ಗದರ್ಶನ 94

ಬೋಧಕರ ಟಿಪ್ಪಣಿಗಳು

# 1. ಪ್ರಸ್ತಾವನೆ

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕಪ್ರಾಪ್ತಿ ಹಾಗೂ ದಾಖಲಾತಿಯಲ್ಲಿ ಭಾರತವು ಪ್ರಚಂಡಪ್ರಗತಿಯನ್ನು ಸಾಧಿಸಿದೆ. ಶಿಕ್ಷಣಾವಕಾಶ ಹಾಗೂ ದಾಖಲಾತಿಯ ಹೆಚ್ಚಳಮಾತ್ರದಿಂದ ಮಕ್ಕಳು ಪಾರಂಪರಿಕ ಹಾಗೂ ರಾಷ್ಟ್ರೀಯಮೌಲ್ಯಗಳಲ್ಲಿ ಬೋಧಿತರೆಂದು ನೆಚ್ಚಲಾಗದು. ಮಕ್ಕಳು ಮೌಲ್ಯಯುತ ಜೀವನವನ್ನು ನಡೆಸುವಂತಾಗಿ ಅವರನ್ನು ದೇಶದ ಸತ್ಪ್ರಜೆಗಳನ್ನಾಗಿಸುವ ಪ್ರಾಥಮಿಕಕಾರ್ಯದಿಂದ ಶಿಕ್ಷಕರನ್ನು ವಿಮುಖವಾಗಿಸುವುದೆಂದರೆ ಜಾಗತಿಕ ಸ್ಪರ್ಧಾತ್ಮಕತೆಯ ಒತ್ತಡ. ಮಕ್ಕಳಲ್ಲಿ ನೀತಿ – ಧಾರ್ಮಿಕತೆಗಳ ಬಗೆಗೆ ಅರಿವನ್ನು ಮೂಡಿಸಲು ಹೆತ್ತವರಿಗೆ ಸಮಯವಾಗಲಿ ಪ್ರವೃತ್ತಿಯಾಗಲಿ ಇಲ್ಲ. ಪರಿಣಾಮವಾಗಿ, ಶಾಲೆ – ಮಹಾವಿದ್ಯಾಲಯಗಳಿಂದ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಚಾರಿತ್ರ್ಯ, ನೈತಿಕತೆ ಹಾಗೂ ಸಾಮಾನ್ಯ ನಡತೆಯಲ್ಲಿ ಗಣನೀಯ ಅವನತಿ ಕಂಡುಬಂದಿದೆ.

## ವಿವಿಧ ನೀತಿದಾಖಲೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ಕಾಳಜಿ :

ಸ್ವಾತಂತ್ರ್ಯಾನಂತರದ ಸರಕಾರದ ನೀತಿದಾಖಲೆಗಳಲ್ಲಿ ಇತ್ತೀಚೆಗೆ ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಕಾಳಜಿಯು ಬಿಂಬಿತವಾಗಿದೆ. ಶಿಕ್ಷಣದ ಗುರಿಯ ವ್ಯಾಖ್ಯಾನವು ಚಾರಿತ್ರ್ಯನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಬೇಕೆಂಬುದು ರಾಷ್ಟ್ರೀಯ ಪ್ರೌಢಶಿಕ್ಷಣ ಆಯೋಗದ ಮಹತ್ವದ ಹೆಗ್ಗುರುತಾಗಿದೆ. ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1962)ದ ವರದಿಯ ಪ್ರಕಾರ, " ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾತ್ಮಿಕ ವಿಷಯಗಳನ್ನು ಹೊರಗಿಟ್ಟರೆ, ನಾವು ನಮ್ಮ ಸಂಪೂರ್ಣ ಐತಿಹಾಸಿಕ ಬೆಳವಣಿಗೆಗೆ ಮೋಸಮಾಡಿದಂತಾಗುತ್ತದೆ"ಎಂದು ಉಲ್ಲೇಖಿತವಾಗಿದೆ. 1964 - 66 ರ ಶಿಕ್ಷಣ ಆಯೋಗವು "ಶಿಕ್ಷಣ ಹಾಗು ರಾಷ್ಟ್ರೀಯ ಅಭಿವೃದ್ಧಿ"ಯ ಗ್ರಹಿಕೆಯಾಧಾರದನ್ವಯ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ, ನೈತಿಕ ಹಾಗು ಅಧ್ಯಾತ್ಮಿಕಮೌಲ್ಯಗಳ ಅನುಪಸ್ಥಿತಿ ಹಾಗು ಅವುಗಳಿಗೆ ಅವಕಾಶವಿಲ್ಲದಿರುವುದು ಒಂದು ಗಂಭೀರ ದೋಷವಾಗಿ ಗುರುತಿಸಲಾಗಿರುವ ಬಗ್ಗೆ ಬೆಳಕು ಬೀರಿದೆ.

ಸಾಮಾಜಿಕ ಹಾಗು ನೈತಿಕ ಮೌಲ್ಯಗಳ ಕೃಷಿಗೆ ಶಿಕ್ಷಣವನ್ನು ಬಲವಾದ ಸಾಧನವಾಗಿ ಪರಿವರ್ತಿಸುವುದಾಗಿ ರಾಷ್ಟ್ರೀಯ ಶಿಕ್ಷಣ ನೀತಿ (1986)ಯು ಪ್ರತಿಪಾದಿಸಿದೆ. ಇದರನ್ವಯ 1992ರಲ್ಲಿ ಕ್ರಿಯಾರೂಪ ಪಡೆದ ಈ ಕಾರ್ಯಕ್ರಮವು, ಮೌಲ್ಯಾಧಾರಿತ ಶಿಕ್ಷಣದ ಹಲವು

ಘಟಕಗಳನ್ನು ಪ್ರೌಢ ಶಿಕ್ಷಣವೂ ಸೇರಿದಂತೆ ಪ್ರಾಥಮಿಕಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಪಠ್ಯಕ್ರಮದೊಂದಿಗೆ ಸಂಯೋಜಿಸಲು ಪ್ರಯತ್ನ ಪಟ್ಟಿತು.

ಶಿಕ್ಷಣವು ಮಾನವರ ಬಹುಮುಖಿ ಬೆಳವಣಿಗೆಯನ್ನು ಎತ್ತಿ ತೋರಿಸಬೇಕು ಮತ್ತು ಮಾನವೀಯಮೌಲ್ಯಗಳ ಶಿಕ್ಷಣದ ಕಾರ್ಯಕ್ರಮವನ್ನು ಮೂಲ ಸಾರ್ವತ್ರಿಕ ಮಾನವೀಯಮೌಲ್ಯಗಳ ಸುತ್ತ ನಿರ್ಮಿಸಬೇಕೆಂದು ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಭಾರತ ಸರ್ಕಾರದ ವರದಿಯು (ಚವನ್ ಸಮಿತಿ ವರದಿ, 1999) ಶಿಫಾರಸು ಮಾಡಿದೆ.

ಪಠ್ಯಕ್ರಮದೊಂದಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ಸೇರಿಸಬೇಕೆಂದು 'ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು' ಒತ್ತಾಯಿಸಿದ್ದು, 'ಏಕತೆ ಮತ್ತು ಏಕೀಕರಣದ ಮೇಲೆ ಆಧಾರಿತವಾಗಿರುವ ಸಾರ್ವತ್ರಿಕ ಹಾಗು ಶಾಶ್ವತಮೌಲ್ಯಗಳನ್ನು ಶಾಲೆಗಳು ಶ್ರಮದಿಂದಲಾದರೂ ಕಡ್ಡಾಯವಾಗಿ ಉಳಿಸಿಕೊಳ್ಳಬೇಕೆಂದೂ, ಅದರಿಂದ ಜನಸಮುದಾಯವು ತಮ್ಮ ಅಂತರಂಗದಲ್ಲಿನ ಅಮೂಲ್ಯ ನಿಧಿಯನ್ನು ಅರಿಯುವಲ್ಲಿ ಸಹಾಯವಾಗಬೇಕೆಂದು ಪ್ರತಿಪಾದಿಸಿದೆ.

ಶಾಂತಿ, ಮಾನವೀಯತೆ ಮತ್ತು ಸಹಿಷ್ಣುತೆಯನ್ನು ಬೆಳೆಸುವ ಮೌಲ್ಯಗಳನ್ನು ಉತ್ತೇಜಿಸುವ ಮಾನವರ ಪರಸ್ಪರಾವಲಂಬನೆ ಮತ್ತು ವೈವಿಧ್ಯತೆಗಳ ನಡುವೆ ಇರುವ ಸಮಾನತೆಯ ಪರಿಕಲ್ಪನೆಯೊಂದಿಗಿರುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸುವ ಅಗತ್ಯವನ್ನು 2005 ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ನಿರೂಪಿಸುತ್ತದೆ.

ವಿವಿಧ ಆಯೋಗಗಳು ಹಾಗೂ ನೀತಿಗಳ ಹೊರತಾಗಿಯೂ ನಮ್ಮ ಸಾಂಪ್ರದಾಯಿಕ ಮತ್ತು ರಾಷ್ಟ್ರೀಯಮೌಲ್ಯಗಳು ಕ್ರಿಯಾತ್ಮಕ ಕಾರ್ಯಕ್ರಮಗಳಾಗಿ ಕಾರ್ಯರೂಪಕ್ಕಿಳಿಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಮುಖ್ಯವಾಗಿ ಮೌಲ್ಯಾಧಾರಿತ ಶಿಕ್ಷಣವನ್ನು ಇಂದಿಗೂ ಒಂದು ಹೆಚ್ಚುವರಿ ಕಾರ್ಯಕ್ರಮ ಅಥವಾ ಕಾರ್ಯಚಟುವಟಿಕೆಯಾಗಿಯೇ ನೋಡಲಾಗುತ್ತಿದೆ. ಶಿಕ್ಷಣದ ಗುರಿಗಳಿಂದ ಶಿಕ್ಷಣ ಮತ್ತು ಮೌಲ್ಯಗಳನ್ನು ಬೇರ್ಪಡಿಸಲಾಗದು ಎಂಬುದನ್ನು ಮುಖ್ಯವಾಗಿ ಅರಿತು, ಅವುಗಳನ್ನು ಹೆಚ್ಚುವರಿ ಚಟುವಟಿಕೆಗಳೆಂದು ಶಾಲೆಗಳು ಪರಿಗಣಿಸಬಾರದು. ಬೋಧಕರು ತಮ್ಮ ಪಠ್ಯಗಳಲ್ಲಿರುವ ಮೌಲ್ಯಗಳನ್ನು ಹೊರತಂದು, ಅವುಗಳನ್ನು ತರಗತಿಗಳಲ್ಲಿನ ಕಾರ್ಯಚಟುವಟಿಕೆಗಳೊಂದಿಗೆ ಸಂಯೋಜಿಸಲು ಅವರನ್ನು ಪ್ರೋತ್ಸಾಹಿಸಬೇಕು. ಶಾಲೆಗಳು ಈಗಾಗಲೇ ಏನು ಮಾಡುತ್ತಲಿವೆ ಅಥವಾ ಏನು ಮಾಡಬೇಕೆಂಬುದರ ಹಿನ್ನಲೆಯಲ್ಲಿಯೇ ಈ ಹೆಚ್ಚಿನ ಕಾರ್ಯವನ್ನು ಮಾಡಬಹುದು. ಈ ದೃಷ್ಟಿಯ ಹಿನ್ನಲೆಯಲ್ಲಿಯೇ ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಪ್ರಾಥಮಿಕ ಶಾಲಾ ಮಕ್ಕಳ ಶಿಕ್ಷಣಕ್ಕಾಗಿ ಮೌಲ್ಯಾಧಾರಿತ ಶಿಕ್ಷಣದ ಪಠ್ಯಕ್ರಮವನ್ನು ಸಿದ್ಧಪಡಿಸಿದೆ.

# 2. ಅಧ್ಯಕ್ಷರಿಂದ ಸಂದೇಶ

ಮೊಟ್ಟಮೊದಲಿಗೆ ಮಗುವು ತನ್ನ ಹೆತ್ತವರಿಂದ ಹಾಗೂ ಮನೆಯ ಹಿರಿಯರಿಂದ ಉತ್ತಮಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುತ್ತದೆ. ಒಮ್ಮೆ ಮಗುವು ಕುಟುಂಬದ ಪರಿಧಿಯಿಂದ ಹೊರಬಂದ ನಂತರ, ಮನೆಗಿಂತ ಹೆಚ್ಚುಸಮಯವನ್ನು ಶಾಲೆಯ ಕಲಿಯುವಿಕೆಯಲ್ಲಿ ಕಳೆಯುತ್ತದೆ. ಈ ಮೊದಲ ರಚನಾತ್ಮಕ ವರ್ಷಗಳು ಅಂತಿಮವಾಗಿ ವ್ಯಕ್ತಿಯ ವ್ಯಕಿತ್ವ ಹಾಗು ಮೌಲ್ಯಗಳನ್ನು ಸುಂದರವಾಗಿಯೂ, ಸುಭದ್ರವಾಗಿಯೂ ನಿರ್ಮಿಸಿ ರೂಪಿಸುತ್ತದೆ.

ನಮ್ಮ ಎಲ್ಲಾ ಧರ್ಮಗಳಲ್ಲಿಯೂ ಹುದುಗಿರುವ ಉತ್ತಮಮೌಲ್ಯಗಳು ನಮ್ಮಲ್ಲಿ ಅಂತರ್ಗತವಾಗಿ ಬೆಳೆದುಬಂದಿವೆಯಾದರೂ, ನಮ್ಮ ಬಹುಧಾರ್ಮಿಕ ಸಾಮಾಜಿಕ ಹಿನ್ನಲೆಯಲ್ಲಿ ಶಾಲೆಗಳಲ್ಲಿ ಅದನ್ನು ಒಂದು ಪಠ್ಯವಾಗಿ ಕಲಿಸಲು ಸಾಧ್ಯವಿಲ್ಲ. ಹೀಗಿದ್ದರೂ ಕೂಡ ಕಲಿಕೆಯ ಸಂದರ್ಭ ಹಾಗು ಅದರ ಪ್ರಕ್ರಿಯೆಗಳಲ್ಲಿ ಮೌಲ್ಯಗಳನ್ನು ಹೇಗಾದರೂ ಸೇರಿಸಿ ಪೋಷಿಸಬೇಕು. ರಾಷ್ಟ್ರಪ್ರೇಮ, ಹಿರಿಯರು ಮತ್ತು ಶಿಕ್ಷಕರಲ್ಲಿ ಗೌರವ, ಪರಾನುಭೂತಿ ಮತ್ತು ಇತರರ ಬಗ್ಗೆ ಕಾಳಜಿ, ಸತ್ಯಸಂಧತೆ, ದಿಟ್ಟತೆ ಮುಂತಾದ ಉತ್ತಮ ಮೌಲ್ಯಗಳು ಮಗುವಿನಲ್ಲಿ ಬೇರೂರುವಂತೆ ಮಾಡಬೇಕು. ಉತ್ತಮ ನೀತಿಕತೆಗಳು, ಉಪಾಖ್ಯಾನಗಳ ಮೂಲಕ ಹಾಗೂ ತಮ್ಮ ಸ್ವಂತ ಅನುಭವದ ನಿದರ್ಶನಗಳನ್ನು ಮಕ್ಕಳಿಗೆ ನೀಡುವುದರ ಮೂಲಕ ಶಿಕ್ಷಕರು ಇದನ್ನು ಸಾಧಿಸಬಹುದಾಗಿದೆ.

ನೈತಿಕತೆ, ಉತ್ತಮಮೌಲ್ಯಗಳು ಮತ್ತು ನೀತಿತತ್ತ್ವಗಳನ್ನು ಯುವಮನಸ್ಸುಗಳಿಗೆ ಯಾವರೀತಿ ತಲುಪಿಸಬೇಕು ಎಂದು ಮಾರ್ಗದರ್ಶನ ನೀಡುವ ಉದ್ದೇಶದಿಂದಲೇ ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪತಿಷ್ಠಾನವು ಈ ಶಿಕ್ಷಕರ ಕೈಪಿಡಿಯನ್ನು ಹೊರತಂದಿದೆ. ಕೇವಲ ಕೈಪಿಡಿಗಳ ಸಹಾಯದಿಂದ ಶಿಕ್ಷಕರು ಇದನ್ನೆಲ್ಲಾ ಸಾಧಿಸಿ ಪೂರೈಸಲು ಸಾಧ್ಯವಿಲ್ಲ ಎಂಬುದನ್ನು ಕೂಡ ನಾವು ಅರಿತಿದ್ದೇವೆ.

ಇದಕ್ಕೆ ಅಗತ್ಯವಿರುವ ತರಬೇತಿಯನ್ನು ಶಿಕ್ಷಕರು ಸ್ವತ: ಪಡೆದು ತಮ್ಮ ದೃಷ್ಟಿಯನ್ನು ಈ ಉದಾತ್ತ ಧ್ಯೇಯದೆಡೆ ಹರಿಸಬೇಕು. ಮೌಲ್ಯಾಧಾರಿತ ಶಿಕ್ಷಣವನ್ನು ಶಾಲೆಗಳಲ್ಲಿ ಪ್ರತ್ಯೇಖವಾಗಿ ಕಲಿಸಬೇಕಾದ ಒಂದು ವಿಷಯವನ್ನಾಗಿ ನಾವು ಪರಿಗಣಿಸುವುದಿಲ್ಲ. ಸಾಮಾನ್ಯವಾಗಿ ಇತರ ಪಠ್ಯಗಳನ್ನು ಬೋಧಿಸುವುದರ ಜೊತೆಜೊತೆಯಲ್ಲಿಯೇ ಮೌಲ್ಯಗಳನ್ನು ಕೂಡ ಬೇರೂರಿಸಬೇಕು.

ಈ ನಿಟ್ಟಿನಲ್ಲಿ ಇದು ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನದ ಮೊಟ್ಟ ಮೊದಲ ಪ್ರಯತ್ನ. ಈ ಕ್ಷೇತ್ರದಲ್ಲಿ ಗಳಿಸಿದ ಅನುಭವಗಳ ಆಧಾರದ ಮೇಲೆ ನಾವು ಈ ಕೈಪಿಡಿಯ ವ್ಯಾಪ್ತಿಯನ್ನು ಮುಂದೆ ಮಾರ್ಪಡಿಸಿ ವಿಸ್ತರಿಸಬಹುದು.

ಶಿಕ್ಷಕರಿಗೆ ತರಬೇತಿ ನೀಡುವ ಒಂದು ಭಾಗವಾಗಿ ಈ ಶಿಕ್ಷಕರ ಕೈಪಿಡಿಯನ್ನು ಎಲ್ಲಾ ರಾಜ್ಯಸರ್ಕಾರಗಳು ಹಾಗು ಫ್ರೌಢಶಿಕ್ಷಣ ಮಂಡಳಿಯು ಅಂಗೀಕರಿಸುತ್ತದೆ ಎಂದು ನಾನು ಆಶಿಸುತ್ತೇನೆ.

(ಡಾ. ಇ. ಶ್ರೀಧರನ್)

ಅಧ್ಯಕ್ಷರು

# 3. ಕೈಪಿಡಿ – ಒಂದು ಪರಿಚಯ

- ಮುಖ್ಯವಾಗಿ ಶಿಕ್ಷಕರನ್ನು ಗುರಿಯಾಗಿರಿಸಿಕೊಂಡ ಈ ಕೈಪಿಡಿಯು ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ವ್ಯಾಪಕವಾದ ಮಾರ್ಗಸೂಚಿಯನ್ನು ಒದಗಿಸುತ್ತದೆ.
- ಶಿಕ್ಷಕರಿಗೆ ಹಾಗೂ ಶಿಕ್ಷಣತಜ್ಞರಿಗೆ ಮೌಲ್ಯಾಧಾರಿತ ಶಿಕ್ಷಣಕ್ಷೇತ್ರದಲ್ಲಿ ಈ ಕೈಪಿಡಿಯು ಒಂದು ಪ್ರಮುಖ ಸಾಧನವಾಗಿದೆ. ಇದನ್ನು ಶಿಕ್ಷಕರ ತರಬೇತಿಗೂ ಕೂಡ ಸಾಮಾನ್ಯವಾಗಿ ಬಳಸಬಹುದಾಗಿದೆ.
- ನಿರ್ದಿಷ್ಟವಾದ ಅಗತ್ಯತೆಗಳಿಗೆ ಅನುಗುಣವಾಗಿ ಇದನ್ನು ಸಿದ್ಧಪಡಿಸಲಾಗಿದ್ದು, ಮೌಲ್ಯಾಧಾರಿತ ಶಿಕ್ಷಣಕ್ಕೆ ಅವಶ್ಯವಿರುವ ವಿಶೇಷವಾದ ಜ್ಞಾನ, ಕೌಶಲತೆ ಹಾಗು ಸಾಧನಗಳನ್ನು ಒದಗಿಸುತ್ತದೆ.
- ಈ ಕೈಪಿಡಿಯಲ್ಲಿ ಒಳಗೊಂಡಿರುವ ಪ್ರತಿಯೊಂದು ಮೌಲ್ಯಗಳು ಆ ಮೌಲ್ಯವನ್ನು ಕಲಿಸಲು ಬಳಸಬೇಕಾದ ವಿಧಾನವನ್ನು ವಿವರಿಸುತ್ತದೆ.
- ಈ ಕೆಳಕಂಡ ವಿಧಾನದಲ್ಲಿ ಈ ಕೈಪಿಡಿಯನ್ನು ರೂಪಿಸಲಾಗಿದೆ. ಸಂಕ್ಷಿಪ್ತ ಪರಿಚಯದ ನಂತರ ಮೌಲ್ಯಾಧಾರಿತಶಿಕ್ಷಣದ ಕೆಲವು ಪರಿಕಲ್ಪನೆಗಳು ಮತ್ತು ವಿಧಾನಗಳೊಂದಿಗೆ ಶಿಕ್ಷಕರನ್ನು ಪರಿಚಿತಗೊಳಿಸಲಾಗುತ್ತದೆ.
- ಸೈದ್ಧಾಂತಿಕ ಹಿನ್ನಲೆಯು ಸಂಕ್ಷಿಪ್ತವಾಗಿದ್ದು ಮಾಹಿತಿಪೂರ್ಣವಾಗಿರುತ್ತದೆ.
- ಮೌಲ್ಯಾಧಾರಿತಶಿಕ್ಷಣದಲ್ಲಿ ಬಳಸಬಹುದಾದ ಹಲವು ವಿಧಾನಗಳ ವಿವರಣೆಗಳು ಹಾಗೂ ನಿದರ್ಶನಗಳನ್ನು ಈ ಕೈಪಿಡಿಯ ತಿರುಳು ಒಳಗೊಂಡಿದ್ದು ಅವುಗಳನ್ನು ಸುಲಭವಾಗಿ ಅಭ್ಯಸಿಸಬಹುದಾಗಿದೆ. ಶೈಕ್ಷಣಿಕಸಾಮಗ್ರಿಗಳು ಮತ್ತು ಸಾಧನಗಳನ್ನು ತಾವೆ ಸ್ವತ: ಅಭಿವೃದ್ಧಿಪಡಿಸಿಕೊಳ್ಳಲು ಅಗತ್ಯವಿರುವ ಸಂಕ್ಷಿಪ್ತ ಸಲಹೆಗಳೊಂದಿಗೆ ಈ ಕೈಪಿಡಿಯು ಮುಕ್ತಾಯವಾಗುತ್ತದೆ.

# 3.1 ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ ಮತ್ತು ಮೌಲ್ಯಾಧಾರಿತಶಿಕ್ಷಣ ಕಾರ್ಯಕ್ರಮದ ಬಗ್ಗೆ ಒಂದು ಪರಿಚಯ

ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಸಾಮಾಜಿಕಮೌಲ್ಯಗಳು, ನೈತಿಕತೆ ಮತ್ತು ಜವಾಬ್ದಾರಿಯುತಜೀವನವನ್ನು ಬೆಳೆಸುವಲ್ಲಿ ಭಾರತೀಯ ಗುಣಮಟ್ಟವನ್ನು ನಿಗಧಿಪಡಿಸುವ ಸಂಸ್ಥೆಯಾಗಿದೆ. ಮೆಟ್ರೊ – ಮ್ಯಾನ್ ಎಂದೇ ಪ್ರಸಿದ್ಧರಾಗಿರುವ ಡಾ. ಈ. ಶ್ರೀಧರನ್‌ರವರು ಈ ಸಂಸ್ಥೆಯ ಸ್ಥಾಪಕರಾಗಿದ್ದು ಅದರ ಅಧ್ಯಕ್ಷರು ಕೂಡ ಆಗಿರುತ್ತಾರೆ. 2008 ರಲ್ಲಿ ನೋಂದಾಯಿಸಲ್ಪಟ್ಟ ಈ ಸಂಸ್ಥೆಯ ಏಕೈಕ ಗುರಿಯು ರಾಷ್ಟ್ರೀಯಮೌಲ್ಯಗಳ ಪುನಸ್ಥಾಪನೆ ಹಾಗೂ ಜೀವನದ ಎಲ್ಲಾ ಹಂತಗಳಲ್ಲಿಯೂ ನೈತಿಕತೆಯನ್ನು ಮತ್ತು ಸಮಗ್ರತೆಗಳನ್ನು ಪೋಷಿಸುವುದಾಗಿದೆ.

ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಈಗಾಗಲೇ ರಾಷ್ಟ್ರಧ್ವಜ, ರಾಷ್ಟ್ರೀಯ ಧ್ಯೇಯವಾಕ್ಯ–'ಸತ್ಯಮೇವಜಯತೆ'ಗಳಲ್ಲಿ ಪ್ರತಿಪಾದಿತವಾಗಿರುವ ರಾಷ್ಟ್ರೀಯ ಮೌಲ್ಯಗಳನ್ನು ಹಾಗೂ ಭಾರತ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ಕರ್ತವ್ಯಗಳನ್ನು ಬೆಂಬಲಿಸುತ್ತದೆ. ಇವುಗಳಲ್ಲಿ ಕೆಲವು ಸನಾತನವೂ ಸಾರ್ವಕಾಲಿಕವೂ ಆದವುಗಳಾಗಿವೆ: ಸತ್ಯಸಂಧತೆ, ಅಹಿಂಸೆ, ನೀತಿವಂತನಡವಳಿಕೆ ಹಾಗು ಭೂಮಿಯ ನೈಸರ್ಗಿಕ ಸಮೃದ್ಧಿ ಹಾಗು ಜೀವಶಕ್ತಿಯ ಸಂರಕ್ಷಣೆ ಇತ್ಯಾದಿ. ಇನ್ನಿತರ ಸಮಕಾಲೀನ ಮೌಲ್ಯಗಳನ್ನು ಕೂಡ ಸಂಸ್ಥೆಯು ಉತ್ತೇಜಿಸುತ್ತದೆ. ಅವುಗಳು: ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸೂಕ್ಷ್ಮತೆ, ತಂಡದಲ್ಲಿ ಕೆಲಸ, ಶಿಸ್ತು, ಜವಾಬ್ದಾರಿ ಮತ್ತು ಆತ್ಮಗೌರವದ ಜೊತೆ ಇತರರ ಬಗ್ಗೆ ಗೌರವ ಭಾವನೆ.

ನಮ್ಮ ಪರಿಸರವಿಜ್ಞಾನ, ಸಹನಾಗರಿಕರು, ನೈರ್ಮಲ್ಯ ಮತ್ತು ಸ್ವಚ್ಛತೆ, ಶಿಸ್ತು, ರಾಷ್ಟ್ರಪ್ರೇಮ ಇವುಗಳಿಗೆ ನಮ್ಮ ವಿದ್ಯಾರ್ಥಿಸಮುದಾಯವನ್ನು ಸಂವೇದನಾಶೀಲಗೊಳಿಸುವುದು ಈ ಸಂಸ್ಥೆಯ ಪ್ರಾಥಮಿಕ ಉದ್ದೇಶವಾಗಿದೆ. ಮೌಲ್ಯಾಧಾರಿತ ಬದುಕಿಗೆ ಅನುಕೂಲವಾಗುವಂತಹ ಶಿಕ್ಷಣಪರಿಸರವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮೌಲ್ಯಾಧಾರಿತ ಶಿಕ್ಷಣಕಾರ್ಯಕ್ರಮವು ಪ್ರಯತ್ನಿಸುತ್ತಿದೆ.

ಇದು ಎಲ್ಲಾ ಭಾಗಿದಾರರು ರೂಢಿಸಿಕೊಳ್ಳಬೇಕಾದ ಮೌಲ್ಯಗಳನ್ನು ಗುರುತಿಸುತ್ತದೆ ಹಾಗು ಮೌಲ್ಯಾಧಾರಿತ ಜೀವನ ನಿರ್ವಹಣೆಗೆ ಅಗತ್ಯವಾದ ಪರಿಸರವನ್ನು ಒಟ್ಟಾರೆಯಾಗಿ ಸೃಷ್ಟಿಸುತ್ತದೆ. ಈ ರೀತಿಯಾಗಿ ಪ್ರತಿಯೊಂದು ಪರಿಸರ ವ್ಯವಸ್ಥೆಯನ್ನು ಒಂದು ಜೀವಂತ ಮೌಲ್ಯಾಧಾರಿತ ವ್ಯವಸ್ಥೆಯುನ್ನಾಗಿಸಲು ಪ್ರೋತ್ಸಾಹಿಸುತ್ತದೆ.

ನಮ್ಮ ದೇಶದ ಶಾಲೆಗಳಲ್ಲಿ ಮೌಲ್ಯಾಧಾರಿತಶಿಕ್ಷಣ ಪದ್ಧತಿಯನ್ನು ಸೃಷ್ಟಿಸುವುದನ್ನೇ ತನ್ನ ಪ್ರಮುಖ ಗುರಿಯನ್ನಾಗಿರಿಸಿಕೊಂಡ ಈ ಸಂಸ್ಥೆಯು ಹಲವು ಪಾಲುದಾರರೊಡಗೂಡಿ ಕಳೆದ ಎಂಟು ವರ್ಷಗಳಿಂದ ಹಲವು ಚರ್ಚಾಸಭೆಗಳು, ಕಾರ್ಯಾಗಾರಗಳು ಮತ್ತು ಗೋಷ್ಠಿಗಳನ್ನು ನಡೆಸುತ್ತಾ ಬಂದಿದ್ದು, ಶಾಲೆಗಳಲ್ಲಿ ಮೌಲ್ಯಗಳನ್ನು ಬಿತ್ತಲು ಒಂದು ಸದೃಢವಾದ ಯೋಜನೆಯನ್ನು ಅಭಿವೃದ್ಧಿಪಡಿಸಿದೆ.

- ಈ ಸಂಸ್ಥೆಯು ಈಗಾಗಲೇ ಮೌಲ್ಯಾಧಾರಿತಶಿಕ್ಷಣ ಕುರಿತ ಒಂದು ಪ್ರಾಯೋಗಿಕಯೋಜನೆಯನ್ನು ದೆಹಲಿಯ ನಾಲ್ಕು ಸರಕಾರಿ ಶಾಲೆಗಳಲ್ಲಿ , ಈ ಕೆಳಕಂಡ ಅಂಶಗಳನ್ನು ಒಳಗೊಂಡ ಶಿಕ್ಷಣ ನಿರ್ದೇಶನಾಲಯದ ಅನುಮತಿಯೊಂದಿಗೆ ಯಶಸ್ವಿಯಾಗಿ ಸಿದ್ಧಪಡಿಸಿದೆ.
- ತಮ್ಮ ಬೋಧನೆಯಲ್ಲಿ ಮೌಲ್ಯಗಳನ್ನು ಪ್ರತಿಪಾದಿಸಿ, ಅವುಗಳನ್ನು ಮಕ್ಕಳಲ್ಲಿ ಅಂತರ್ಗತಗೊಳಿಸುವಂತೆ ಶಿಕ್ಷಕರನ್ನು ಉತ್ತೇಜಿಸಿ ಪ್ರೇರೇಪಿಸುವಂತಹ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು.
- ಕಥಾನಿರೂಪಣೆ, ವಿವಿಧಪಾತ್ರನಿರ್ವಹಣೆ, ಪ್ರಕರಣಗಳ ಅಧ್ಯಯನ ಹಾಗು ಕ್ರೀಡೆಗಳಂತಹ ಮಕ್ಕಳ ಕಾರ್ಯಚಟುವಟಿಕೆಗಳ ಸಹಾಯದಿಂದ ಉತ್ತಮಮೌಲ್ಯಗಳ ಪ್ರತಿಪಾದನೆ.
- ಶಾಲಾಮಕ್ಕಳಸಮುದಾಯ, ಅವರ ಪೋಷಕರು ಹಾಗೂ ಶಿಕ್ಷಕರು ಎಲ್ಲರೂ ನಿರಂತರವಾಗಿ ಭಾಗಿಗಳಾಗುವಂತಹ ಸಮುದಾಯ ಆಧಾರಿತ ಕಾರ್ಯಚಟುವಟಿಕೆಗಳನ್ನು ನಡೆಸುವುದರಿಂದ ಎಲ್ಲಾ ಭಾಗಿದಾರರು ಈ ಉತ್ತಮಮೌಲ್ಯಗಳನ್ನು ಎತ್ತಿಹಿಡಿಯುವುದರಲ್ಲಿ ಭಾಗಿಗಳಾಗಿ ಸಾಮೂಹಿಕ ಒಡೆತನ ಉಂಟಾಗುವಂತೆ ಮಾಡುವುದು.

## 3.2 ಮೌಲ್ಯಾಧಾರಿತ ಶಿಕ್ಷಣದಲ್ಲಿ ಸಾಮಾನ್ಯಪಠ್ಯಕ್ರಮದ ಅವಶ್ಯಕತೆ

ಶಿಕ್ಷಣವು ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಭಿವೃದ್ಧಿಗೊಳಿಸುವ ಒಂದು ಪ್ರಮುಖ ಪ್ರಕ್ರಿಯೆಯಾಗಿದ್ದು, ಅದು ಆ ವ್ಯಕ್ತಿಯು ಬೆಳೆಯುವ ಸಮಾಜದೊಂದಿಗೆ ಸದಾ ಬೆಸೆದುಕೊಂಡಿರುತ್ತದೆ. ನಾಣ್ಯದ ಎರಡುಮುಖಗಳಂತೆ ಇದು ಕೂಡ ವೈಯಕ್ತಿಕ ಹಾಗು ಸಾಮಾಜಿಕ ಆಯಾಮಗಳೆರಡನ್ನೂ ಹೊಂದಿದೆ. ಮಹಾತ್ಮ ಗಾಂಧಿಯವರ ಪ್ರಕಾರ ಒಬ್ಬ ವ್ಯಕ್ತಿಯ ಸರ್ವತೋಮುಖ ವಿಕಾಸದಲ್ಲಿ ಉತ್ತಮಮೌಲ್ಯಗಳು ಬೇರ್ಪಡಿಸಲಾರದಂತಹ ಅಂಶಗಳಾಗಿವೆ ಹಾಗು ಪ್ರತಿಯೊಂದು ಮೌಲಿಕ ಅಂಶವು ಒಬ್ಬವ್ಯಕ್ತಿಯ ಒಂದು ವಿಶಿಷ್ಟ ಜೀವನವಿಧಾನವಾಗಿದ್ದು, ಅದು ಅವನನ್ನು ಇತರರಿಂದ ಪ್ರತ್ಯೇಕಿಸುತ್ತದೆ. ಒಬ್ಬ ವ್ಯಕ್ತಿಯ ವಿಶೇಷ ಲಕ್ಷಣವನ್ನು ನಿರೂಪಿಸುವ ವ್ಯಕ್ತಿಯವ್ಯಕ್ತಿತ್ವವು ಸ್ವಯಂ ಅಭಿವೃದ್ಧಿಯ ಸೂಕ್ತವಾದ ಮಾರ್ಗವನ್ನು ಕಂಡುಕೊಳ್ಳುತ್ತದೆ.

ಇಂದು ನಮ್ಮ ಶಾಲೆಗಳು ಕೇವಲ ಅಂಕಗಳಿಸುವಂತಹ ಶೈಕ್ಷಣಿಕ ಸಾಧನೆಗಳನ್ನು ಮಾತ್ರ ಮಕ್ಕಳಿಗೆ ತಲುಪಿಸುವ ಕಡೆ ಗಮನ ಕೇಂದ್ರೀಕರಿಸಿದೆ. ಮಕ್ಕಳ ವೈಯಕ್ತಿಕ ನಡವಳಿಕೆಗಳತ್ತ ಹೆಚ್ಚು ಪ್ರಾಮುಖ್ಯತೆಕೊಡುವಲ್ಲಿ ವಿಫಲವಾಗಿವೆ. ಮಕ್ಕಳಿಗೆ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ಇಂದಿನ ನಮ್ಮ ಯುವಪೀಳಿಗೆಯ ಮನೋಭಾವವು ನಮ್ಮನ್ನು ಮತ್ತೆ ಮತ್ತೆ ಆಲೋಚಿಸುವಂತೆ ಮಾಡಿದೆ.

ಆದ್ದರಿಂದ, ಮಕ್ಕಳಲ್ಲಿ ಅವರದೇ ಆದ ನಿರ್ದಿಷ್ಟ ವ್ಯಕ್ತಿತ್ವವು ರೂಪುಗೊಳ್ಳುತ್ತಿರುವ ಎಳೆಯ ವಯಸ್ಸಿನಲ್ಲಿಯೇ ಉತ್ತಮಮೌಲ್ಯಗಳನ್ನು ಅವರ ಮನಸ್ಸಿನಲ್ಲಿ ನೆಲೆಗೊಳಿಸಬೇಕು. ಈ ಉತ್ತಮಮೌಲ್ಯಗಳನ್ನು ಮಕ್ಕಳು ತಮ್ಮ ಹದಿಹರೆಯದಲ್ಲೂ ಕೂಡ ಪೋಷಿಸಿ, ಬೆಳೆಸಿಕೊಂಡುಬಂದಲ್ಲಿ, ಯುವಜನತೆಯು  ತಮ್ಮ ಜೊತೆಗೆ ಇತರರನ್ನು ಕೂಡ ಮೆಚ್ಚುವುದನ್ನು ಕಲಿಯುತ್ತಾರೆ. ಜೊತೆಗೆ, ತಮ್ಮ ಸ್ವಂತಕಾರ್ಯಗಳ ಜೊತೆ ಜಗತ್ತಿನ ಆಗುಹೋಗುಗಳ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುವುದನ್ನು ಕೂಡ ಕಲಿಯುತ್ತಾರೆ.

ಎಲ್ಲರಲ್ಲಿನ ಮೌಲ್ಯಾಧಾರಿತ ವ್ಯವಸ್ಥೆಯನ್ನು ಉತ್ತಮಗೊಳಿಸಿ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಮೌಲ್ಯಾಧಾರಿತಶಿಕ್ಷಣವು ಪ್ರಮುಖಪಾತ್ರವನ್ನು ವಹಿಸುತ್ತದೆ. ದಿನದಿನಕ್ಕೆ ಹೆಚ್ಚುತ್ತಲಿರುವ ಹಿಂಸಾತ್ಮಕ ಚಟುವಟಿಕೆಗಳು, ನಡವಳಿಕೆಯಲ್ಲಿನ ಅಸ್ವಸ್ಥತೆ, ಸಮಾಜದಲ್ಲಿನ ಏಕತೆಯ ಕೊರತೆ ಇತ್ಯಾದಿಗಳನ್ನು ನಾವು ಕಂಡಾಗ, ಮೌಲ್ಯಾಧಾರಿತ

ಶಿಕ್ಷಣದ ಪ್ರಾಮುಖ್ಯತೆಯು ಮಕ್ಕಳಾದಿಯಾಗಿ ಪೋಷಕರು ಮತ್ತು ಶಿಕ್ಷಕರಿಗೆಲ್ಲರಿಗೂ ಅತ್ಯಗತ್ಯವಾಗಿ ತೋರುತ್ತಿದೆ. ಆದ್ದರಿಂದ, ಮೌಲ್ಯಾಧಾರಿತಶಿಕ್ಷಣದ ಮೂಲಕ ನಮ್ಮ ಶೈಕ್ಷಣಿಕವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸುವ ಕಾರ್ಯದ ತುರ್ತು ಅವಶ್ಯಕತೆಯಿದೆ.

ಪರಸ್ಪರ ಸಂಬಂಧಗಳು, ನಮ್ಮ ನಡವಳಿಕೆಗಳು, ನಮ್ಮ ಆಯ್ಕೆಗಳು ಮತ್ತು ನಮ್ಮ ನಿಜವಾದ ಅಸ್ತಿತ್ವದ ಪ್ರಜ್ಞೆಯನ್ನು ಈ ಮೌಲ್ಯಗಳು ಸಕಾರಾತ್ಮಕವಾಗಿ ರೂಪುಗೊಳಿಸುತ್ತವೆ. ಹೆಚ್ಚು ಹೆಚ್ಚಿನ ಸಕಾರಾತ್ಮಕ ಮೌಲ್ಯಗಳು ಹೆಚ್ಚಿನ ಸಕಾರಾತ್ಮಕ ಕಾರ್ಯಗಳಿಗೆ ಕಾರಣವಾಗುತ್ತವೆ. ಈ ಕಾರಣದಿಂದಲೇ, ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಮೌಲ್ಯಶಿಕ್ಷಣಗಳ ಅಗತ್ಯತೆಯು ಮಹತ್ವವಾಗಿದೆ ಏಕೆಂದರೆ, ವಿದ್ಯಾರ್ಥಿಯನ್ನು ಒಬ್ಬ ಯಶಸ್ವಿ ಪ್ರಜೆಯನ್ನಾಗಿಸುವಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ.

# 4. ಬೋಧಕರಿಗೆ ಸೂಚನೆಗಳು

**ಪಠಣ: ಈ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ, ಅದರ ಉದ್ದೇಶವನ್ನು ಅರ್ಥಮಾಡಿಕೊಳ್ಳಿ. ಮಕ್ಕಳ ಸರ್ವತೋಮುಖ ವಿಕಾಸವೇ ಕೇಂದ್ರಿಕೃತವಾದ, ಅವರ ಅಭಿವೃದ್ಧಿಗೆ ಸೂಕ್ತವಾದ ಹಾಗೂ ಸಕ್ರಿಯ ಕಲಿಕೆಯವಿಧಾನವನ್ನು ಅರ್ಥಮಾಡಿಕೊಳ್ಳುವ ಅತ್ಯಗತ್ಯತೆ ಶಿಕ್ಷಕರಿಗಿದೆ.**

**ಟಿಪ್ಪಣಿಗಳನ್ನು ಮಾಡಿಕೊಳ್ಳುವುದು: ಶಿಕ್ಷಕರು ತಮ್ಮ ತರಗತಿಗಳ ಕಾರ್ಯನಿರ್ವಹಣೆ ಹಾಗೂ ಪಠ್ಯಗಳ ಬೋಧನೆಗನುಗುಣವಾಗಿ ಮುಂಚಿತವಾಗಿಯೇ ಟಿಪ್ಪಣಿಗಳನ್ನು ಮಾಡಿಕೊಳ್ಳುವ ಅಗತ್ಯತೆಯಿದ್ದು, ಈ ಕೈಪಿಡಿಯ ಓದು ಅದರಲ್ಲಿ ಅವರಿಗೆ ಸಹಾಯವಾಗುತ್ತದೆ.**

**ಸಿದ್ಧತೆ: ಪ್ರತಿಯೊಂದು ವಿಷಯಾಧಾರಿತ ಯೋಜನೆಯು ಅದಕ್ಕೆ ಅಗತ್ಯವಿರುವ ಪಠ್ಯಸಾಮಗ್ರಿಗಳ ವಿವರಗಳನ್ನು ಕೂಡಾ ನೀಡುತ್ತದೆ. ಇದರಿಂದ ವಿವಿಧ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವ ಸಾಮಗ್ರಿಗಳೊಡನೆ ಶಿಕ್ಷಕರು ಮುಂಚಿತವಾಗಿಯೇ ಸಿದ್ಧರಿರಬಹುದು.**

**ಅವಲೋಕನ: ಶಿಕ್ಷಕರು ತಮ್ಮ ನಡವಳಿಕೆಯನ್ನು ನಿಯಮಿತವಾಗಿ ದಿನ/ವಾರಕ್ಕೊಮ್ಮೆ ಅವಲೋಕಿಸಿಕೊಳ್ಳುವುದು ಬಹುಮುಖ್ಯ ಹಾಗೂ ಒಬ್ಬ ಸಾಧಕರಾಗಿ/ಮಾದರಿ ಶಿಕ್ಷಕರಾಗಿ ತಮ್ಮದೇ ಆದ ಪ್ರಗತಿಯನ್ನು ಕುರಿತು ಟಿಪ್ಪಣಿಗಳನ್ನು ಸಹ ಮಾಡುವುದು ಸೂಕ್ತ.**

# 5. ರಾಷ್ಟ್ರೀಯ ಶಾಶ್ವತ ಮೌಲ್ಯಗಳು

ನಮ್ಮ ಶೈಕ್ಷಣಿಕ ವ್ಯವಸ್ಥೆಯು ಒಂದು ತಿರುವಿನ ಘಟ್ಟದಲ್ಲಿ ಬಂದು ನಿಂತಿದೆ. ಭಾರತದಲ್ಲಿ ಇಂದು ಶಿಕ್ಷಣವನ್ನು ಸಾಮಾಜಿಕ ಮತ್ತು ಆರ್ಥಿಕಶ್ರೇಣಿಯ ತುದಿಗೆ ಏರುವ ಸಾಧನವನ್ನಾಗಿ ನೋಡಲಾಗುತ್ತಿದೆ. ನಮ್ಮ ಶಿಕ್ಷಣವ್ಯವಸ್ಥೆಯು ವ್ಯಕ್ತಿಯ ವ್ಯಕ್ತಿತ್ವ ರಚನೆಗೆ ಹೆಚ್ಚು ಒತ್ತು ಕೊಡುತ್ತಿಲ್ಲ. ಹಾಗಾಗಿ ಸುಭದ್ರ ರಾಷ್ಟ್ರವನ್ನು ಕಟ್ಟುವ ಹುರುಪು ಇರುವಂತಹ ನಿಷ್ಠಾವಂತ ಮತ್ತು ಬದ್ಧತೆಹೊಂದಿರುವ ನಾಗರಿಕರ ಅಭಾವ ಉಂಟಾಗಿದೆ.

ಈ ಶಿಕ್ಷಕರ ಕೈಪಿಡಿಯು ರಾಷ್ಟ್ರಧ್ವಜ, ರಾಷ್ಟ್ರೀಯಧ್ಯೇಯವಾಕ್ಯ- 'ಸತ್ಯಮೇವಜಯತೆ'ಗಳಲ್ಲಿ ಈಗಾಗಲೇ ಪ್ರತಿಪಾದಿತವಾಗಿರುವ ರಾಷ್ಟ್ರೀಯಮೌಲ್ಯಗಳನ್ನು ಹಾಗೂ ಭಾರತಸಂವಿಧಾನದಲ್ಲಿ ಪ್ರತಿಪಾದಿತವಾಗಿರುವ ಮೂಲಭೂತಕರ್ತವ್ಯಗಳನ್ನು ಬೆಂಬಲಿಸುತ್ತದೆ. ಇವುಗಳಲ್ಲಿ ಕೆಲವು ಸನಾತನವೂ ಹಾಗು ಸಾರ್ವಕಾಲಿಕವೂ ಆದವುಗಳಾಗಿವೆ: ಸತ್ಯಸಂಧತೆ, ಅಹಿಂಸೆ, ನೀತಿವಂತನಡವಳಿಕೆ ಹಾಗು ಭೂಮಿಯ ನೈಸರ್ಗಿಕ ಸಮೃದ್ಧಿ ಹಾಗು ಜೀವಶಕ್ತಿಯ ಸಂರಕ್ಷಣೆ ಇತ್ಯಾದಿ.

ಮೌಲ್ಯಾಧಾರಿತ ಶಿಕ್ಷಣ ಪಠ್ಯಕ್ರಮದ ಮೂಲಕ ಈ ಕೆಳಗೆ ಕೊಟ್ಟಿರುವ ಮೌಲ್ಯಗಳನ್ನು ಕ್ರಮೇಣವಾಗಿ ಶಾಲಶಿಕ್ಷಣ ವ್ಯವಸ್ಥೆಯೊಂದಿಗೆ ಸೇರಿಸಲಾಗುವುದು.

- ಸಮಗ್ರತೆ
- ಸುಸ್ಥಿರತೆ
- ರಾಷ್ಟ್ರಪ್ರೇಮ
- ಕ್ಷಮಾಶೀಲತೆ
- ಸ್ಥೈರ್ಯ
- ಪ್ರೀತಿ
- ಗೌರವ
- ಅಹಿಂಸೆ

* ಅಂತರ್ಗತತೆ
* ಜವಾಬ್ದಾರಿ
* ಸಹಿಷ್ಣುತೆ
* ಸೃಜನಶೀಲತೆ
* ಪಾರದರ್ಶಕತೆ
* ಶಾಂತಿ
* ಸಹಬಾಳ್ವೆ

## 5.1 ರಾಷ್ಟ್ರೀಯ ಧ್ಯೇಯವಾಕ್ಯ : ಸತ್ಯಮೇವ ಜಯತೆ



- 'ಸತ್ಯಮೇಯ ಜಯತೆ' – ಇದು ನಮ್ಮ ರಾಷ್ಟ್ರೀಯ ಧ್ಯೇಯವಾಕ್ಯ.
- ಈ ಧ್ಯೇಯವಾಕ್ಯವನ್ನು ಉಪನಿಷತ್ತಿನಿಂದ ಅಳವಡಿಸಿಕೊಳ್ಳಲಾಗಿದೆ.
- ಜನವರಿ 26, 1950 ರಂದು ಅಳವಡಿಸಿಕೊಳ್ಳಲಾದ ಈ ಧ್ಯೇಯವಾಕ್ಯವನ್ನು ನಮ್ಮ ರಾಷ್ಟ್ರಲಾಂಛನದಡಿ ಸಂಸ್ಕೃತ ಭಾಷೆಯಲ್ಲಿ ಕೊರೆಯಲಾಗಿದೆ.
- ಈ 'ಸತ್ಯಮೇವ ಜಯತೆ' ಧ್ಯೇಯವಾಕ್ಯವನ್ನು ಎಲ್ಲಾ ಭಾರತೀಯ ನೋಟುಗಳ ಒಂದು ಬದಿಯಲ್ಲಿ ಕಾಣಬಹುದು.
- ಭಾರತದ ಸುಪ್ರಸಿದ್ಧ ಶಿಕ್ಷಣ ತಜ್ಞ, ಬನಾರಸ್‌ಹಿಂದೂವಿಶ್ವವಿದ್ಯಾಲಯದ ಸ್ಥಾಪಕರೂ ಮತ್ತು ಸ್ವಾತಂತ್ರ್ಯಹೋರಾಟಗಾರರೂ ಆದ ಪಂಡಿತ ಮದನ್ ಮೋಹನ್ ಮಾಳವೀಯ ಅವರು 1918 ರ ಸ್ವಾತಂತ್ರ್ಯಸಂಗ್ರಾಮದ ಸಂದರ್ಭದಲ್ಲಿ ಈ ಘೋಷಣೆಯನ್ನು ಜನಪ್ರಿಯಗೊಳಿಸಿದರು.

# 5.1.1 ಪ್ರಾಮಾಣಿಕತೆ ಮತ್ತು ಸತ್ಯಸಂಧತೆ

ಯಾವುದೇ ಪರಿಣಾಮವನ್ನೆದುರಿಸಬೇಕಿದ್ದರೂ ಸರಿ, ಸತ್ಯವನ್ನೇ ಹೇಳುವುದು ಪ್ರಾಮಾಣಿಕತೆಯ ಪ್ರಮುಖ ಲಕ್ಷಣ. ಒಬ್ಬ ಪ್ರಾಮಾಣಿಕವ್ಯಕ್ತಿಯು ಮಾತಿಗೆತಪ್ಪದೆ ನಡೆದುಕೊಳ್ಳುತ್ತಾನೆ.

ಪ್ರಾಮಾಣಿಕತೆಯೆಂದರೆ ಕೇವಲ ಸತ್ಯವನ್ನು ಮಾತ್ರ ನುಡಿಯುವುದಲ್ಲದೇ ಅದಕ್ಕಿಂತಲೂ ಹೆಚ್ಚಿನ ಅಂಶಗಳನ್ನು ಒಳಗೊಂಡಿದೆ. ಸಮಸ್ಯೆಗಳಿಗೆ ಸಿಲುಕುವ ಭಯದಲ್ಲಿ ಸತ್ಯವನ್ನು ಮುಚ್ಚಿಟ್ಟಲ್ಲಿ, ನೀವು ಪ್ರಾಮಣಿಕರಲ್ಲವೆಂದು ಅರ್ಥೈಸಬಹುದು. ಆದ್ದರಿಂದ ಪ್ರಾಮಾಣಿಕತೆಯೆಂದರೆ ಸತ್ಯಹೇಳುವುದರ ಜೊತೆಗೆ ಅದರಂತೆ ನಡೆದುಕೊಳ್ಳಬೇಕು ಕೂಡ.

ಪ್ರಾಮಾಣಿಕತೆಯು ಒಬ್ಬ ವ್ಯಕ್ತಿಗೆ ಇನ್ನಿತರರ ವಿಶ್ವಾಸವನ್ನು ಗಳಿಸುವಲ್ಲಿ ನೆರವಾಗಿ ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತದೆ. ಪ್ರಾಮಾಣಿಕರಾಗಿರುವುದು ನಮಗೆ ನಿಜಜೀವನದಲ್ಲಿ ಬಹಳ ಅನುಕೂಲಕಾರಿಯಾದುದು. ಇದು ಒಬ್ಬರು ಕೊಳ್ಳಬಹುದಾದ ಅಥವಾ ಮಾರಟಮಾಡಬಹುದಾದ ವಸ್ತುವಲ್ಲ. ಇದು ಸತತ ಪರಿಶ್ರಮದಿಂದ ಒಲಿಸಿಕೊಳ್ಳಬಹುದಾದ ಒಂದು ಉತ್ತಮಅಭ್ಯಾಸ.

ಉದ್ದೇಶ :

- ಎಷ್ಟೇ ಕಷ್ಟವಾದರೂ ಸರಿಯಾದ ಕೆಲಸಗಳನ್ನೇ ಮಾಡುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಉತ್ತಮಚಾರಿತ್ರ್ಯವನ್ನು ಬೆಳೆಸುವುದು.
- ಸಕಾರಾತ್ಮಕ ನಡವಳಿಕೆಯನ್ನು ಪೋಷಿಸುವುದು.

ವಿಧಾನ : ಕಥಾನಿರೂಪಣೆ, ಲಘುನಾಟಕ ಮತ್ತು ಚರ್ಚೆಗಳು, ಕ್ರೀಡೆಗಳು, ಕವನವಾಚನ

ಸಮಯ : 40 ನಿಮಿಷಗಳು

## ಚಟುವಟಿಕೆ 1: ಕತೆ – ಪ್ರಾಮಾಣಿಕ ರೈತ

ಒಂದಾನೊಂದು ಕಾಲದಲ್ಲಿ ಒಬ್ಬ ರೈತನು ತನ್ನ ಪತ್ನಿ ಹಾಗು ಏಳುಜನ ಮಕ್ಕಳೊಂದಿಗೆ ವಾಸಿಸುತ್ತಿದ್ದನು. ಬಡವನಾದರೂ ಬಹಳ ಪ್ರಾಮಾಣಿಕ ವ್ಯಕ್ತಿಯಾಗಿದ್ದನು. ಅವನಿಗಿದ್ದ ಸಣ್ಣಜಮೀನಿನಿಂದ ದೊರಕುವ ಸಣ್ಣಆದಾಯದಿಂದ ಅವನ ಜೀವನ ಸಾಗುತ್ತಿತ್ತು.

ಒಮ್ಮೆ ಅವನು ಹೊಲದಲ್ಲಿ ಅಡ್ಡಾಡುತ್ತಾ ತನ್ನ ಆರ್ಥಿಕಪರಿಸ್ಥಿತಿಯ ಬಗ್ಗೆ ಹಾಗು ತನ್ನ ಬೆಳೆಯುತ್ತಿರುವ ಮಕ್ಕಳವಿದ್ಯಾಭ್ಯಾಸವನ್ನು ಕುರಿತು ಆಲೋಚಿಸತೊಡಗಿದನು. ಹೆಚ್ಚುತ್ತಿರುವ ಕುಟುಂಬದ ಖರ್ಚು–ವೆಚ್ಚವು ಅವನನ್ನು ಚಿಂತೆಗೀಡುಮಾಡಿತು. ತನ್ನ ಕುಟುಂಬದ ಅಗತ್ಯತೆಗಳ ಪೂರೈಕೆಗೆ ಇನ್ನಷ್ಟು ಹಣವನ್ನು ಹೇಗೆ ಸಂಪಾದಿಸಬಹುದು ಎಂಬುದರಕುರಿತು ಆಲೋಚಿಸತೊಡಗಿದನು.

ಹೀಗೆ ಆಲೋಚಿಸುತ್ತಾ ಸಾಗುತ್ತಿದ್ದ ಅವನಿಗೆ ಇದ್ದಕ್ಕಿದ್ದಂತೆ ದಾರಿಯಲ್ಲಿ ಬಿದ್ದಿದ್ದ ಸಂಚಿಯೊಂದು ಕಾಣಿಸಿತು. ಯಾರೋ ಅದನ್ನು ದಾರಿಯಲ್ಲಿ ಬೀಳಿಸಿಕೊಂಡಿದ್ದರು. ಅದನ್ನು ಕೈಗೆ ತೆಗೆದುಕೊಂಡು ನೋಡಿದಾಗ ಅದರಲ್ಲಿ ಸಾಕಷ್ಟು ಹಣವಿದ್ದಿತು. ತಕ್ಷಣವೇ ಮನೆಗೆ ಬಂದ ಅವನು ಸಂಚಿಯನ್ನು ಹೆಂಡತಿಯಬಳಿ ಕೊಟ್ಟು ಅದನ್ನು ಜೋಪಾನವಾಗಿ ತೆಗೆದಿಡುವಂತೆ ಸೂಚಿಸಿದನು. ಹಣವನ್ನು ನೋಡಿದ ಅವನ ಹೆಂಡತಿಯು ದುರಾಸೆಯಿಂದ ಅದನ್ನು ಉಪಯೋಗಿಸುವಂತೆ ಗಂಡನಿಗೆ ಸೂಚಿಸಿದಳು. ಆದರೆ ಅದನ್ನು ನಿರಾಕರಿಸಿದ ಅವನು ಆ ಹಣವು ತಮಗೆ ಸೇರಿದ್ದಲ್ಲವೆಂದು, ಅದರ ನಿಜವಾದ ವಾರಸುದಾರರನ್ನು ಹುಡುಕಿ ಅದನ್ನು ಅವರಿಗೆ ತಲುಪಿಸಬೇಕಾದುದು ತನ್ನ ಕರ್ತವ್ಯವೆಂದು ನುಡಿದನು.

ಹಲವು ದಿನಗಳನಂತರ ಕೈಚೀಲದ ನಿಜವಾದ ಮಾಲೀಕರನ್ನು ಪತ್ತೆಮಾಡಿದ ಅವನು ಅದನ್ನು ಅವರಿಗೆ ಹಿಂತಿರುಗಿಸಿದನು. ಬಹಳ ಶ್ರೀಮಂತನಾದ ಸಂಚಿಯ ಮಾಲೀಕನು ರೈತನ ಪ್ರಾಮಾಣಿಕತೆಯನ್ನು ಬಹಳವಾಗಿ ಮೆಚ್ಚಿದನು. ತನ್ನ ಜಮೀನಿನ ಮೇಲ್ವಿಚಾರಣೆಗಾಗಿ ಒಬ್ಬ ಪ್ರಾಮಣಿಕ ವ್ಯಕ್ತಿಯನ್ನು ಹಲವು ದಿನಗಳಿಂದಲೂ ಹುಡುಕುತ್ತಿರುವುದಾಗಿ ಅವನು ತಿಳಿಸಿದನು.

ತನ್ನ ಕುಟುಂಬನಿರ್ವಹಣೆಗಾಗಿ ಹಣದ ಅಗತ್ಯವಿದ್ದಾಗ್ಯೂ ಕೂಡ ಸಂಚಿಯನ್ನು ತನಗೆ ಹಿಂತಿರುಗಿಸಿದ ರೈತನ ಪ್ರಾಮಾಣಿಕತೆಗೆ ಮೆಚ್ಚಿದ ಶ್ರೀಮಂತನು ಅವನನ್ನು ತನ್ನ ಎಲ್ಲಾ ಜಮೀನುಗಳ ಉಸ್ತುವಾರಿಯನ್ನಾಗಿ ನೇಮಿಸಿದನು. ಅದಕ್ಕೆ ಸಂತೋಷದಿಂದ ಒಪ್ಪಿದನು

ಬಡರೈತನು. ಮನೆಗೆ ಬಂದ ಅವನು ಹೆಂಡತಿಮಕ್ಕಳೊಂದಿಗೆ ನಡೆದ ಸಮಾಚಾರವನ್ನು ತಿಳಿಸಿ, ತನ್ನ ಪ್ರಾಮಾಣಿಕತೆಗೆ ದೊರಕಿದ ಪ್ರತಿಫಲವಿದು ಎಂದು ಸಂತಸಪಟ್ಟನು.

**ಪ್ರಶ್ನೋತ್ತರಗಳು:**

- ರೈತನಿಗೆ ಎಷ್ಟು ಮಂದಿ ಮಕ್ಕಳಿದ್ದರು?
- ರೈತನಿಗೆ ಒಂದುದಿನ ಏನು ಸಿಕ್ಕಿತು?
- ರೈತನ ಹೆಂಡತಿಯು ಕೊಟ್ಟ ಸಲಹೆಯೇನು?
- ಹಣದಸಂಚಿಯ ಒಡೆಯನಾರು?
- ರೈತನು ಸಂಚಿಯನ್ನು ಅದರ ಒಡೆಯನಿಗೆ ಹಿಂತಿರುಗಿಸಿದಾಗ ಏನು ನಡೆಯಿತು?
- ಈ ಕತೆಯಿಂದ ನೀವು ತಿಳಿದ ನೀತಿಯೇನು?
- ನೀವು ಆ ರೈತನ ಪತ್ನಿಯಾಗಿದ್ದಲ್ಲಿ, ಹಣದ ಸಂಚಿಯನ್ನು ನೋಡಿದಾಗ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತಿತ್ತು?

**ಚಟುವಟಿಕೆ 2: ಚೀಟಿಯಾಟ**

ಕೆಲವು ಸಣ್ಣಚೀಟಿಗಳಲ್ಲಿ ಹಲವು ಬೇರೆಬೇರೆ ಸನ್ನಿವೇಶಗಳನ್ನು ನಮೂದಿಸಿ. ತರಗತಿಯಲ್ಲಿ ಆ ಚೀಟಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿ. ತಮಗೆಬಂದಿರುವ ಚೀಟಿಯಲ್ಲಿನ ಸನ್ನಿವೇಶವನ್ನು ಕುರಿತು ಮಕ್ಕಳು ಆಲೋಚಿಸಲಿ. ನಂತರ ಅವರು ಆ ನಿರ್ದಿಷ್ಟ ಸನ್ನಿವೇಶಕ್ಕೆ ಹೇಗೆ ಪ್ರತಿಕ್ರಿಯಿಸುವರು ಎಂಬುದನ್ನು ತಿಳಿಸಲಿ.

**ಉದಾಹರಣೆಗೆ:**

- ತರಗತಿಯಲ್ಲಿ ಹಿಂದಿನದಿನ ಯಾರೋ ಬಿಟ್ಟುಹೋದ ಹೊಸ ಲೇಖನಿಯು ನಿಮ್ಮ ಮೇಜಿನಕೆಳಗೆ ನಿಮಗೆ ದೊರೆತಾಗ ನೀವು ಏನು ಮಾಡುವಿರಿ?
- ಐಸ್‌ಕ್ರೀಮ್ ತಿನ್ನಲೆಂದು ನಿಮ್ಮ ತಾಯಿಯು ನಿಮಗೆ ಹಣಕೊಡುವರು. ಇದು ತಿಳಿಯದ ನಿಮ್ಮತಂದೆಯೂ ಕೂಡ ನಿಮಗೆ ಹಣವನ್ನುಕೊಡಲು ಬರುವರು. ನಿಮ್ಮ ತಂದೆಯಿಂದಲೂ ಹಣ ಸ್ವೀಕರಿಸುವಿರೋ ಅಥವಾ ಅವರಿಗೆ ಸತ್ಯ ತಿಳಿಸುವಿರೋ?

- ನೀವು ನಿಮ್ಮ ಆಟಿಕೆಗಳೊಂದಿಗೆ ನಿಮ್ಮ ಸ್ನೇಹಿತರಮನೆಗೆ ಆಟವಾಡಲು ಹೋಗುವಿರಿ. ಮರಳಿಮನೆಗೆ ಬರುವಾಗ ಗೆಳೆಯನ ಆಟದಸಾಮಾನು ತಪ್ಪಾಗಿ ನಿಮ್ಮಚೀಲದಲ್ಲಿ ಸೇರಿರುವುದನ್ನು ಗಮನಿಸುವಿರಿ. ಆಗ ನೀವು ಏನು ಮಾಡುವಿರಿ?
- ಒಮ್ಮೆ ಉದ್ಯಾನವನದಲ್ಲಿ ನಿಮ್ಮಜೊತೆ ಜಗಳವಾಡಿದ ಬಾಲಕನು ಮರಳಿ ಹೋಗುವಾಗ, ಅವನ ಗಡಿಯಾರವನ್ನು ಬೀಳಿಸಿಕೊಂಡು ಹೋಗುವನು. ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

**ಚಟುವತಿಕೆ 3: ಆಟ**

1. ಮಕ್ಕಳು ತಮ್ಮ ಕಣ್ಣುಗಳನ್ನು ಮುಚ್ಚಿ ವರ್ತುಲಾಕಾರದಲ್ಲಿ ಕುಳಿತುಕೊಳ್ಳಲಿ.
2. ಒಬ್ಬ ವಿದ್ಯಾರ್ಥಿಯು ಒಂದೆರೆಡು ಸುತ್ತು ವೃತ್ತವನ್ನು ಸುತ್ತಿದ ನಂತರ ಬೇರೊಬ್ಬ ವಿದ್ಯಾರ್ಥಿಯ ಬೆನ್ನು ತಟ್ಟಿ ಕಣ್ಣುಬಿಡುವಂತೆ ಸೂಚಿಸಲಿ.
3. ಕಣ್ಣುಬಿಟ್ಟ ಗೆಳೆಯ/ತಿ ಯ ಕೈಗೆ ಒಂದು ಗುಂಡಿಯನ್ನು ಕೊಟ್ಟು ಬೇರೆಕಡೆ ತಿರುಗಿ ಹದಿನೈದರವರೆಗೆ ಎಣಿಸಲಿ.
4. ಗುಂಡಿಯನ್ನು ಕೈಯಲ್ಲಿಹಿಡಿದ ಮಗು ವೃತ್ತವನ್ನು ಒಂದೆರೆಡುಸುತ್ತು ಸುತ್ತಿದನಂತರ ತನ್ನ ಕೈಯಲಿರುವ ಗುಂಡಿಯನ್ನು ಇನ್ನೊಂದು ಮಗುವಿಗೆ ಕೊಡಲಿ ಅಥವಾ ತನ್ನಲ್ಲಿಯೇ ಇಟ್ಟುಕೊಳ್ಳಲಿ.
5. ನಂತರ 15 ಎಣಿಸಿ ಮುಗಿಸಿದ ಮೊದಲ ವಿದ್ಯಾರ್ಥಿಯು ವೃತ್ತದ ಮಧ್ಯದಲ್ಲಿ ಬಂದು ನಿಂತು “ಯಾರಬಳಿ ಗುಂಡಿಯಿರುವುದು? ಎಂದು ಪ್ರಶ್ನಿಸಲಿ.
6. ಪ್ರತಿಯೊಬ್ಬರೂ ತಮ್ಮಬಳಿ ಗುಂಡಿಯಿಲ್ಲವೆಂದೇ ಹೇಳುವರು.
7. ಸುಳ್ಳು ಹೇಳಿದ ಮಗುವನ್ನು ಸರಿಯಾಗಿ ಕಂಡುಹಿಡಿದರೆ ಆ ಮಗುಗೆದ್ದಂತೆ, ಇಲ್ಲದಿದ್ದಲ್ಲಿ ಸೋತಂತೆ.

## ಚಟುವಟಿಕೆ 4: ಕವನ – ಪ್ರಾಮಾಣಿಕತೆ

ಗಳಿಸು ವಿಶ್ವಾಸ ನೀ ಎಲ್ಲರೊಂದಿಗೆ,

ಸದಾ ಸತ್ಯವನುಣಿಸು ನೀ ಎಲ್ಲರಿಗೆ,

ಸುಳ್ಳು ಬಾರದಿರಲಿ ನಿನ್ನ ನಾಲಿಗೆಗೆ,

ಸರಿತಪ್ಪುಗಳ ವಿವೇಚನೆ ಇರಲಿ ಬುದ್ಧಿಗೆ,

ಒಳ್ಳೆತನದ ಬೀಜವ ಬಿತ್ತು ನೀ ಸರ್ವರಿಗೆ,

ಸತ್ಯಸಂಧತೆಯ ಪಾಠ ಕಲಿಸು ನೀ ಎಲ್ಲರಿಗೆ,

ಪ್ರಾಮಾಣಿಕತೆಯ ಪ್ರತಿಫಲ ಸಾರು ನೀ ಎಲ್ಲರಿಗೆ.

**ಪ್ರಶ್ನೋತ್ತರಗಳು:**

- ಪ್ರಾಮಾಣಿಕತೆಯು ಏನನ್ನು ಬೆಳೆಸುತ್ತದೆ?
- ಪ್ರಾಮಾಣಿಕತೆಯು ಏನನ್ನು ನೀಡುತ್ತದೆ?
- ಪ್ರಾಮಾಣಿಕತೆಯು ಏಕೆ ಮುಖ್ಯವಾಗಿದೆ?
- ಕವನದ ಯಾವ ಸಾಲು ನಿಮಗಿಷ್ಟ? ಮತ್ತು ಏಕೆ?

ಅಸತ್ಯ ವಿಶ್ವಾಸವನ್ನು ಮುರಿಯುತ್ತದೆ. ಸತ್ಯ ನಂಬಿಕೆಯನ್ನು ಬೆಳೆಸುತ್ತದೆ. ಕಷ್ಟವಾದರೂ ಸತ್ಯನುಡಿಯುವುದನ್ನು ಬೆಳೆಸಿಕೊಳ್ಳಿ. ತಪ್ಪುಮಾಡಿದಾಗ ಕ್ಷಮೆ ಕೇಳಬೇಕಾಗುತ್ತದೆ, ಆದರೆ ಅದರಿಂದ ನಿಮ್ಮ ಸ್ನೇಹ ಉಳಿಯುತ್ತದೆ, ಸ್ನೇಹಿತರನ್ನು ಕಳೆದುಕೊಳ್ಳಬೇಕಾಗುವುದಿಲ್ಲ.

ಇನ್ನುಮುಂದೆ ತರಗತಿಯಲ್ಲಿ ಸದಾ ಸತ್ಯವನ್ನೇ ನುಡಿಯುವೆವೆಂದು ದೃಢನಿಶ್ಚಯ ಮಾಡೋಣ. ಇದರಿಂದ ಪರಸ್ಪರ ಸ್ನೇಹ ಮತ್ತು ನಂಬಿಕೆ ಉಂಟಾಗುತ್ತದೆ. ಇದಕ್ಕೆ ಎಲ್ಲರೂ ಸಿದ್ಧರಿದ್ದೀರ?

# 5.1.2 ನ್ಯಾಯ/ನಿಷ್ಪಕ್ಷಪಾತ

ನಿಷ್ಪಕ್ಷಪಾತವೆಂದರೆ ಕೇವಲ ಒಬ್ಬ ವ್ಯಕ್ತಿಯ ಪರವಾಗಿಲ್ಲದಿರುವುದು ಮತ್ತು ಪಾಲ್ಗೊಂಡಿರುವ ಪ್ರತಿಯೊಬ್ಬರಿಗೂ ಯಶಸ್ಸುಗಳಿಸಲು ಸಮಾನಾವಕಾಶ ನೀಡುವುದು. ನಿಮ್ಮ ಮಕ್ಕಳಿಗೆ ನಿಷ್ಪಕ್ಷಪಾತದ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯ, ಏಕೆಂದರೆ ನಿಮ್ಮ ಮಕ್ಕಳು ಎಲ್ಲರನ್ನೂ ಸಮಾನವಾಗಿ, ವಿಶ್ವಾಸದಿಂದ ಮತ್ತು ಗೌರವದಿಂದ ಕಾಣುವುದನ್ನು ಅದು ಖಚಿತಪಡಿಸುತ್ತದೆ.

ನ್ಯಾಯ ಮತ್ತು ನಿಷ್ಪಕ್ಷಪಾತವನ್ನು ಹೀಗೂ ಕೂಡ ವಿವರಿಸಬಹುದಾಗಿದೆ:

- ನೀವು ಇತರರೊಂದಿಗೆ ಆಟವಾಡುವಾಗ, ಯಾವಾಗಲು ಆಟದನಿಯಮಗಳನ್ನು ಪಾಲಿಸಿ.
- ಸರದಿನಿಯಮವನ್ನು ಪಾಲಿಸಿ.
- ಸದಾ ಮುಕ್ತಮನಸ್ಸುಳ್ಳವರಾಗಿದ್ದು ಇತರರ ಮಾತುಗಳಿಗೆ ಗೌರವ ಕೊಡಿ.
- ಇತರರ ಒಳ್ಳೆಯತನವನ್ನು ನಿಮ್ಮ ಲಾಭಕ್ಕಾಗಿ ಬಳಸಿಕೊಳ್ಳಬೇಡಿ.
- ಅನಾವಶ್ಯಕವಾಗಿ ಹಾಗು ನಿರ್ಲಕ್ಷತೆಯಿಂದ ಇತರರನ್ನು ಆರೋಪಿಸಬೇಡಿ.

ಉದ್ದೇಶ :

- ಸತ್ಯಹೇಳುವುದರ ಪ್ರಾಮುಖ್ಯತೆಯನ್ನು ಅರಿಯುವುದು.
- ನ್ಯಾಯ ಮತ್ತು ಅನ್ಯಾಯಗಳ ನಿದರ್ಶನಗಳನ್ನು ತಮ್ಮ ಜೀವನದಲ್ಲಿ ಗುರುತಿಸುವುದು.

ವಿಧಾನ : ಪಾತ್ರನಿರೂಪಣೆ, ಕಥಾನಿರೂಪಣೆ ಮತ್ತು ನಿಜಜೀವನಾಧಾರಿತ ಸನ್ನಿವೇಶಗಳ ಕುರಿತು ಚರ್ಚೆಗಳು

ಸಮಯ : 40 ನಿಮಿಷಗಳು

### ಚಟುವತಿಕೆ 1: "ಅಪರಾಧ" ಮತ್ತು "ನ್ಯಾಯ"

ತರಗತಿಯನ್ನು ಆರಂಭಿಸುವುದಕ್ಕೆ ಮುನ್ನ, ಸಣ್ಣ ಚೀಟಿಗಳಲ್ಲಿ ಬೇರೆ ಬೇರೆ ರೀತಿಯ ಅಪರಾಧಗಳನ್ನು ಬರೆಯಿರಿ. ಉದಾಹರಣೆಗೆ, ಪರೀಕ್ಷೆಯಲ್ಲಿ ಮೋಸಮಾಡುವುದು, ಶಿಕ್ಷಕರೆದುರು ಅವಿಧೇಯತೆಯಿಂದ ವರ್ತಿಸುವುದು, ಶಾಲಾವರಣದಲ್ಲಿ ಗುದ್ದಾಟ, ಶಾಲಾ

ಕ್ಯಾಂಟೀನ್‌ನಿಂದ ಚಾಕೊಲೆಟ್ ಕಳುವು, ಸ್ನೇಹಿತನ ಸೀಸದಕಡ್ಡಿಯನ್ನು ಕದಿಯುವುದು ಇತ್ಯಾದಿ. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಸರದಿಯಲ್ಲಿ ಚೀಟಿಯನ್ನು ತೆಗೆದುಕೊಂಡು ಅದರಲ್ಲಿರುವ ಅಪರಾಧದ ಪಾತ್ರವನ್ನು ನಿರೂಪಿಸಲಿ. ತರಗತಿಯ ಉಳಿದ ಮಕ್ಕಳು ತೀರ್ಪುಗಾರರಾಗಿ ಆ ಪ್ರಸ್ತುತ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನಿರ್ಧರಿಸಲಿ.

- ಪ್ರತಿಯೊಂದು ಅಪರಾಧಕ್ಕೂ ಎಷ್ಟು ಕಠಿಣವಾದ ಶಿಕ್ಷೆಯನ್ನು ವಿಧಿಸಬಹುದು?
- ಕೆಲವು ಅಪರಾಧಗಳಿಗೆ ಶಿಕ್ಷೆಯು ಬೇರೆಯದಕ್ಕಿಂತ ಕಠಿಣವಾಗಿರಬೇಕೆ?
- ತೀರ್ಪುಗಾರರಸಮಿತಿಯು ನಿರ್ಧರಿಸಿದ ಶಿಕ್ಷೆಯು ಎಷ್ಟು ನ್ಯಾಯಸಮ್ಮತವಾದುದು ಹಾಗು ನಿಷ್ಪಕ್ಷಪಾತವಾದುದು ಎಂಬುದರ ಬಗ್ಗೆ ಚರ್ಚಿಸಿ.

### ಚಟುವಟಿಕೆ 2:

4–5 ಮಕ್ಕಳ ಗುಂಪುಗಳಾಗಿ ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ವಿಂಗಡಿಸಿ. ಮಕ್ಕಳು ತಾವುನೋಡಿರುವ ಅನ್ಯಾಯದಪ್ರಕರಣಗಳನ್ನು ಪರಸ್ಪರ ಹಂಚಿಕೊಳ್ಳಲಿ. ಆ ಸನ್ನಿವೇಶಗಳು ತಮ್ಮದೇ ಆದ ಅನುಭವಗಳಾಗಿರಬಹುದು ಅಥವಾ ಇತರರ ಅನುಭವಗಳಾಗಿರಬಹುದು.

ಪ್ರತಿಯೊಂದುಗುಂಪು ಒಂದು ಸನ್ನಿವೇಶವನ್ನು ಆಯ್ಕೆಮಾಡಿಕೊಳ್ಳಲಿ. ಆ ಸಂದರ್ಭದಲ್ಲಿ ಏನು ಮಾಡಬೇಕು ಮತ್ತು ಏಕೆ ಮಾಡಬೇಕು ಎಂಬುದನ್ನು ಕುರಿತು ಅವರು ಆಲೋಚಿಸಲಿ. ನಂತರ ಪ್ರತೀಗುಂಪು ತಮ್ಮಪ್ರಕರಣವನ್ನು ತರಗತಿಯ ಮುಂದೆ ಪ್ರಸ್ತುತಪಡಿಸಿದ ನಂತರ ಅದರ ಬಗ್ಗೆ ಚರ್ಚಿಸಿ.

### ಚಟುವಟಿಕೆ 3: ಕಥಾನಿರೂಪಣೆ

ಒಂದು ಹಳ್ಳಿಯಲ್ಲಿ ರೀಟಾ ಎಂಬ ಒಬ್ಬ ಬಡಹುಡುಗಿಯಿದ್ದಳು. ತನ್ನಎಳೆಯ ವಯಸ್ಸಿನಲ್ಲಿಯೆ ತಾಯಿಯನ್ನು ಕಳೆದುಕೊಂಡ ಅವಳು ಮಲತಾಯಿ ಹಾಗು ಇಬ್ಬರು ಮಲಸಹೋದರಿಯರೊಂದಿಗೆ ವಾಸಿಸುತ್ತಿದ್ದಳು.

ರೀಟಾಳ ಮಲತಾಯಿಯು ಅವಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿರಲಿಲ್ಲ. ಎಲ್ಲಾ ಮನೆಗೆಲಸವನ್ನೂ ರೀಟಾಳೇ ಮಾಡಬೇಕಿತ್ತು. ಅವಳ ಮಲಸಹೋದರಿಯರು ಅವಳನ್ನು ಬಹಳ ಕೀಳಾಗಿ ನೋಡುತ್ತಾ ಅವಳಪ್ರತಿಯೊಂದು ಕೆಲಸದಲ್ಲೂ ತಪ್ಪುಹುಡುಕುತ್ತಿದ್ದರು. ಹಳ್ಳಿಯಲ್ಲಿ ಯಾರೊಡನೆಯೂ ಅವಳು ಸ್ನೇಹಮಾಡದಂತೆ ಅವಳನ್ನು ನಿರ್ಬಂಧಿಸಿದ್ದರು.

ಇಷ್ಟು ಸಮಸ್ಯೆಗಳಿದ್ದರೂ ಕೂಡ ರೀಟಾ ಬಹಳ ಪ್ರಾಮಾಣಿಕಳೂ ಹಾಗೂ ಇತರರಿಗೆ ಸಹಾಯಮಾಡುವ ಒಳ್ಳೆಯ ಸ್ವಭಾವವನ್ನು ಹೊಂದಿದ್ದಳು. ಹಳ್ಳಿಯಎಲ್ಲರೂ ಅವಳ ವಿನಯ ಹಾಗು ಮೃದುಸ್ವಭಾವವನ್ನು ಮೆಚ್ಚಿ ಅವಳನ್ನು ಆದರಿಸುತ್ತಿದ್ದರು.

ಒಮ್ಮೆ ರೀಟಾಳ ಮಲತಾಯಿಗೆ ಅನಾರೋಗ್ಯವಾಗಿ ಹಾಸಿಗೆ ಹಿಡಿದರು. ಹಾಸಿಗೆಯಿಂದ ಏಳಲಾಗದ ಅವರು ಒಮ್ಮೆ ಆಹಾರವನ್ನುತಂದುಕೊಡುವಂತೆ ತಮ್ಮ ಮಕ್ಕಳನ್ನು ಕೇಳಿದರು. ಆದರೆ ಆ ಮಕ್ಕಳು ತಾಯಿಯಮಾತಿಗೆ ಸ್ವಲ್ಪವೂ ಬೆಲೆಕೊಡದೆ, ತಾಯಿಯನ್ನು ನೋಡಿಕೊಳ್ಳಲು ನಿರಾಕರಿಸಿದರು.

ಅದರೆ ರೀಟಾಳು ತಾಯಿಯಆರೋಗ್ಯದ ಬಗ್ಗೆ ಕಾಳಜಿವಹಿಸಿ, ಅವರ ಆರೋಗ್ಯ ಸುಧಾರಿಸುವಂತೆ ಬಹಳ ಶ್ರಮಪಟ್ಟು ಅವರನ್ನು ಉಪಚರಿಸಿದಳು. ಅವಳ ಕಾಳಜಿ ಮತ್ತು ಕರುಣೆಯನ್ನು ಕಂಡ ಮಲತಾಯಿಯ ಹೃದಯಕರಗಿತು. ತನ್ನ ತಪ್ಪಿನ ಅರಿವಾದ ಅವರು ತಮ್ಮ ಕ್ರೂರತನಕ್ಕಾಗಿ ರೀಟಾಳ ಕ್ಷಮೆ ಕೋರಿದರು. ಇನ್ನುಮುಂದೆ ತಮ್ಮ ಎಲ್ಲಾ ಮಕ್ಕಳೊಡನೆ ನ್ಯಾಯ ಹಾಗು ನಿಷ್ಪಕ್ಷಪಾತದೊಂದಿಗೆ ನಡೆದುಕೊಂಡು ಎಲ್ಲರನ್ನೂ ಸಮಾನಭಾವದಿಂದ ಕಾಣಲು ಅವರು ನಿರ್ಧರಿಸಿದರು.

## ಪ್ರಶ್ನೋತ್ತರಗಳು:

- ಮಲತಾಯಿಯು ರೀಟಾಳೊಂದಿಗೆ ಹೇಗೆ ವರ್ತಿಸುತ್ತಿದ್ದರು?
- ರೀಟಾಳನ್ನು ಹಳ್ಳಿಯಜನರು ಏಕೆ ಪ್ರೀತಿಸುತ್ತಿದ್ದರು?
- ರೀಟಾಳ ಮಲತಾಯಿಯು ತನ್ನ ಮಕ್ಕಳನ್ನು ಏನು ಕೇಳಿದರು?
- ಅನಾರೋಗ್ಯದಿಂದ ಮಲಗಿದ ಮಲತಾಯಿಯನ್ನು ಯಾರು ಉಪಚರಿಸಿದರು?
- ರೀಟಾಳ ಮಲತಾಯಿಯು ತನ್ನ ತಪ್ಪನ್ನು ಹೇಗೆ ಅರಿತುಕೊಂಡರು?

## 5.1.3 ಸಮಾನತೆ

ಸಮಾನತೆಯೆಂದರೆ ಸರ್ವರನ್ನೂ ಸಮಾನಭಾವ ಮತ್ತು ಗೌರವದಿಂದ ಕಂಡು ಅವರ ಅಗತ್ಯತೆಗಳನ್ನು ಗುರುತಿಸುವುದು ಎಂದರ್ಥ. ಸಮಾನ ಹಕ್ಕುಗಳು, ಸಂಪನ್ಮೂಲಗಳು, ಅವಕಾಶಗಳು ಮತ್ತು ರಕ್ಷಣೆಗಳಿಗೆ ಮಾನವಸಂಕುಲವು ಹಕ್ಕುಬಾಧ್ಯರಾಗಿದ್ದು ಅದನ್ನು ಅವರು ಸರ್ವದಾ ಆನಂದಿಸುವರು.

**ಉದ್ದೇಶ:**

ವಿದ್ಯಾರ್ಥಿಗಳು

- ಸಮಾನತೆ ಮತ್ತು ಸಮಭಾಗಗಳ ನಡುವಿನ ವ್ಯತ್ಯಾಸವನ್ನು ಅರಿವರು.
- ವಿತರಣಾ ಪರಿಸ್ಥಿಯ ಸಮಸ್ಯೆಯನ್ನು ಪರಿಹರಿಸಲು ಶಕ್ತರಾಗುವರು.
- ಅಭಿಪ್ರಾಯಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಚರ್ಚಿಸಲು ಕಲಿವರು.

ವಿಧಾನ: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು, ಕತೆಗಳು, ಪ್ರಕರಣಗಳ ಚರ್ಚೆ, ವೈಯಕ್ತಿಕ ಕಾರ್ಯಗಳು, ತಾರತಮ್ಯದ ಅರ್ಥ, ಡಾ. ಭೀಮರಾವ್ ಅಂಬೇಡ್ಕರ್ ಅವರ ಕತೆ

ಸಮಯ: 40 ನಿಮಿಷಗಳು

### ಚಟುವಟಿಕೆ 1: ತರಗತಿಯಲ್ಲಿನ ಕಾರ್ಯಚಟುವಟಿಕೆ – ಪೆನ್ಸಿಲ್ ವಿತರಣೆ

- ವಿದ್ಯಾರ್ಥಿಗಳನ್ನು ಕೇಳಿ: "ಯಾರಿಗಾದರು ಪೆನ್ಸಿಲ್‌ನ ಅವಶ್ಯಕತೆಯುಂಟೇ?". ಅವಶ್ಯಕತೆಯಿದ್ದ ವಿದ್ಯಾರ್ಥಿಗಳಿಗೆ ಪೆನ್ಸಿಲ್‌ಗಳನ್ನು ನೀಡಿ. "ತಾವು ಮಾಡಿದುದು ಸರಿಯೇ? ಎಲ್ಲಾ ಮಕ್ಕಳಿಗು ಪೆನ್ಸಿಲ್ ದೊರಕಿತೇ?" ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿ.
- ಕೇವಲ ಅವಶ್ಯಕತೆಯಿರುವ ಮಕ್ಕಳಿಗೆಮಾತ್ರ ತಾವು ಪೆನ್ಸಿಲ್ಲನ್ನು ಕೊಟ್ಟಿದ್ದೇಕೆಂದು ಚರ್ಚಿಸಿ. 'ಅವಶ್ಯಕತೆಯಾಧಾರದನ್ವಯ ವಿತರಣೆ' – ವ್ಯಾಖ್ಯಾನವನ್ನು ವಿವರಿಸಿ.
- ನಿಜಜೀವನ ಸಂದರ್ಭಗಳಲ್ಲಿ ಸಮಾನತೆಯಾಧಾರವನ್ನು ಬಿಟ್ಟು, ಅವಶ್ಯಕತೆಯಾಧಾರದ ಮೇಲೆ ಹಂಚಿಕೆಯಾಗುವವಿಷಯುಗಳನ್ನು ಆಲೋಚಿಸುವಂತೆ ಮಕ್ಕಳಿಗೆ ಸೂಚಿಸಿ.

## ಚಟುವಟಿಕೆ 2: ಕತೆ – ಜಂಬದ ಕೋಳಿ ಕಾರು

ರಮೇಶನ ಬಳಿಯಿದ್ದ ದೊಡ್ಡ ಕಾರು ತನ್ನ ಗಾತ್ರದಕಾರಣದಿಂದ ಬಹಳ ಹೆಮ್ಮೆಪಟ್ಟು ಜಂಬಪಡುತ್ತಿತ್ತು. ತನ್ನ ಮಾಲೀಕನಬಳಿಯಿದ್ದ ಮೋಟರ್‌ಬೈಕನ್ನು ಅದು ಗಾತ್ರದಲ್ಲಿ ಸಣ್ಣದೆಂದು ಸದಾ ಪರಿಹಾಸ್ಯ ಮಾಡುತ್ತಿತ್ತು.

ಪ್ರತಿದಿನ ಕಾರನ್ನು ಸಾಬೂನಿನಿಂದತೊಳೆದು ಸ್ವಚ್ಛವಾಗಿಡಲು ಮಾಲೀಕ ರಮೇಶನು ಒಬ್ಬ ವ್ಯಕ್ತಿಯನ್ನು ನೇಮಿಸಿದ್ದನು. ಆದರೆ ಮೋಟರ್‌ಬೈಕ್ ಮಾತ್ರ ಧೂಳುಹಿಡಿದು ಕೊಳೆಯಾಗಿ ಕುಳಿತಿತ್ತು.

ಸಾಧಾರಣವಾಗಿ ರಮೇಶನು ಕಚೇರಿಗೆ ಮತ್ತು ಇನ್ನಿತರಸಮಾರಂಭಗಳಿಗೆ ಹೋಗಲು ಕಾರನ್ನು ಉಪಯೋಗಿಸುತ್ತಿದ್ದನು ಮತ್ತು ಕೇವಲ ತರಕಾರಿ ಮತ್ತು ದಿನಸಿಸಾಮಾನು ತರುವಾಗ ಮಾತ್ರ ಮೋಟರ್‌ಬೈಕನ್ನು ಬಳಸುತ್ತಿದ್ದನು.

ಒಮ್ಮೆ ರಮೇಶನು ಕಚೇರಿಗೆಹೋಗುವಾಗ ದಟ್ಟವಾಹನಸಂಚಾರದ ನಡುವೆಸಿಕ್ಕಿ, ಒಂದುತಾಸು ತಡವಾಗಿ ಕಚೇರಿಗೆತಲುಪಿ ತನ್ನ ಮೇಲಧಿಕಾರಿಗಳ ಕೋಪಕ್ಕೆ ಗುರಿಯಾದನು. ಇದೇರೀತಿ ಹಲವುಬಾರಿ ಸಂಚಾರದಟ್ಟಣೆಗೆ ಸಿಲುಕಿದ ರಮೇಶನು ಆಗಾಗ್ಗೆ ಕಚೇರಿಗೆ ತಡವಾಗಿ ತಲುಪುತ್ತಿದ್ದನು. ಇದರಿಂದ ಅವನಸಂಬಳದಲ್ಲಿ ಕಡಿತ ಉಂಟಾಯಿತು.

ಇದರಿಂದ ಹೊರಬರಲು ರಮೇಶನು ಮುಂದಿನತಿಂಗಳಿನಿಂದ ಕಾರನ್ನುಬಿಟ್ಟು ಮೋಟರ್ ಬೈಕಿನಲ್ಲಿ ಕಚೇರಿಗೆಹೋಗಲು ಆರಂಭಿಸಿದನು. ದಟ್ಟವಾಹನಸಂದಣಿಯಿದ್ದರೂ ಕೂಡ ಬಸ್ಸು, ಲಾರಿಗಳ ನಡುವೆ ಬೈಕನ್ನು ನುಗ್ಗಿಸುತ್ತಾ ಸಮಯಕ್ಕೆ ಸರಿಯಾಗಿ ಕಚೇರಿಯನ್ನು ತಲುಪುತ್ತಿದ್ದನು. ಕ್ರಮೇಣ ಕಚೇರಿಯಲ್ಲಿ ಅವನಮಾನ್ಯತೆಯು ಹೆಚ್ಚಿ, ಅವನಿಗೆ ಆ ತಿಂಗಳಿನ ಕಾಲನಿಷ್ಠೆಯುಳ್ಳಉದ್ಯೋಗಿ ಎಂದು ಪ್ರಶಸ್ತಿ ದೊರಕಿತು.

ಮೋಟರ್‌ಬೈಕಿನ ಉಪಯೋಗವನ್ನು ಅರಿತ ಅವನು ಕಾರಿಗೆಬದಲಾಗಿ ಬೈಕನ್ನು ಹೆಚ್ಚಾಗಿ ಉಪಯೋಗಿಸತೊಡಗಿದನು.

ಇದನ್ನುಕಂಡ ಕಾರಿನ ಒಣಜಂಬ ಉಡುಗಿತು. ಅದು ತನ್ನ ಅನುಚಿತವರ್ತನೆಗಾಗಿ ಮೋಟರ್‌ಬೈಕಿನ ಕ್ಷಮೆ ಕೋರಿ, ಇನ್ನುಮುಂದೆ ತಾನು ಬೈಕನ್ನು ಗೌರವದಿಂದ ಮತ್ತು ಸಮಾನಭಾವದಿಂದ ಕಾಣುವುದಾಗಿ ವಚನ ನೀಡಿತು.

**ಪ್ರಶ್ನೋತ್ತರಗಳು:**

- ಕಾರು ಜಂಬಪಡಲು ಕಾರಣವೇನು?
- ರಮೇಶನು ಕಾರನ್ನು ಬಿಟ್ಟು ಮೋಟರ್ ಬೈಕನ್ನು ಬಳಸಲು ಏಕೆ ಆರಂಭಿಸಿದನು?
- ರಮೇಶನು ಮೋಟರ್ ಬೈಕನ್ನು ಬಳಸಲಾರಂಭಿಸಿದಾಗ ಕಾರು ಕಲಿತ ಪಾಠವೇನು?

**ಚಟುವಟಿಕೆ 3: ಸಮಭಾಗ ಮತ್ತು ಸಮಾನತೆ**

ಈ ಕೆಳಕಂಡ ಸನ್ನಿವೇಶಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು, ಅವುಗಳು ಸಮಭಾಗ ಅಥವಾ ಸಮಾನತೆಯ ಚೌಕಟ್ಟಿಗೆ ಒಳಪಟ್ಟಿದೆಯೋ / ಇಲ್ಲವೇ ಎಂಬುದನ್ನು ಚರ್ಚಿಸಿ.

- ಊಟದವೇಳೆಯಲ್ಲಿ ಮಕ್ಕಳೆಲ್ಲರಿಗೂ ಒಂದೇ ರೀತಿಯ ಆಹಾರ ವಿತರಣೆ.
- ಮನೆಯಲ್ಲಿ ತಾಯಿಯು ನಿಮ್ಮಅಣ್ಣನಿಗೆ 3 ಲಾಡುಗಳನ್ನು ಮತ್ತು ನಿಮಗೆ 2 ಲಾಡುಗಳನ್ನು ನೀಡುವರು.
- ಅಗತ್ಯವಿರುವವರಿಗೆ ಮಾತ್ರ ಶಿಕ್ಷಕರು ಪೆನ್ಸಿಲ್ಲನ್ನು ನೀಡುವರು.
- ಗಣಿತಶಾಸ್ತ್ರದಲ್ಲಿ ನಿಮಗೆ ಸಹಾಯಮಾಡುವ ಸಲುವಾಗಿ ಶಿಕ್ಷಕರು ಹೆಚ್ಚಿನ ಲೆಖ್ಖಗಳನ್ನು ಮಾಡಿಸುವರು.
- ಊಟದವಿರಾಮದ ಸಮಯದಲ್ಲಿ ಶಿಕ್ಷಕರು ನಿಮಗೆ ಓದುವುದರಲ್ಲಿ ಹೆಚ್ಚಿನ ಸಹಾಯವನ್ನು ನೀಡುವರು.

**ಚಟುವಟಿಕೆ 4: ವ್ಯಕ್ತಿಗತ ಕಾರ್ಯಚಟುವಟಿಕೆ**

ಸಮಾನತೆ ಮತ್ತು ಸಮಭಾಗಗಳನ್ನು ಪ್ರಸ್ತುತಪಡಿಸುವ ತಮ್ಮ ವೈಯಕ್ತಿಕ ಅನುಭವಗಳ ಸನ್ನಿವೇಶವನ್ನು ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸಿ.

**ಹಂಚುವಿಕೆ:**

ತಮ್ಮ ಕಾರ್ಯವನ್ನು ತರಗತಿಯಲ್ಲಿ ಹಂಚಿಕೊಳ್ಳುವಂತೆ ಕೆಲವು ವಿದ್ಯಾರ್ಥಿಗಳಿಗೆ ಸೂಚಿಸಿ.

**ಮೌಲ್ಯಮಾಪನ:**

ವೈಯಕ್ತಿಕ ವಿಚಾರಣೆ ಹಾಗು ತಂಡಕಾರ್ಯದ ಮೂಲಕ ಮಕ್ಕಳು ಏನನ್ನು ಅರಿತರು ಎಂಬುದನ್ನು ಮೌಲ್ಯಮಾಪನ ಮಾಡಿ.

## ಚಟುವಟಿಕೆ 4: ತಾರತಮ್ಯತೆ ಎಂದರೇನೆಂದು ಅರಿಯುವುದು

- ತರಗತಿಯ ವಿದ್ಯಾರ್ಥಿಗಳನ್ನು ಯಾದೃಚ್ಛಿಕವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಿ.
- ಒಂದುಗುಂಪಿನ ಮಕ್ಕಳನ್ನು ಎಂದಿನಂತೆ ತಾವು ಕುಳಿತುಕೊಳ್ಳುವ ಸ್ಥಳದಲ್ಲಿಯೇ ಕೂರಲು ಸೂಚಿಸಿ. ಮತ್ತೊಂದು ಗುಂಪಿನ ಮಕ್ಕಳನ್ನು ನೆಲದಮೇಲೆ ಕೂರಲು ಸೂಚಿಸಿ.
- ಇತರ ಮಕ್ಕಳು ಬೆಂಚಿನ ಮೇಲೆಯೂ ತಾವುಮಾತ್ರ ಕೆಳಗೆ ನೆಲದಮೇಲೆ ಕುಳಿತುಕೊಳ್ಳಬೇಕಾದಪರಿಸ್ಥಿತಿಯಲ್ಲಿ ಅವರ ಮನದಲ್ಲಿ ಉದ್ಭವಿಸಿದ ಭಾವನೆಯನ್ನು ಹಂಚಿಕೊಳ್ಳಲು ಆ ಮಕ್ಕಳಿಗೆ ಸೂಚಿಸಿ.
- ಮಕ್ಕಳ ಮನದಲ್ಲಿ ಮೂಡಿದ ಪ್ರಶ್ನೆಗಳನ್ನು ಪಟ್ಟಿಮಾಡುವಂತೆ ಸೂಚಿಸಿ.

## ಚಟುವಟಿಕೆ 5: ಕತೆ – ಸಂವಿಧಾನಶಿಲ್ಪಿ ಡಾ. ಭೀಮರಾವ್ ಅಂಬೇಡ್ಕರ್

ಭಾರತೀಯ ಸಂವಿಧಾನಪಿತಾಮಹ ಡಾ. ಭೀಮರಾವ್ ಅಂಬೇಡ್ಕರ್ ಅವರು 1891, ಏಪ್ರಿಲ್ 14ರಂದು ಮಧ್ಯಪ್ರದೇಶದ ಮಾಹೌ ಎಂಬಲ್ಲಿ ಜನಿಸಿದರು. ಅಂಬೇಡ್ಕರ್ ಅವರ ತಂದೆ ಭಾರತೀಯ ಸೈನ್ಯದಲ್ಲಿ ಸೇವೆಸಲ್ಲಿಸಿ 1894ರಲ್ಲಿ ನಿವೃತ್ತಿ ಹೊಂದಿದರು. ನಂತರ ಸತಾರದಲ್ಲಿ ನೆಲೆಸಿದ ಅವರಕುಟುಂಬವು ತಾಯಿಯಮರಣದ ನಂತರ ಮುಂಬೈಗೆ ಸ್ಥಳಾಂತರಗೊಂಡಿತು.

ದಲಿತವರ್ಗಕ್ಕೆಸೇರಿದ ಕಾರಣದಿಂದ ತಮ್ಮಬಾಲ್ಯದುದ್ದಕ್ಕೂ ಅಂಬೇಡ್ಕರ್‌ರವರು ಜಾತಿಭೇದವನ್ನು ಅನುಭವಿಸಿದರು. ಮೇಲ್ಜಾತಿವರ್ಗದ ಜನರು ಅವರ ಕುಟುಂಬವನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಸೇನಾಶಾಲೆಯಲ್ಲಿಯೂ ಅಂಬೇಡ್ಕರ್‌ರವರನ್ನು ಈ ತಾರತಮ್ಯತೆ ಮತ್ತು ಅವಮಾನ ಬಹಳವಾಗಿ ಕಾಡಿತು. ಶಿಕ್ಷಕರು ಶಾಲೆಯಲ್ಲಿ ಮೇಲ್ಜಾತಿಯ ಮಕ್ಕಳಿಂದ ಕೆಳಜಾತಿಯಮಕ್ಕಳನ್ನು ಬೇರ್ಪಡಿಸಿ, ಅವರನ್ನು ನೆಲದಮೇಲೆ ಅಥವಾ ತರಗತಿಯ ಹೊರಗೆ ಕೂರಿಸುತ್ತಿದ್ದರು.

ಸತಾರಾದಲ್ಲಿನ ಶಾಲೆಯಲ್ಲಿಯೂ ಕೂಡ ಯಾವುದೇರೀತಿಯ ಬದಲಾವಣೆಯನ್ನು ಅಂಬೇಡ್ಕರ್‌ರವರು ಕಾಣಲಿಲ್ಲ. ಅವರ ವಿದ್ಯಾಭ್ಯಾಸದಅವಧಿಯಲ್ಲಿ ಈ ಜಾತಿಭೇದವು ಅವರನ್ನು ಎಲ್ಲೆಲ್ಲಿಯೂ ಬಿಡದಂತೆ ಹಿಂಬಾಲಿಸಿತು.

ಬಡತನ, ಜಾತಿಭೇದ ಮತ್ತು ಅವಮಾನಗಳ ನಡುವೆ, ಅವರ ನಿಷ್ಠೆ, ಧ್ಯೇಯ, ಸಮರ್ಪಣಾಭಾವ ಮತ್ತು ಸತತ ಪ್ರಯತ್ನಗಳು ಅವರನ್ನು ಅವರ ಪೀಳಿಗೆಯ ಅತ್ಯುನ್ನತ ವಿದ್ಯಾವಂತ ಭಾರತೀಯನನ್ನಾಗಿ ಮಾಡಿದವು.

ಸಮಾಜದ ಕೆಳಜಾತಿ ಮಾತು ಅಸ್ಪೃಶ್ಯರ ಸಮಾನತೆಯ ಹಕ್ಕುಗಳಿಗಾಗಿ ಹೋರಾಡಲು ಜೀವನದುದ್ದಕ್ಕೂ ಕಂಕಣಕಟ್ಟಿ ನಿಂತರು. ದಲಿತರಹಕ್ಕುಗಳಿಗಾಗಿ ನಿರಂತರ ಹೋರಾಡಿದರು. ಸಾಮಾಜಿಕಚಟುವಟಿಕೆಗಳ ಸಕ್ರಿಯ ಕಾರ್ಯಕರ್ತರಾಗಿದ್ದ ಅವರು ಸಾಮಾಜಿಕಸಮಾನತೆ ಮತ್ತು ನ್ಯಾಯಕ್ಕಾಗಿ ಆಗ್ರಹಕೋರಿದರು.

ಸ್ವತಂತ್ರಭಾರತದ ಸಂವಿಧಾನವನ್ನು ರೂಪಿಸಿದ ಕೀರ್ತಿ ಡಾ. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

**ಪ್ರಶ್ನೋತ್ತರಗಳು:**

- ಭಾರತಸಂವಿಧಾನದ ಪಿತಾಮಹ ಯಾರು?
- ಮೇಲ್ಜಾತಿ ಮತ್ತು ಕೆಳಜಾತಿಯ ಮಕ್ಕಳನ್ನು ಶಿಕ್ಷಕರು ಏಕೆ ಬೇರ್ಪಡಿಸುತ್ತಿದ್ದರು?
- ಡಾ. ಭೀಮರಾವ್ ಅಂಬೇಡ್ಕರ್ ಅವರ ಜೀವನದುದ್ದಕ್ಕೂ ಅವರೊಡನೆ ಸಮಾಜ ಹೇಗೆ ವರ್ತಿಸಿತು?
- ಅಂಬೇಡ್ಕರ್ ಅವರು ಯಾವುದಕ್ಕಾಗಿ ಹೋರಾಡಿದರು?
- ನಿಮ್ಮ ಜೀವನದಲ್ಲಿ ನೀವು ಸಮಾನತೆ ಮತ್ತು ನ್ಯಾಯವನ್ನು ಯಾವರೀತಿ ಪ್ರತಿಪಾದಿಸುವಿರಿ? ನಿಮ್ಮ ಅನುಭವ ಮತ್ತು ಅಭಿಮತವನ್ನು ಕುರಿತು ಚರ್ಚಿಸಿ.

**ನೀತಿ: ದಯವಿಟ್ಟು ಯಾರನ್ನು ಕೀಳಾಗಿ ಕಾಣದಿರಿ; ಸರ್ವರೂ ಸಮಾನರು.**

# 5.2 ರಾಷ್ಟ್ರಧ್ವಜ



- ಪ್ರತಿಯೊಂದು ಸ್ವತಂತ್ರರಾಷ್ಟ್ರವು ತನ್ನದೇ ಆದ ರಾಷ್ಟ್ರಧ್ವಜವನ್ನು ಹೊಂದಿರುತ್ತದೆ.
- ರಾಷ್ಟ್ರಧ್ವಜವು ರಾಷ್ಟ್ರದ ಹೆಗ್ಗುರುತು ಹಾಗೂ ಹೆಮ್ಮೆಯ ಸಂಕೇತ.
- ಅದು ರಾಷ್ಟ್ರದಪ್ರಜೆಗಳ ಸಂಸ್ಕೃತಿ, ಪರಂಪರೆ ಮತ್ತು ಚೇತನಗಳನ್ನು ಸಂಕೇತಿಸುತ್ತದೆ.
- ನಮ್ಮ ತ್ರಿವರ್ಣಧ್ವಜದಲ್ಲಿ: ಮೇಲಿನಪಟ್ಟಿಯಲ್ಲಿನ ಕೇಸರಿಬಣ್ಣವು ದೇಶದ ಸಾಮರ್ಥ್ಯ ಮತ್ತು ಸ್ಥೈರ್ಯವನ್ನು ಸೂಚಿಸುತ್ತದೆ.
- ನಡುವಿನ ಧರ್ಮಚಕ್ರದೊಂದಿಗಿನ ಶ್ವೇತವರ್ಣವು ಶಾಂತಿ ಮತ್ತು ಸತ್ಯವನ್ನು ಸೂಚಿಸುತ್ತದೆ.
- 24 ಕಡ್ಡಿಗಳನ್ನು ಹೊಂದಿರುವ ಧರ್ಮಚಕ್ರವು ‘ಕಾನೂನಿನಚಕ್ರ’ವನ್ನು ನಿರೂಪಿಸುತ್ತದೆ.
- ಕೊನೆಯಪಟ್ಟಿಯಲ್ಲಿನ ಹಸಿರುವರ್ಣವು ವಿಶ್ವಾಸ ಮತ್ತು ಪ್ರಗತಿಯನ್ನು ತೋರುತ್ತದೆ.

# 5.2.1 ಸ್ಥೈರ್ಯ

ಎಂತಹುದೇ ಕಷ್ಟಕರವಾದ ಮತ್ತು ಅಪಾಯಕಾರಿ ಸನ್ನಿವೇಶದಲ್ಲಿಯೂ ಭಯವಿಲ್ಲದೆ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವೇ ಸ್ಥೈರ್ಯ. ದೈಹಿಕ ಅಪಾಯಗಳನ್ನೆದುರಿಸುವುದರ ಜೊತೆ, ನಮ್ಮ ನಂಬಿಕೆ ವಿಶ್ವಾಸಗಳಿಗಾಗಿ ಬದ್ಧರಾಗುವುದು ಮತ್ತು ಸುಲಭವಾದ ಹಾಗು ಜನಪ್ರಿಯವಾದ ಕೆಲಸವನ್ನು ಬಿಟ್ಟು, ಸರಿಯಾದ ಪ್ರಮಾಣ ಮತ್ತು ಅಧಾರದ ಮೇರೆಗೆ ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದೇ ನಿಜವಾದ ಸ್ಥೈರ್ಯ. ಅತ್ತ ಹುಚ್ಚುಧೈರ್ಯವೂ ಇಲ್ಲದೆ, ಇತ್ತ ಪುಕ್ಕಲುತನವೂ ಇಲ್ಲದೆ, ನಮ್ಮ ಕರ್ತವ್ಯ ಹಾಗು ಜವಾಬ್ದಾರಿಗಳನ್ನರಿತು ನಡೆಯುವುದೇ ನಿಜವಾದ ಧೈರ್ಯವಂತರ ಲಕ್ಷಣ.

ಸಂಪೂರ್ಣವಾಗಿ ಹೆದರಿಕೆಯಿಲ್ಲದಿರುವುದೇ ಧೈರ್ಯವೆಂದರ್ಥವಲ್ಲ. ಕೆಲವೊಮ್ಮೆ ಅಪಾಯಕಾರಿ ಸನ್ನಿವೇಶಗಳಲ್ಲಿ ಓಡಿಹೋಗುವುದು ಜಾಣತನದ ಲಕ್ಷಣವೆಂದು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು.

ಉದ್ದೇಶ:

- ಧೈರ್ಯ ಮತ್ತು ನಾಯಕಗಿರಿಯ ನಡುವೆಯಿರುವ ವ್ಯತ್ಯಾಸವನ್ನು ಮಕ್ಕಳು ಗುರುತಿಸಿ ಸ್ಥೈರ್ಯದ ನಿಜವಾದ ಅರ್ಥವನ್ನು ಅರಿವರು. ಮುಖ್ಯವಾದ ಸಂದರ್ಭಗಳಲ್ಲಿ ಹಾಗು ಕಷ್ಟಕರ ಸಮಯದಲ್ಲಿ ಸರಿಯಾದ ಆಯ್ಕೆಮಾಡುವಾಗ ನಮಗೆ ಅಗತ್ಯವಿರುವ ಗುಣವೇ ಧೈರ್ಯವೆಂದು ಮಕ್ಕಳು ಗುರುತಿಸುವರು.

ವಿಧಾನ: ನಿಜಜೀವನದ ಅನುಭವಗಳು, ಪಾತ್ರನಿರೂಪಣೆ ಮತ್ತು ಚರ್ಚೆಗಳು.

ಸಮಯ: 45 ನಿಮಿಷಗಳು

## ಚಟುವಟಿಕೆ 1: ಕತೆ – ಧೈರ್ಯವಂತ ಸಹೋದರಿಯರು – ಘೋರಖ್‌ಪುರದ ಅಕ್ಕತಂಗಿಯರ ಕತೆ

ತಂದೆತಾಯಿಯರ ಪೋಷಣೆ ಮತ್ತು ಜೀವನೋಪಾಯಕ್ಕಾಗಿ ಕೆಲವೊಮ್ಮೆ ನಾವು ಕಠಿಣವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಬಹುದು. ಅಂತಹ ಸಂದರ್ಭದಲ್ಲಿ ಸ್ಥೈರ್ಯದಅಗತ್ಯವಿದ್ದು, ಘೋರಖ್‌ಪುರದ ಸಹೋದರಿಯರ ಕತೆಯು ಇದಕ್ಕೆ ಉತ್ತಮನಿದರ್ಶನವಾಗಿದೆ.

ಘೋರಖ್‌ಪುರದ 17 ವರ್ಷದ ದೀಪಕ್ ಮತ್ತು 15 ವರ್ಷದ ರಾಜು ಪ್ರತಿನಿತ್ಯ ಮುಂಜಾನೆ ತಮ್ಮ ಕ್ಷೌರದಂಗಡಿಯನ್ನು ತೆರೆದು ಗ್ರಾಹಕರಿಗೆ ಸೇವೆಯೊದಗಿಸುವ ನಿಪುಣ ಕೆಲಸಗಾರರು. ಗ್ರಾಹಕರಿಗೆ ಕೂದಲುಕತ್ತರಿಸುವುದು ಮತ್ತು ಕ್ಷೌರಮಾಡುವುದರ ಜೊತೆ ಕೆಲವೊಮ್ಮೆ ತಲೆಯನ್ನು ಕೂಡ ಮಸಾಜ್ ಮಾಡುತ್ತಿದ್ದರು ಈ ಇಬ್ಬರು ಯುವಕರು.

ಆದರೆ ಆಶ್ಚರ್ಯಕರ ಸಂಗತಿಯೆಂದರೆ ಆ ಇಬ್ಬರು ಯುವಕರು ಮಾರುವೇಷದಲ್ಲಿದ್ದ ಯುವತಿಯರು. ಜ್ಯೋತಿಯು ದೀಪಕ್‌ಆಗಿಯೂ ಮತ್ತು ನೇಹ ರಾಜುವಾಗಿಯೂ ವೇಷ ಬದಲಿಸಿಕೊಂಡು ಕಳೆದ 5 ವರ್ಷಗಳಿಂದಲೂ ಈ ವೃತಿಯನ್ನು ನಿರ್ವಹಿಸುತ್ತಿದ್ದರು. ಇದಕ್ಕೆ ಕಾರಣ ಪಾರ್ಶವಾಯು ಪೀಡಿತ ಅವರ ತಂದೆ, ಬಡತನ ಹಾಗು ಉಪವಾಸ.

ಸಮಾಜದ ಟೀಕೆ ಹಾಗು ಪುರುಷರ ಅನಪೇಕ್ಷಿತ ದೃಷ್ಟಿಯಿಂದ ಪಾರಾಗಲು ಈ ಅಕ್ಕತಂಗಿಯರು ವೇಷಬದಲಿಸಿಕೊಂಡು ಕ್ಷೌರಿಕವೃತ್ತಿಯಲ್ಲಿ ತೊಡಗಿದರು. ಸಾರ್ವಜನಿಕರೊಂದಿಗೆ ಹುಡುಗರಂತೆಯೆ ನಡೆದುಕೊಳ್ಳುತ್ತಿದ್ದರು. ಆದರೆ ದಿನಗಳೆದಂತೆ, ಆ ಯುವತಿಯರಿಗೆ ತಮ್ಮ ಈ ಕಾರ್ಯವನ್ನು ಮುಚ್ಚಿಡುವುದು ಕಷ್ಟವಾಯಿತು.

ಮೊದಲಿಗೆ ತಮ್ಮ ತಲೆಕೂದಲನ್ನು ಕತ್ತರಿಸಿಕೊಂಡು, ಹೆಸರುಗಳನ್ನು ಬದಲಾಯಿಸಿಕೊಂಡು ತಮ್ಮ ಅಸ್ಥಿತ್ವವನ್ನೇ ಕಳೆದುಕೊಳ್ಳಬೇಕಾದ ಪರಿಸ್ಥಿತಿಯೊದಗಿದ ಅವರ ಸಂಕಟ ತೀವ್ರವಾದುದು. ಆದರೆ ಕೊನೆಗೊಂದು ದಿನ ಅವರ ವೇಷ ಕಳಚಿಬಿದ್ದು ಸಮಾಜದ ಹಾಗು ಸಾರ್ವಜನಿಕರಟೀಕೆಗೆ ಗುರಿಯಾದರು. ಗ್ರಾಮಪಂಚಾಯತಿಯು ಅವರ ಅಪರಾಧಕ್ಕಾಗಿ ಶಿಕ್ಷೆವಿಧಿಸಲು ಸೇರಿತು. ಪಂಚಾಯಿತಿಯೆದುರು ನಡೆದ ನ್ಯಾಯವಿಚಾರಣೆಯಲ್ಲಿ ಸಹೋದರಿಯರು ತಮ್ಮ ದು:ಖದಕತೆಯನ್ನೂ, ಎದುರಿಸಬೇಕಾಗಿಬಂದ ಪರಿಸ್ಥಿತಿಯನ್ನೂ, ಅದಕ್ಕಾಗಿನಡೆಸಬೇಕಾಗಿ ಬಂದ ತಮ್ಮ ಹೋರಾಟವನ್ನು ವಿವರಿಸಿದರು. ಅವರ ಕಷ್ಟವನ್ನು ಆಲಿಸಿದ ಗ್ರಾಮಸ್ಥರು ಅವರಿಗೊದಗಿದ ಪರಿಸ್ಥಿತಿಯನ್ನು ಅರಿತು ಅನುಕಂಪ ಸೂಸಿದರು. ಹೆಣ್ಣುಮಕ್ಕಳು ಕ್ಷೌರದಂಗಡಿಯಲ್ಲಿ ಕೆಲಸಮಾಡುವುದನ್ನು ಇಂದಿಗೂ ನಮ್ಮಸಮಾಜವು ಒಪ್ಪುವುದಿಲ್ಲವುದಿಲ್ಲವಾದ ಕಾರಣದಿಂದ ಆ ಅಕ್ಕತಂಗಿಯರು ತಮ್ಮಅಸ್ಥಿತ್ವನ್ನೇ ಬದಲಿಸಿಕೊಂಡು ಪುರುಷ ವೇಷಧರಿಸಬೇಕಾಗಿ ಬಂದ ವಿಪರ್ಯಾಸವನ್ನು ಅರಿತ ಪಂಚಾಯಿತಿಯು ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ಬದಲಾಗಿ ಅವರ ಸ್ಥೈರ್ಯವನ್ನು ಮೆಚ್ಚಿ ಹೊಗಳಿದರು. ಸಹೋದರಿಯರು ಎಂದಿನಂತೆ ತಮ್ಮ ಅಂಗಡಿಯಲ್ಲಿ ಕೆಲಸ ಮಾಡಲು ತೊಡಗಿದರು.

ಪ್ರಶ್ನೋತ್ತರಗಳು:

- ಸಹೋದರಿಯರು ತಮ್ಮ ಗುರುತನ್ನು ಏಕೆ ಬದಲಿಸಿಕೊಳ್ಳಬೇಕಾಯಿತು?
- ತಮ್ಮ ಗುರುತನ್ನು ಬದಲಿಸಿಕೊಳ್ಳಲು ಅವರು ಏನು ಮಾಡಿದರು?
- ತಮ್ಮ ನಿಜಸ್ವರೂಪದಲ್ಲಿ ಅವರು ವೃತ್ತಿ ನಿರ್ವಹಿಸಲು ಏಕೆ ಸಾಧ್ಯವಾಗಲಿಲ್ಲ?
- ಸಾರ್ವಜನಿಕರಿಗೆ ಅವರ ನಿಜಸ್ವರೂಪದ ಅರಿವಾದಾಗ, ಅವರು ಏನು ಮಾಡಿದರು?

## ಚಟುವಟಿಕೆ 2: ರಾಷ್ಟ್ರೀಯ ಪ್ರಶಸ್ತಿ ಪಡೆದ ವೀರ ಬಾಲಕನ ಕತೆ

ಉತ್ತರಾಕಾಂಡದ ಮನೋಹರಪುರದಲ್ಲಿ ನಡೆದ ಘಟನೆಯಿದು. 15 ವರ್ಷದ ಸುಮಿತ್‌ಮಂಗ್ಯೆನ್ ಒಮ್ಮೆ ಹೊಲದಲ್ಲಿ ಕೆಲಸಮಾಡುತ್ತಿದ್ದಾಗ, ತನ್ನ ಸಹೋದರ ರಿತೇಶ್‌ನನ್ನು ಚಿರತೆಯೊಂದು ಎಳೆದೊಯ್ಯುತಿರುವುದನ್ನು ನೋಡಿ ಸಹೋದರನನ್ನು ಕಾಪಾಡಲು ಮುಂದಾದನು. ಸಹೋದರ ರಿತೇಶ್‌ನು ಸುಮಿತ್‌ಗೆ ಓಡಿಹೋಗಿ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಸೂಚಿಸಿದನು. ಆದರೆ ಸಹೋದರನ ಮಾತನ್ನು ಲೆಕ್ಕಿಸದ ಸುಮಿತ್ ಚಿರತೆಯೊಂದಿಗೆ ಹೋರಾಡಲು ಸಿದ್ಧನಾದನು. ಚಿರತೆಯಬಾಲವನ್ನು ಗಟ್ಟಿಯಾಗಿ ಹಿಡಿದು ಅದನ್ನು ತನ್ನ ಕೊಯ್ಲುಗತ್ತಿಯಿಂದ ಬಲವಾಗಿ ಹೊಡೆಯಲಾರಂಭಿಸಿದನು. ರಿತೇಶ್‌ನನ್ನು ಬಿಟ್ಟ ಚಿರತೆಯು ಸುಮಿತ್‌ನ ಕಡೆ ಧಾಳಿಮಾಡಿದಾಗ ಕೈಗೆಸಿಕ್ಕ ಕಲ್ಲುಗಳನ್ನು ಅದರೆಡೆ ತೂರಿದನು. ಕಲ್ಲುಗಳಪೆಟ್ಟಿಗೆ ಹೆದರಿ ಚಿರತೆಯು ಕಾಡಿನೊಳಗೆ ಓಡಿ ಹೋಯಿತು. ಸುಮಿತ್‌ನ ಅಸಾಧಾರಣ ಸ್ಥೈರ್ಯ ಹಾಗು ಸಮಯಪ್ರಜ್ಞೆಗಳಿಗೆ ಮೆಚ್ಚಿದ ಭಾರತಸರ್ಕಾರ ಅವನಿಗೆ ಸಂಜಯ್ ಚೋಪ್ರ ಶೌರ್ಯಪ್ರಶಸ್ತಿಯನ್ನು ಪ್ರಧಾನಿಸಿತು.

ಪ್ರಶ್ನೋತ್ತರಗಳು:

- ಚಿರತೆಯು ರಿತೇಶ್‌ನನ್ನು ಅಕ್ರಮಣ ಮಾಡಿದಾಗ, ಸುಮಿತ್‌ನ ಪ್ರತಿಕ್ರಿಯೆ ಏನು?
- ಸುಮಿತ್‌ನು ಚಿರತೆಯೊಂದಿಗೆ ಹೇಗೆ ಹೋರಾಡಿದನು?
- ಚಿರತೆಯಿಂದ ರಿತೇಶ್‌ನನ್ನು ರಕ್ಷಿಸಲು ಸುಮಿತ್‌ಗೆ ಸಾಧ್ಯವಾದದ್ದು ಏಕೆ?

## ಚಟುವಟಿಕೆ 3: ಪಾತ್ರನಿರೂಪಣೆ

ವಿದ್ಯಾರ್ಥಿಗಳನ್ನು ಹಲವು ಗುಂಪುಗಳನ್ನಾಗಿ ವಿಂಗಡಿಸಿ. ಧೈರ್ಯಪ್ರದರ್ಶನದ ಹಲವು ಸನ್ನಿವೇಶಗಳನ್ನು ಚೀಟಿಗಳಲ್ಲಿ ಬರೆದು ಎಲ್ಲಾ ಗುಂಪಿಗಳಿಗೂ ವಿತರಿಸಿ. ಅದರಂತೆ ಪ್ರತಿತಂಡವೂ ಒಂದು ಲಘುಪ್ರಹಸನವನ್ನು ತರಗತಿಯಲ್ಲಿ ಪ್ರಸ್ತುತಪಡಿಸಲು ಸೂಚಿಸಿ. ಪ್ರದರ್ಶನದ ಅವಧಿಯಲ್ಲಿ ಪ್ರೇಕ್ಷಕವರ್ಗವು ಗೌರವದಿಂದ ವರ್ತಿಸಲಿ:

- ಪರೀಕ್ಷಾಸಮಯದಲ್ಲಿ ಅಕಸ್ಮಾತ್ ಶಿಕ್ಷಕರು ಕೊಠಡಿಯಿಂದ ಹೊರಗೆಹೋದಾಗ, ಮಕ್ಕಳು ಪರಸ್ಪರ ನಕಲು ಮಾಡಲು ಪ್ರಯತ್ನಿಸಲಿ.
- ನಿಮ್ಮತಂದೆಗೆ ಹೊಸಕೆಲಸ ದೊರಕಿ ನಿಮ್ಮಕುಟುಂಬವು ಪರಸ್ಥಳಕ್ಕೆ ಸ್ಥಳಾಂತರಗೊಂಡು, ಯಾರ ಪರಿಚಯವಿಲ್ಲದ ನೀವು ಹೊಸಶಾಲೆಗೆ ಹೋಗಬೇಕಾದಾಗ ಮನದಲ್ಲಿ ಉಂಟಾಗುವ ಅಂಜಿಕೆ.
- ನಿಮ್ಮ ತಾಯಿಯೊಡನೆ ನೀವು ಖರೀದಿಗೆ ಹೋಗುವಿರಿ. ನಿಮ್ಮ ತಾಯಿಯು ಬಟ್ಟೆಗಳನ್ನು ನೋಡುತ್ತಿದ್ದಾಗ ನೀವು ಬಟ್ಟೆಯ ಕಪಾಟಿನಕೆಳಗೆ ಆಡುತ್ತಿರುವಿರಿ. ಸ್ವಲ್ಪ ಸಮಯದ ನಂತರ ನೀವು ಹೊರಬಂದು ನೋಡಿದಾಗ ನಿಮ್ಮತಾಯಿಯು ಎಲ್ಲಿಯೂ ಕಾಣಿಸುವುದಿಲ್ಲ. ಆಗ ನಿಮ್ಮಲ್ಲಿ ಮೂಡುವ ಹೆದರಿಕೆ.

# 5.2.2 ತ್ಯಾಗ

ಮುಖ್ಯವಾದ ಕೆಲಸಕಾರ್ಯಗಳಲ್ಲಿ ಹಾಗು ಇತರರಿಗೆ ಸಹಾಯಮಾಡುವ ಸಲುವಾಗಿ ವಿಶೇಷವಾಗಿ ತಮಗೆ ಅವಶ್ಯವಿರುವುದನ್ನು ಯಾವುದೇ ಲೋಭದಾಸೆಯಿಲ್ಲದೆ ಬಿಟ್ಟುಕೊಡುವುದೇ ತ್ಯಾಗ. ಮಕ್ಕಳಒಳಿತಿಗಾಗಿ ಪೋಷಕರು ತಮ್ಮ ಸಮಯವನ್ನೂ ಮತ್ತು ನಿದ್ರೆಯನ್ನು ತ್ಯಾಗಮಾಡುತ್ತಾರೆ. ಮಕ್ಕಳು ಚೆನ್ನಾಗಿಕಲಿತು ಹೆಚ್ಚಿನಅಂಕ ಗಳಿಸಲು ಆಟ, ನಿದ್ರೆ ಮತ್ತು ದೂರದರ್ಶನ ನೋಡುವುದನ್ನು ತ್ಯಾಗಮಾಡುತ್ತಾರೆ.

**ಉದ್ದೇಶ:**

- ತ್ಯಾಗ ಪದದ ಅರ್ಥವನ್ನು ಮಕ್ಕಳಿಗೆ ತಿಳಿಸಿಕೊಡಿ.
- ಸಮುದಾಯಜೀವನ ಮತ್ತು ವೈಯಕ್ತಿಕಜೀವನದಲ್ಲಿನ ತ್ಯಾಗದ ನಿದರ್ಶನಗಳನ್ನು ಒದಗಿಸಿ.
- ನಿಮ್ಮ ಜೀವನದಲ್ಲಿ ನೀವು ಮಾಡಿರುವಂತಹ ತ್ಯಾಗದ ಸಂದರ್ಭವನ್ನು ವಿವರಿಸಿ.
- ಸಮಾಜದಲ್ಲಿ ತ್ಯಾಗಕ್ಕಿರುವ ಬೆಲೆಯನ್ನು ವಿವರಿಸಿ.

**ವಿಧಾನಗಳು:** ಕತೆ ಮತ್ತು ಚರ್ಚೆಗಳು, ಬುದ್ಧಿಮತ್ತೆ, ಪಾತ್ರನಿರೂಪಣೆ

**ಸಮಯ:** 45 ನಿಮಿಷಗಳು

## ಚಟುವಟಿಕೆ 1: ಕತೆ – ಈದ್‌ಗಾ (ರಚನೆ: ಮುನ್ಷಿ ಪ್ರೇಮ್‌ಚಂದ್)

ಐದುವರುಷದ ಬಾಲಕ ಹಮೀದ್‌ನ ಕತೆಯಿದು. ತಾಯಿತಂದೆಯರಿಲ್ಲದ ಹಮೀದ್ ತನ್ನ ಅಜ್ಜಿಯೊಂದಿಗೆ ವಾಸಿಸುತ್ತಿದ್ದನು. ಕಿತ್ತುತಿನ್ನುವ ಬಡತನದ ಜೀವನದಲ್ಲಿ ಎರಡು ಹೊತ್ತಿನ ಊಟ ಹೊಂದಿಸುವುದಕ್ಕೂ ಅವನಜ್ಜಿ ಬಹುಕಷ್ಟ ಪಡುತ್ತಿದ್ದಳು. ಒಮ್ಮೆ ಈದ್‌ಹಬ್ಬದ ದಿನ ಗ್ರಾಮಸ್ಥರೆಲ್ಲರೂ ಪ್ರಾರ್ಥನೆಗಾಗಿ ಈದ್ಗಾ ಮೈದಾನದೆಡೆಗೆ ಸಾಗುತ್ತಿದ್ದರು. ಹಬ್ಬದ ಜಾತ್ರೆಯ ಸಂಭ್ರಮ ಮಕ್ಕಳೆಲ್ಲರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವರೆಲ್ಲರೂ ಸಿಹಿತಿನಿಸುಗಳನ್ನು ಮತ್ತು ಸುಂದರ ಆಟಿಕೆಗಳನ್ನು ಕೊಂಡರು. ಸ್ವಲ್ಪ ಮಾತ್ರ ಹಣವಿದ್ದ ಹಮೀದನು ಅವರ ಆಟಿಕೆಗಳನ್ನು ಕಂಡು ಆಕರ್ಷಣೆಗೆ ಒಳಗಾದರೂ ಮನಸ್ಸಿನ ಹತೋಟಿಯನ್ನು ಕಳೆದುಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಅವನು ತನ್ನ ಅಜ್ಜಿಯು ಅಡುಗೆ ಮಾಡುವಾಗ ಅವಳ ಕೈಗಳು ಸುಡಬಾರದೆಂದು ಅವಳಿಗಾಗಿ ಇಕ್ಕಳಗಳನ್ನು ಕೊಂಡನು. ಅವನ ದಾರುಣವಾದ ಕತೆ ಹಾಗು ಅವನ ತ್ಯಾಗವು ಎಲ್ಲರ ಕಣ್ಣುಗಳಲ್ಲಿಯೂ ನೀರು ತರಿಸಿತು.

## ಪ್ರಶ್ನೋತ್ತರಗಳು:

- ಹಮೀದನು ಅಜ್ಜಿಯೊಂದಿಗೆ ಏಕೆ ವಾಸಿಸುತ್ತಿದ್ದನು?
- ಈದ್ ಹಬ್ಬವನ್ನು ಜನರು ಹೇಗೆ ಆಚರಿಸುವರು?
- ಈದ್ ಹಬ್ಬದದಿನ ಮಕ್ಕಳು ಏನು ಮಾಡಿದರು?
- ಹಮೀದನು ತನ್ನ ಹಣದಲ್ಲಿ ಸಿಹಿತಿನಿಸು ಮತ್ತು ಆಟಿಕೆಗಳನ್ನು ಏಕೆ ಕೊಳ್ಳಲಿಲ್ಲ?
- ಹಮೀದನು ಅವನ ಅಜ್ಜಿಗಾಗಿ ಇಕ್ಕಳಗಳನ್ನು ಏಕೆ ಕೊಂಡನು?

## ಚಟುವಟಿಕೆ 2: ಬುದ್ಧಿಮತ್ತೆ

ಒಬ್ಬ ವ್ಯಕ್ತಿಯು ಇತರರಿಗೋಸುಗ ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ, ಸಮಾಜದಲ್ಲಾಗಲಿ ಅಥವಾ ಸಾಮನ್ಯಒಳಿತಿಗಾಗಿ ಮಾಡಬಹುದಾದ ತ್ಯಾಗಗಳನ್ನು ಪಟ್ಟಿಮಾಡಿ. ಉದಾಹರಣೆಗೆ, ನಿಮ್ಮ ಚಿಕ್ಕತಂಗಿಗೆ ಒಂದು ಮಿಠಾಯಿ ಹೆಚ್ಚಿಗೆ ಕೊಡುವುದು, ಶಾಲೆಯಲ್ಲಿ ನಿಮ್ಮ ಗೆಳೆಯನು ಅವನ ಯೋಜನೆಯನ್ನು ನಿರ್ವಹಿಸಲು ಅನುಕೂಲವಾಗುವಂತೆ ನಿಮ್ಮ ಬಣ್ಣದ ಪೆನ್ಸಿಲ್‌ಗಳನ್ನು ಮತ್ತು ಬಣ್ಣದ ಹಾಳೆಗಳನ್ನು ಕೊಡುವುದು, ಊಟದ ಡಬ್ಬಿಯನ್ನು ತರದೆಬಂದ ಗೆಳೆಯನೊಂದಿಗೆ ನಿಮ್ಮಊಟವನ್ನು ಹಂಚಿಕೊಳ್ಳುವುದು ಇತ್ಯಾದಿ. ವಿದ್ಯಾರ್ಥಿಗಳು ಈ ಪಟ್ಟಿಯ ಜೊತೆ ತಮಗೆ ಹೊಳೆದ ಇತರ ನಿದರ್ಶನಗಳನ್ನೂ ಸೇರಿಸಿ ಸ್ವತ: ಮೌಲ್ಯಮಾಪನ ಮಾಡಿಕೊಳ್ಳಲಿ.

## ಚಟುವಟಿಕೆ 3: ಪಾತ್ರನಿರೂಪಣೆ

ತರಗತಿಯ ವಿದ್ಯಾರ್ಥಿಗಳನ್ನು 3–4 ಜನರ ತಂಡಗಳನ್ನಾಗಿ ವಿಂಗಡಿಸಿ. ಅವರಿಗೆ ಈ ಕೆಳಗೆ ಕೊಟ್ಟಿರುವ ಸನ್ನಿವೇಶಗಳು/ದೃಶ್ಯವಿವರಗಳನ್ನು ಪ್ರದರ್ಶಿಸಲು ಸೂಚಿಸಿ.

- ಶಾಲೆಮುಗಿದ ಬಳಿಕ ಮಗನನ್ನು ಕರೆದುಕೊಂಡು ಮನೆಗೆ ಹೋಗುವಾಗ, ತಾಯಿ ಮತ್ತು ಮಗ ಅಕಸ್ಮಾತಾಗಿ ಬಂದಮಳೆಗೆ ಸಿಲುಕುತ್ತಾರೆ. ಸುತ್ತಮುತ್ತ ನೋಡಿದ ತಾಯಿಗೆ ಒಂದು ಸಣ್ಣಶೆಡ್ ಕಾಣುತ್ತದೆ. ಮಗನನ್ನು ಅದರಕೆಳಗೆ ನಿಲ್ಲಿಸಿದ ಅವಳು ತಾನು ಮಳೆಯಲ್ಲೇ ನಿಲ್ಲುತ್ತಾಳೆ.
- ಒಬ್ಬ ಹುಡುಗನು ತನಗೆ ಬಹುಇಷ್ಟವಾದ ಸ್ಯಾಂಡ್‌ವಿಚನ್ನು ಮಧ್ಯಾಹ್ನದ ಊಟಕ್ಕೆ ತಂದಿರುತ್ತಾನೆ. ಅಸ್ವಸ್ಥತೆಯಿಂದ ಬಳಲುತ್ತಿದ್ದ ಅವನ ಗೆಳೆಯನು ಅಂದು ಊಟವನ್ನು ತರದೆ ಬಂದಿರುತ್ತಾನೆ. ಅವನು ಔಷದಿತೆಗೆದುಕೊಳ್ಳುವ ಮುನ್ನ ಏನಾದರೂ ಆಹಾರ ಸೇವಿಸಬೇಕಾದ್ದರಿಂದ, ಗೆಳೆಯನು ತನ್ನ ಸ್ಯಾಂಡ್‌ವಿಚನ್ನು ಅವನಿಗೆ ಕೊಡುತ್ತಾನೆ.

- ಒಬ್ಬ ಕಡುಬಡವ ಹುಡುಗನಿಗೆ ಒಂದುಜೊತೆ ಬೂಟಿನ ಅಗತ್ಯವಿರುತ್ತದೆ. ಅದಕ್ಕಾಗಿ ಅವನು ರಸ್ತೆಯಲ್ಲಿ ಬೂಟುಪಾಲಿಶ್ ಮಾಡಿಗಳಿಸಿದ ಹಣವನ್ನು ಉಳಿತಾಯ ಮಾಡುತ್ತಾನೆ. ಅಗತ್ಯವಿರುವಷ್ಟು ಹಣ ಉಳಿತಾಯವಾದ ನಂತರ ಬೂಟು ಕೊಳ್ಳಲು ನಿರ್ಧರಿಸುತ್ತಾನೆ. ಆದರೆ ಅಷ್ಟರಲ್ಲಿ ಅವನತಾತನ ಮುರಿದಕನ್ನಡಕ ಅವನ ಕಣ್ಣಿಗೆ ಬೀಳುತ್ತದೆ. ದಿನಪತ್ರಿಕೆಯನ್ನು ಓದಲೂ ಕಷ್ಟಪಡುತ್ತಿದ್ದ ತಾತನ ಅವಸ್ಥೆಯನ್ನು ನೋಡಿದ ಆ ಹುಡುಗ ಬೂಟನ್ನುಬಿಟ್ಟು ತಾತನ ಮುರಿದ ಕನ್ನಡಕವನ್ನು ರಿಪೇರಿ ಮಾಡಿಸಲು ತನ್ನ ಉಳಿತಾಯದ ಹಣವನ್ನು ಬಳಸುತ್ತಾನೆ.

## 5.2.3 ರಾಷ್ಟ್ರಪ್ರೇಮ

ರಾಷ್ಟ್ರೀಯತೆ ಅಥವಾ ರಾಷ್ಟ್ರಪ್ರೇಮವೆಂದರೆ ತನ್ನ ಮಾತೃಭೂಮಿಯ ಕುರಿತು ಪ್ರೀತಿ, ಗೌರವ ಮತ್ತು ನಿಷ್ಠೆಯನ್ನು ಹೊಂದಿರುವುದು. ಮಕ್ಕಳಲ್ಲಿ ರಾಷ್ಟ್ರಪ್ರೇಮದ ಭಾವನೆಯನ್ನು ಬಿತ್ತುವುದರಿಂದ ಅವರು ಜವಾಬ್ದಾರಿಯುತ ಪ್ರಜೆಗಳಾಗಲು ಸಹಾಯಮಾಡಿದಂತಾಗುತ್ತದೆ.

ಉದ್ದೇಶ:

- ನಮ್ಮ ರಾಷ್ಟ್ರೀಯ ಸಂಸ್ಕೃತಿ ಹಾಗು ಹಬ್ಬಗಳ ಬಗ್ಗೆ ಮಕ್ಕಳಲ್ಲಿ ಗೌರವ ಮತ್ತು ಮೆಚ್ಚುಗೆಯ ಭಾವನೆಗಳನ್ನು ಬಿತ್ತಿ ಪೋಷಿಸುವುದು.
- ಮಕ್ಕಳಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಪೋಷಿಸಿ, ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರು ಪಟ್ಟ ಸಂಕಷ್ಟಗಳು, ನೀಡಿದ ಬಲಿದಾನಗಳು ಮತ್ತು ಮಾಡಿದ ತ್ಯಾಗಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದು.
- ನಮ್ಮನಾಡಿನ ಅಪಾರವಾದ ಸಾಂಸ್ಕೃತಿಕವೈವಿಧ್ಯತೆಯ ಬಗ್ಗೆ ಮಕ್ಕಳಲ್ಲಿ ಮೆಚ್ಚುಗೆ ಮೂಡಿಸುವುದರೊಡನೆ, ನಮ್ಮ ವಿಭಿನ್ನ ಸಂಸ್ಕೃತಿಗಳು ಮತ್ತು ಧರ್ಮಗಳ ಬಗ್ಗೆ ಗೌರವಭಾವನೆ ಮೂಡಿಸಿ, 'ಭಿನ್ನತೆಯಲ್ಲಿ ಏಕತೆ'ಯ ಭಾವನೆಯನ್ನು ಬೆಳೆಸುವುದು.

ವಿಧಾನ: ನಿಮ್ಮ ಆದರ್ಶವ್ಯಕ್ತಿ, ಸೃಜನಾತ್ಮಕ ಮನೋವೃತ್ತಿ, ಭಾರತದ ಸಾಂಸ್ಕೃತಿಕ ವೈವಿಧ್ಯತೆ.

ಸಮಯ : 40-60 ನಿಮಿಷಗಳು

### ಚಟುವಟಿಕೆ 1: ನಿಮ್ಮ ಆದರ್ಶವ್ಯಕ್ತಿ

- 200 ವರುಷಗಳಿಗೂ ಹೆಚ್ಚುಕಾಲ ಬ್ರಿಟಿಷರಆಳ್ವಿಕೆಯಲ್ಲಿದ್ದ ನಮ್ಮಭಾರತವನ್ನು ಸ್ವತಂತ್ರಗೊಳಿಸಲು ಹೋರಡಿದ ಸ್ವಾತಂತ್ರ್ಯಹೋರಾಟಗಾರರ ತ್ಯಾಗ, ಬಲಿದಾನಗಳ ಕತೆಯನ್ನು ಮಕ್ಕಳಿಗೆ ಹೇಳಿ.
- ನಂತರ ವಿದ್ಯಾರ್ಥಿಗಳನ್ನು ಹಲವುಗುಂಪುಗಳನ್ನಾಗಿ ವಿಂಗಡಿಸಿ.
- ಆ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅವರ ಆದರ್ಶವ್ಯಕ್ತಿ ಯಾರು ಮತ್ತು ಅವರು ಏಕೆ ಮೆಚ್ಚುಗೆಯಾಗುತ್ತಾರೆ ಎಂದು ಮಕ್ಕಳನ್ನು ಪ್ರಶ್ನಿಸಿರಿ.
- ಮಕ್ಕಳ ಅಭಿಪ್ರಾಯಕ್ಕೆ ನಿಮ್ಮ ಪ್ರಶಂಸೆಯನ್ನು ಕರತಾಡನದೊಂದಿಗೆ ವ್ಯಕ್ತಪಡಿಸಿ.

## ಚಟುವಟಿಕೆ 2: ಸೃಜನಾತ್ಮಕ ಮನೋವೃತ್ತಿ

- ರಾಷ್ಟ್ರೀಯತೆ ಮತ್ತು ಭಾರತದಸ್ವಾತಂತ್ರ್ಯತೆಯ ಬಗ್ಗೆ ಕೆಲವು ಪದಗಳನ್ನು ಕಾಗದದಚೀಟಿಯಲ್ಲಿ ಬರೆಯಿರಿ. ಪದಗಳು ಇಂತಿರಲಿ: ಸ್ವತಂತ್ರ, ತ್ಯಾಗ, ದೇಶಭಕ್ತಿ, ಮಾತೃಭೂಮಿ, ಭಾರತೀಯ, ತ್ರಿವರ್ಣಧ್ವಜ, ಜೈ ಜವಾನ್;ಜೈ ಕಿಸಾನ್, ವಂದೇಮಾತರಂ, ಸತ್ಯಮೇವಜಯತೆ ಇತ್ಯಾದಿ.
- ನೃತ್ಯ, ಗೀತೆ, ವರ್ಣಚಿತ್ರ, ರೇಖಾಚಿತ್ರ, ಕವನ ಅಥವಾ ಕತೆಗಳ ಮೂಲಕ ಈ ಪದಗಳನ್ನು ತಮ್ಮದೇಆದ ಸೃಜನಾತ್ಮಕ/ನವೀನ ರೀತಿಯಲ್ಲಿ ಪ್ರತಿನಿಧಿಸಲು ಮಕ್ಕಳಿಗೆ ಸೂಚಿಸಿ.
- ಮಕ್ಕಳ ಪ್ರಸ್ತುತಿಗೆ ಮೆಚ್ಚುಗೆ ವ್ಯಕ್ತಪಡಿಸಿ.

## ಚಟುವಟಿಕೆ 3: ಭಾರತದ ಸಾಂಸ್ಕೃತಿಕ ವೈವಿಧ್ಯತೆ

- ತಮಗಿಷ್ಟವಾದ ರಾಜ್ಯದ ಅಥವಾ ಯಾವುದೇ ಇನ್ನಿತರ ಸಂಸ್ಕೃತಿಯ ಬಗ್ಗೆ ನೃತ್ಯವಾಗಲಿ, ಗೀತೆಯಾಗಲಿ ಅಥವಾ ಯಾವುದೆ ಸೃಜನಾತ್ಮಕ ರಚನೆಯನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಳ್ಳುವಂತೆ ಮಕ್ಕಳಿಗೆ ಸೂಚಿಸಿ.
- ಆ ಪ್ರಸ್ತುತಿಯನ್ನು ಅವರು ಆಯ್ಕೆಮಾಡಿಕೊಂಡಿರುವ ಕಾರಣವನ್ನು ತಿಳಿಸಲು ಸೂಚಿಸಿ.
- ಪ್ರದರ್ಶನಾನಂತರ ಅವರ ಪ್ರಸ್ತುತಿಯನ್ನು ಪ್ರಶಂಸಿಸಿ.

# 5.2.4 ಶಾಂತಿ

**ಮನಸಿನ ಸ್ಥಿರತೆಯೆ ಶಾಂತಿ.**

**ಆಹ್ಲಾದಕರ ಮನಸ್ಥಿತಿಯೇ ಶಾಂತಿ.**

**ಇತರರೊಂದಿಗೆ ವಾದಕ್ಕಿಳಿಯದೆ, ಅವರನ್ನು ನೋಯಿಸದೆ ಜೊತೆಯಾಗಿ ಬಾಳುವುದೇ ಶಾಂತಿ.**

**ತನ್ನಬಗ್ಗೆಯೂ ಹಾಗು ಇನ್ನಿತರರಬಗ್ಗೆಯೂ ಸಕಾರಾತ್ಮಕ ಭಾವನೆಯನ್ನು ಹೊಂದಿರುವುದೇ ಶಾಂತಿ.**

**ಶಾಂತಿಯುತ ಭಾವನೆಯು ಸರ್ವರ ಮನ್ಮಾನಸಸರೋವರದಲ್ಲಿಯೇ ಅಂಕುರಗೊಳ್ಳುವುದು.**

**ಉದ್ದೇಶ:**

- **ಶಾಂತಿಯುತ ಭಾವನೆಯ ಬಗ್ಗೆ ವಿಚಾರಮಾಡುವುದು ಹಾಗು ಅದರ ಮಹತ್ವವನ್ನು ಅರಿಯುವುದು.**
- **ಮನಸ್ಸಿನಲ್ಲಿ ಉಂಟಾಗುವ ಶಾಂತಿಯುತ ಭಾವನೆಯ ಅನುಭವವನ್ನು ಕುರಿತು ಬರೆಯುವುದು ಅಥವಾ ರೇಖಾಚಿತ್ರ ಬಿಡಿಸುವುದು.**
- **ಮಕ್ಕಳ ಏಕಾಗ್ರತೆಯ ಸಾಮರ್ಥ್ಯವನ್ನು ಉತ್ತಮಗೊಳಿಸುವುದು.**

**ವಿಧಾನಗಳು: ಶಾಂತಿಯುತ ಜಗತ್ತಿನಕಲ್ಪನೆ, ಶಾಂತಿಪಾಲನೆಯ ನಿಯಮಗಳು, ಸಂಘರ್ಷಗಳ ಕುರಿತು ನಿರ್ಣಯ, ಕತೆಗಳು, ಪಾತ್ರನಿರೂಪಣೆ.**

**ಸಮಯ: 60 ನಿಮಿಷಗಳು**

## ಚಟುವಟಿಕೆ 1: ಶಾಂತಿಯುತ ಜಗತ್ತಿನ ಕಲ್ಪನೆ

**ಮಕ್ಕಳಲ್ಲಿ ಏಕಾಗ್ರತೆಯನ್ನೂ ಮತ್ತು ಮನಸಿನ ಶಾಂತಿಯನ್ನು ಹೆಚ್ಚಿಸುವುದಕ್ಕಾಗಿ ಮಾಡುವ ಒಂದುರೀತಿಯ ಕಸರತ್ತಿದು. ಮಕ್ಕಳನ್ನು ಒಂದು ಕಾಲ್ಪನಿಕಲೋಕಕ್ಕೆ ಕೊಂಡೊಯ್ಯುವ ಸಲುವಾಗಿ ಅವರನ್ನು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಸಿ. ಸೂಚನೆಗಳನ್ನು ನೀಡುವಾಗ ಚುಕ್ಕೆಗಳು ಇರುವ ಸ್ಥಳಗಳಲ್ಲಿ ಸ್ವಲ್ಪ ನಿಂತು ಮುಂದುವರೆಯಿರಿ. " ಮಕ್ಕಳೇ, ನಿಮಗೆಲ್ಲರಿಗೂ ಶಾಂತಿಯುತ ಭಾವನೆಯ ಕುರಿತು ಅರಿವಿರುವುದು ಬಹಳ ಸಂತೋಷದ ವಿಷಯ. ಇಂದಿನ ಕಾರ್ಯಚಟುವಟಿಕೆಯನ್ನು ಒಂದು ಶಾಂತಿಯುತಜಗತ್ತಿನ**

ಪಯಣದೊಂದಿಗೆ ಆರಂಭಿಸೋಣ. ನೀವೆಲ್ಲರೂ ನಿಮ್ಮ ಕಣ್ಣುಗಳನ್ನು ಮುಚ್ಚಿ ಶಾಂತಿಯಿಂದ ವಿಶ್ರಮಿಸಿ. .....ಮನಸಿನಲ್ಲಿ ಮೂಡಿಬರುವ ಯಾವುದೇ ಆಲೋಚನೆಗಳ ಬಗ್ಗೆ ಯೋಚಿಸುವುದನ್ನು ನಿಲ್ಲಿಸಿ.....ನಿಮ್ಮ ಗೆಳೆಯನ ಬಗ್ಗೆ.....ಶಾಲೆಯಬಗ್ಗೆ.....ಯಾವುದೇರೀತಿಯ ಆಲೋಚನೆಬೇಡ.....ಒಂದು ಶಾಂತಿಯುತ ಜಗತ್ತಿನ ಕಲ್ಪನೆಯನ್ನು ಮನದಲ್ಲಿ ಮೂಡಿಸೋಣ.....ಸ್ಥಿರವಾಗಿ ಕುಳಿತುಕೊಳ್ಳಿ.....ಈಗ ನೀವು ಮನದಲ್ಲಿ.... ಒಂದು ಸುಂದರ ಹಾಗು ಬಹುದೊಡ್ಡ ಬಲೂನನನ್ನು ಕಲ್ಪಿಸಿಕೊಳ್ಳಿ.....ಅದು ನೀವು ಸುಲಭವಾಗಿ ಒಳಗೆ ಕೂರಬಹುದಾದ ದೊಡ್ಡ ಬಲೂನು.....ಇದೊಂದು ರೀತಿಯ ನಿಶ್ಯಬ್ದವಾದ ವಿಮಾನ.....ಇದರಲ್ಲಿ ಕುಳಿತು ನೀವು ಭವಿಷ್ಯದೆಡೆಗೆ ಪ್ರಯಾಣಿಸುವಂತೆ...... ಕಲ್ಪಿಸಿಕೊಳ್ಳಿರಿ..... ಒಂದುಉತ್ತಮ ಪ್ರಪಂಚದೆಡೆಗೆ.....ಬಲೂನಿನ ಒಳಗೆ ಕುಳಿತು ತೇಲುತ್ತಾ.... ಒಂದು ವಿಭಿನ್ನವಾದ, ಶಾಂತಿಯುತ ಜಗತ್ತಿನೆಡೆಗೆ ಸಾಗೋಣ.....ಬಲೂನು ತೇಲುತ್ತಾ...... ತೇಲುತ್ತಾ..... ಸಾಗುತ್ತಿದೆ.....ಈಗ ಬಲೂನು ನೆಲದಮೇಲೆ ಬಂದು ನಿಂತಿದೆ.....ನೀವು ಅದರಿಂದ ಹೊರಗೆ ಬರುವಿರಿ..... ಆ ವಿಭಿನ್ನ ಜಗತ್ತು ಬಹು ಸುಂದರವಾಗಿದೆಯಲ್ಲವೇ?.....ನಿಮ್ಮ ಮನವು ಎಷ್ಟು ಉಲ್ಲಾಸವಾಗಿದೆ.....ಅಲ್ಲಿನ ಪ್ರಕೃತಿ ಸೌಂದರ್ಯ ಕಣ್ಮನ ಸೆಳೆಯುವಂತಿದೆಯಲ್ಲವೇ?.....ಅಲ್ಲಿನ ಗಾಳಿಯು ಪರಿಶುದ್ಧವಾಗಿದೆ.....ಅಲ್ಲಿನ ಮನೆಗಳು ಹೇಗಿವೆ?.....ತಂಪಾದ ಕೊಳ....... ಕೊಳದಲ್ಲಿ ವಿಹರಿಸುತ್ತಿರುವ ಹಂಸಗಳು..... ಆ ಸುಂದರಪರಿಸರದಲ್ಲಿ ನೀವು ಈಗ..... ಅಡ್ಡಾಡುವಿರಿ..... ನಿಮ್ಮಮನದಲ್ಲಿ ಪ್ರಶಾಂತತೆಯು ಉಂಟಾಗುತ್ತಿದೆ..... ಆ ಪ್ರಶಾಂತತೆಯನ್ನು ಸಂಪೂರ್ಣವಾಗಿ ಅನುಭವಿಸಿ.....ತಿಳಿಗೊಳದಲ್ಲಿ ಕಾಣುವ ನಿಮ್ಮ ಪ್ರತಿಬಿಂಬವನ್ನು ವೀಕ್ಷಿಸಿ.....ಈ ಪ್ರಶಾಂತ ವಾತವರಣದಲ್ಲಿ ನಿಮ್ಮದೇಹವು ಸಂಪೂರ್ಣವಾಗಿ ವಿಶ್ರಾಂತಸ್ಥಿತಿಯಲ್ಲಿರುವುದನ್ನು ಗಮನಿಸಿ.....ಹಾಗೆಯೇ ಸಾಗುತ್ತಿರುವಾಗ ಎದುರಾಗುವ ಅಲ್ಲಿನ ಜನರಗುಂಪಿನ ಪ್ರಶಾಂತ ಮುಖಭಾವ....., ನಗುಮೊಗವನ್ನು ನೋಡುವಿರಿ.....ನೀವು ನಿಮ್ಮ ಬಲೂನಿಗೆ ಮರಳುವಾಗ ಅವರು ನಗುನಗುತ್ತಾ, ಕೈಬೀಸುತ್ತಾ....... ನಿಮ್ಮನ್ನು ಬೀಳ್ಕೊಡುವರು..... ನೀವು ಬಲೂನಿನಲ್ಲಿ ಕುಳಿತು ಮರಳಿ ಮತ್ತೆ ತರಗತಿಗೆ, ಇಂದಿನ ಸಮಯಕ್ಕೆ ಬರುವಿರಿ.....ನೀವು ತರಗತಿಯಲ್ಲಿ ಕುಳಿತನಂತರ ಬಲೂನು ಈಗ ಕಣ್ಮರೆಯಾಯಿತು..... ನಿಮ್ಮ ಪ್ರಶಾಂತ, ನಿಶ್ಚಲ ಮನದಸ್ಥಿತಿಯನ್ನು ಸ್ವಲ್ಪಕಾಲ ಅನುಭವಿಸಿ.....ಈಗ ನಿಧಾನವಾಗಿ ನಿಮ್ಮ ಕಣ್ಣುಗಳನ್ನು ತೆರೆಯಿರಿ.

- ತಮಗೆ ಉಂಟಾದ ಅನುಭವವನ್ನು ಮೆಲುಕುಹಾಕಲು ಮಕ್ಕಳಿಗೆ ಸ್ವಲ್ಪಕಾಲಾವಕಾಶ ಕೊಡಿ. ತಮ್ಮ ಅನುಭವವನ್ನು ಹಂಚಿಕೊಳ್ಳಲು ಇಚ್ಚಿಸುವ ಮಗುವಿಗೆ ಅವಕಾಶವನ್ನು ಕೊಡಿ. ಮೊದಲು ಅಲ್ಲಿನ ಪ್ರಕೃತಿಯ ಬಗ್ಗೆ, ನಂತರ ತಮಗುಂಟಾದ ಸ್ವಾನುಭವವನ್ನು ಕುರಿತು, ನಂತರ ಇನ್ನಿತರರೊಂದಿಗೆ ಉಂಟಾದ ತಮ್ಮ

ಬಾಂಧವ್ಯವನ್ನು ಕುರಿತು ಅವರ ಮನದಲ್ಲಿ ಮೂಡಿದ ಕಲ್ಪನೆಯ ಬಗ್ಗೆ ವಿವರಿಸಲು ಸೂಚಿಸಿ.

- ತರಗತಿಯ ವಿದ್ಯಾರ್ಥಿಗಳನ್ನು ಹಲವು ಗುಂಪುಗಳನ್ನಾಗಿ ವಿಂಗಡಿಸಿ, ಶಾಂತಿಯುತ ಜಗತ್ತಿನ ದೊಡ್ಡ ರೇಖಾಚಿತ್ರವನ್ನು ರಚಿಸಲು ಸೂಚಿಸಿ. ಎಲ್ಲರೂ ಶಾಂತಿಯುತ ಜೀವನ ನಡೆಸುವುದಕ್ಕಾಗಿ ಯಾವರೀತಿ ನಡೆದುಕೊಳ್ಳಬೇಕು ಎಂದು ಪ್ರಶ್ನಿಸಿ. ತಾವು ರಚಿಸಿದ ಚಿತ್ರವನ್ನು ತರಗತಿಯಲ್ಲಿ ಎಲ್ಲರೆದುರು ಪ್ರದರ್ಶಿಸಿ ಅದರ ಬಗ್ಗೆ ಮಾತನಾಡುವಂತೆ ಸೂಚಿಸಿ.

## ಚಟುವಟಿಕೆ 2: ಶಾಂತಿಯುತ ಜೀವನಕ್ಕಾಗಿ ಪಾಲಿಸಬೇಕಾದ ನಿಯಮಗಳು

- ತಮ್ಮಕುಟುಂಬ, ಶಾಲೆ, ನಗರ ಹಾಗು ದೇಶದಲ್ಲಿ ಹಿಂಸಾಚಾರವಿಲ್ಲದ ಶಾಂತಿಯುತ ಜೀವನಕ್ಕಾಗಿ ಅವಶ್ಯವಿರುವ ಐದು ಅಂಶಗಗಳನ್ನು ಬರೆಯುವಂತೆ ಮಕ್ಕಳಿಗೆ ಸೂಚಿಸಿ.
- ತರಗತಿಯವಾತವರಣವನ್ನು ಆಹ್ಲಾದಕರವಾಗಿಯೂ ಹಾಗು ಶಾಂತಿಯುತವಾಗಿಯೂ ಮಾಡುವುದು ಹೇಗೆಂದು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ.

## ಚಟುವಟಿಕೆ 3: ಸಂಘರ್ಷಣೆ

ಮಕ್ಕಳನ್ನು ಹಲವಾರು ವಿವಿಧ ಗುಂಪುಗಳನ್ನಾಗಿ ವಿಭಜಿಸಿ. ಶಾಲೆಯಲ್ಲಿ ತಮ್ಮಮಧ್ಯೆ ನಡೆಯಬಹುದಾದ ಸಂಘರ್ಷಣೆಗಳನ್ನು ಕುರಿತಂತೆ ಆಲೋಚಿಸಲು ಸೂಚಿಸಿ. (ಉದಾ: ಆಟದಮಧ್ಯೆ ತೋರಬಹುದಾದ ಭಿನ್ನಾಭಿಪ್ರಾಯಗಳು). ಅಂತಹ ಸಮಸ್ಯೆಗಳಿಗೆ ಶಾಂತಿಯುತಪರಿಹಾರವನ್ನು ನೀಡುವಂತೆ ಸೂಚಿಸಿ. ಅವರು ಆಲೋಚಿಸಿದ ಪರಿಹಾರವನ್ನು ಹಾಳೆಯಲ್ಲಿಬರೆದು ಬೇರೊಂದು ಗುಂಪಿಗೆ ನೀಡಲಿ. ಅದೇಸಮಸ್ಯೆಗೆ ಆ ಬೇರೊಂದುಗುಂಪು ಮತ್ತೊಂದು ಪರಿಹಾರವನ್ನು ಸೂಚಿಸಲಿ. ಪ್ರತೀಗುಂಪೂ ತಮಗೆ ತಿಳಿದ ಪರಿಹಾರಗಳನ್ನು ಸೂಚಿಸಿದನಂತರ, ಅವುಗಳಲ್ಲಿ ಸೂಕ್ತವಾದದ್ದು ಯಾವುದೆಂದು ತೀರ್ಮಾನಿಸಲಿ. ಇದನ್ನು ಒಂದು ಕ್ರೀಡೆಯಂತೆ ಪರಿಗಣಿಸಬಹುದು. ಆಟದ ಮೂಲಕ ಹಲವು ಸಮಸ್ಯೆಗಳಿಗೆ ಏಕಕಾಲದಲ್ಲಿ ಪರಿಹಾರಗಳನ್ನು ಹುಡುಕಬಹುದು.

## ಚಟುವಟಿಕೆ 4: ಕತೆ

ಪ್ರಿಯಾ ಬಹಳನಾಚಿಕೆಸ್ವಭಾವದ ಹುಡುಗಿಯಾಗಿದ್ದು, ಯಾವುದೇ ರೀತಿಯ ಆಟಗಳಲ್ಲಾಗಲಿ, ಚಟುವಟಿಕೆಯಲ್ಲಾಗಲಿ ಭಾಗವಹಿಸುತ್ತಿರಲ್ಲಿಲ್ಲ. ಆದರೆ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸುವುದು ಅವಳ ಪ್ರಿಯವಾದಹವ್ಯಾಸವಾಗಿದ್ದು, ಅವಳ ಸ್ನೇಹಿತರಿಗೆಲ್ಲಾ ಅದು ತಿಳಿದಿತ್ತು.

ಒಮ್ಮೆ ಶಾಲೆಯಮ್ಯೆದಾನದಲ್ಲಿ ಕ್ರಿಕೆಟ್ಪಂದ್ಯವು ನಡೆಯುತ್ತಿತ್ತು. ಮಕ್ಕಳೆಲ್ಲಾ ಎರಡು ಗುಂಪುಗಳಾಗಿ, ತಮ್ಮ ನೆಚ್ಚಿನತಂಡವನ್ನು ಸಂಭ್ರಮದಿಂದ ಹುರಿದುಂಬಿಸುತ್ತಿದ್ದರು. ಸೂಕ್ಷ್ಮಸ್ವಭಾವದ ಪ್ರಿಯಾ ಕೂಡ ಸಂತೋಷದಿಂದ ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದಳು. ಟಾಸ್ಗೆದ್ದ ಹಸಿರುತಂಡದ ನಾಯಕ ರವಿ ಮೊದಲು ಬ್ಯಾಟಿಂಗ್ಮಾಡಲು ಮೊದಲಾದನು. ಕೇಸರಿತಂಡದ ನಾಯಕ ರಾಹುಲ್ ಕ್ಷೇತ್ರರಕ್ಷಣೆ ಹಾಗು ಬೌಲಿಂಗ್ಮಾಡಲು ಮುಂದಾದನು.

ಪಂದ್ಯವು ಬಹು ಉತ್ಸಾಹದಿಂದ ಆರಂಭಗೊಂಡಿತು. ಹಸಿರುತಂಡದ ಸತತ 4 ರನ್, 6 ರನ್ಗಳ ಹೊಡೆತವನ್ನು ಕಂಡ ಕೇಸರಿತಂಡದ ಹುರುಪು ಸ್ವಲ್ಪ ಕುಗ್ಗಿತು. ಕೆಲಸಮಯದ ನಂತರ ಎರಡುತಂಡಗಳ ನಡುವೆ ಭಿನ್ನಾಭಿಪ್ರಾಯ ತಲೆದೋರಿತು. ಹಸಿರುತಂಡದ ಬ್ಯಾಟ್ಸ್ಮನ್ ಔಟ್ಆದನೆಂದು ಕೇಸರಿತಂಡದವರು ಆಪಾದಿಸಿದರು. ಆದರೆ ಔಟ್ ಆಗಿಲ್ಲವೆಂದು ಹಸಿರುತಂಡದವರು ವಾದಮಾಡಲಾರಂಭಿಸಿದರು. ಪರಿಣಾಮವಾಗಿ ಎರಡೂತಂಡದ ನಡುವೆ ಜೋರಾದ ವಾಗ್ವಾದ ಆರಂಭವಾಯಿತು.

ಎಲ್ಲರು ಆಟನಿಲ್ಲಿಸಿ ಜಗಳವಾಡಲಾರಂಭಿಸಿದರು. ಜಗಳವು ಹೊಡೆದಾಟಕ್ಕೆ ತಿರುಗಿತು. ಪಂದ್ಯವನ್ನು ವೀಕ್ಷಿಸುತ್ತಿದ್ದ ಪ್ರಿಯಾಳು ತನ್ನಗೆಳೆಯರ ಹೊಡೆದಾಟವನ್ನು ಕಂಡು ಬಹಳ ಹೆದರಿ ಒಂದು ಮರದಹಿಂದೆ ಅವಿತು ಅಳಲಾರಂಭಿಸಿದಳು. ಧಾವಿಸಿದ ನಿರ್ಣಯಕಾರರು ಮತ್ತು ಶಿಕ್ಷಕರು ಮಧ್ಯಸ್ತಿಕೆವಹಿಸಿ ತಂಡಗಳನಡುವಣ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿದರು. ಆವರ ತೀರ್ಮಾನ ಎಲ್ಲರಿಗೂ ಒಪ್ಪಿಗೆಯಾಗಿ ಸಂತೋಷಪಟ್ಟರು. ಮರದಹಿಂದೆ ಅವಿತಿದ್ದ ಪ್ರಿಯಾ ಹೊರಗೆಬಂದು ತನ್ನನೆಚ್ಚಿನ ತಂಡವನ್ನು ಹರ್ಷದಿಂದ ಅಪ್ಪಿದಳು.

ವಾತಾವರಣವು ಆಹ್ಲಾದಕರವಾಗಿರಲು ಹಾಗು ಮುದವಾಗಿರಲು ಶಾಂತಿ ಅತ್ಯವಶ್ಯಕ. ಇದೇರೀತಿ ನಾವು ವಾಸಿಸುತ್ತಿರುವ ಪರಿಸರವೂ ಕೂಡ ಎಲ್ಲರೂ ಹರುಷದಿಂದ ಜೀವಿಸುವಂತೆ ಶಾಂತಿಯುತವಾಗಿರಬೇಕು.

ನೀತಿ: ಶಾಂತಿಯು ನಾವು ಪರಸ್ಪರ ಒಬ್ಬರಿಗೊಬ್ಬರು ನೀಡಬಹುದಾದ ಒಂದು ಅತ್ಯುತ್ತಮ ಬಳುವಳಿ.

ಪ್ರಶ್ನೋತ್ತರಗಳು:

- ಎರಡೂತಂಡಗಳ ನಡುವೆ ಹೋರಾಟವುಂಟಾಗಲು ಕಾರಣವೇನು?
- ನೀವು ತೀರ್ಪುಗಾರರಾದರೆ, ಈ ಸಮಸ್ಯೆಯನ್ನು ಹೇಗೆ ಪರಿಹರಿಸುವಿರಿ?
- ತರಗತಿಯಲ್ಲಿ ಶಾಂತಿಯನ್ನು ಕಾಪಾಡಲು ಏನು ಕ್ರಮ ಕೈಗೊಳ್ಳುವಿರಿ?
- ಶಾಂತಿಯು ಏಕೆ ಅತ್ಯವಶ್ಯಕ? ಸೂಕ್ತ ಅನುಭವಗಳೊಂದಿಗೆ ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ.

ಚಟುವಟಿಕೆ 5: ಶಾಂತಿಯ ಸಂಕೇತಗಳು

- ತರಗತಿಯ ಯೋಜನೆಯನ್ವಯ ಕೈಭಿತ್ತಿಪತ್ರವನ್ನು ತಯಾರಿಸುವುದು.
- ಬಲಗೈ ಹಾಗು ಎಡಗೈ ಮುದ್ರೆಗಳ ಆಕಾರದಲ್ಲಿ ಫಲಕಗಳನ್ನು ಕತ್ತರಿಸಿ, ಅದರಲ್ಲಿ ಶಾಂತಿಯನ್ನು ಕುರಿತಂತೆ ಕೆಲವುಬರಹಗಳನ್ನು ಬರೆದು, ನಂತರ ಎರಡೂ ಕೈಗಳನ್ನು ಅಂಟಿಸಿ ತರಗತಿಯಲ್ಲಿ ತೂಗುಹಾಕಿರಿ.
- ಭಿತ್ತಿಪತ್ರ ಅಥವಾ ಕೊಲಾಜ್ ಸ್ಪರ್ಧೆಯನ್ನು ಏರ್ಪಡಿಸಿ ಅದರಮೂಲಕ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಚಿಸಿ.

# 5.2.5 ಸಹಬಾಳ್ವೆ

ವಿಭಿನ್ನ ಅಭಿಪ್ರಾಯಗಳನ್ನು ಗೌರವಿಸುವುದು, ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವುದು ಮತ್ತು ಇತರರಿಂದ ಕಲಿಯುವ ಗುಣವನ್ನು ಬೆಳೆಸಿಕೊಳ್ಳುವುದು ಬಹಳ ಮುಖ್ಯ.

ಸಹಬಾಳ್ವೆ ಎಂದರೆ ಒಂದುಕುಟುಂಬದವರಂತೆ ಒಗ್ಗಟ್ಟಾಗಿರುವುದು ಎಂದರ್ಥ. ನಾವೆಲ್ಲರೂ ವಿಭಿನ್ನವ್ಯಕ್ತಿತ್ವಗಳನ್ನು ಹೊಂದಿದ್ದರೂ ಕೂಡ ಶಾಂತಿಯುತ ಹಾಗು ಹರ್ಷದಾಯಕ ಬಾಳ್ವೆ ನಡೆಸಲು ನಮಗೆ ಪರಸ್ಪರರ ಅಗತ್ಯವಿದೆ. ಸಂಕಷ್ಟದ ಸಂದರ್ಭಗಳಲ್ಲಿ ನಮಗೆ ಸಹಾಯವೆಸಗಲು ಹಾಗು ನಮ್ಮ ಬಗ್ಗೆ ಕಾಳಜಿವಹಿಸಲು ಇತರರ ಅವಶ್ಯಕತೆಯಿದೆ.

ಅದೇರೀತಿ ನಾವು ಕೂಡ ಬೇರೊಬ್ಬರ ಕಷ್ಟಕರ ಪರಿಸ್ಥಿತಿಯಲ್ಲಿ ಅವರಿಗೆ ಸಹಾಯವೆಸಗಬೇಕು ಮತ್ತು ಕಾಳಜಿವಹಿಸಬೇಕು. ಆದ್ದರಿಂದ ವಿಭಿನ್ನ ವ್ಯಕ್ತಿತ್ವದ ನಾವೆಲ್ಲರೂ ಕೂಡ ಕೂಡಿಬಾಳುವುದನ್ನು ಕಲಿಯಬೇಕು.

ಚುಡಾಯಿಸುವುದು, ಜಗಳವಾಡುವುದು, ಇತರರನ್ನು ಕೆರಳಿಸುವುದು, ಮಾತ್ಸರ್ಯಪಡುವುದು ಮತ್ತು ಕೆಟ್ಟಪದಗಳಿಂದಲಾಗಲಿ ಅಥವಾ ಅನುಚಿತವರ್ತನೆಯಿಂದಾಗಲಿ ಸ್ಪಂದಿಸುವುದನ್ನು ನಿಗ್ರಹಿಸುವಲ್ಲಿ ಈ ಪ್ರಸ್ತುತ ಪಾಠವು ಸಹಾಯಮಾಡುತ್ತದೆ.

ಉದ್ದೇಶ:

- ಸಹಕಾರಮನೋಭಾವದಿಂದ ಸಮಸ್ಯೆಗಳನ್ನು ಪರಿಹರಿಸುವುದನ್ನು ಮಕ್ಕಳು ಕಲಿವರು.
- ಭ್ರಾತೃತ್ವದ ಮನೋಭಾವವನ್ನು ಮಕ್ಕಳು ಬೆಳೆಸಿಕೊಳ್ಳುವರು.
- ನಿಸ್ವಾರ್ಥಮನೋಭಾವದಿಂದ ಇತರರಿಗೆ ಕಾಳಜಿ ತೋರಲು ಕಲಿವರು.

ವಿಧಾನ: ಕತೆಹೇಳುವುದು, ತರಗತಿಯಲ್ಲಿನ ಕಾರ್ಯಚಟುವಟಿಕೆಗಳು, ಕ್ರೀಡೆಗಳು ಮತ್ತು ಚರ್ಚೆಗಳು.

ಸಮಯ: 45 ನಿಮಿಷಗಳು

**ಚಟುವಟಿಕೆ 1: ಸ್ವಾರ್ಥ ತಂದ ದುರಂತ – ಆಫ್ರಿಕಾದ ಒಂದು ಜನಪದ ಕತೆ**

ಆಫ್ರಿಕಾದ ಹುಲ್ಲುಗಾವಲಿನಲ್ಲಿ ಬೆಳೆಯುವ ಗಿಡವೊಂದಕ್ಕೆ ನಾಲ್ಕುಎಲೆಗಳು. ನಾಲ್ಕುಎಲೆಗಳೂ ಕೂಡಿ ನೀರು ಮತ್ತು ಆಹಾರವನ್ನು ಹಂಚಿಕೊಂಡು ಸಂತೋಷದಿಂದಿದ್ದವು. ಅವು ಸದಾ ನಗುನಗುತ್ತಾ ಮಾತನಾಡಿಕೊಂಡು ಹರ್ಷದಿಂದಿದ್ದವು. ಕೆಲವೊಮ್ಮೆ ಗಾಳಿಯು ತೂಗುಯ್ಯಾಲೆಯೊಂದಿಗೆ ಸಂತೋಷದಿಂದ ಕಣ್ಣುಮುಚ್ಚಾಲೆಯಾಟವಾಡುತ್ತಿದ್ದವು.

ಹೀಗಿದ್ದಾಗ ಒಮ್ಮೆ ಇದ್ದಕ್ಕಿದ್ದಂತೆ ಕೋಪಗೊಂಡ ದೊಡ್ಡಎಲೆ "ನಾನಿನ್ನುಮುಂದೆ ನೀರನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದಿಲ್ಲ" ಎಂದು ಬಿರುಸಾಗಿ ನುಡಿಯಿತು. ಬೇರಿನಿಂದ ವಸರುತ್ತಿದ್ದ ನೀರನ್ನು ಅದು ಇನ್ನಿತರ ಮೂರುಎಲೆಗಳಿಗೆ ತಲುಪದಂತೆ ತಡೆಯಿತು. ದೊಡ್ಡಎಲೆಯ ಈ ವರ್ತನೆಯಿಂದ ಬೇಸರಗೊಂಡ ಇತರ ಮೂರುಎಲೆಗಳು ದಾಹದಿಂದ ಬಳಲಿದವು. ಮರುದಿನ ಮತ್ತೆ ಆ ದೊಡ್ಡ ಎಲೆಯು "ಇನ್ನುಮುಂದೆ ಆಹಾರವನ್ನು ಕೂಡ ನಿಮ್ಮೊಂದಿಗೆ ನಾನು ಹಂಚಿಕೊಳ್ಳುವುದಿಲ್ಲ" ನುಡಿಯಿತು. ಇತರ ಎಲೆಗಳಿಗೆ ಈಗ ದಾಹದೊಂದಿಗೆ ಹಸಿವೂ ಸೇರಿ ಕಂಗೆಟ್ಟವು.

ನಿಧಾನವಾಗಿ ಆ ಎಲೆಗಳು ಬಾಡಿ ಒಣಗಲಾರಂಭಿಸಿದವು. ಕೆಲದಿನಗಳಲ್ಲಿ ಆ ಮೂರು ಎಲೆಗಳು ಇಹಲೋಕ ತ್ಯಜಿಸಿದವು. ಇದರಿಂದ ದೊಡ್ಡಎಲೆಗೆ ಬಹು ಸಂತೋಷವಾಯಿತು. ಈಗ ತಾನೊಬ್ಬನೇ ಎಲ್ಲಾ ನೀರು ಮತ್ತು ಆಹಾರವನ್ನು ಸೇವಿಸಬಹುದು ಎಂದು ಆನಂದಪಟ್ಟಿತು. ಆದರೆ ಕ್ರಮೇಣ ಅದೂ ದಾಹ ಮತ್ತು ಹಸಿವೆಯಿಂದ ಬಳಲಲರಾಂಭಿಸಿತು. ಆದದ್ದಾದರೂ ಏನು?!! ಎಲೆಗಳಿಲ್ಲದ ಗಿಡವು ಬಾಡಲಾರಂಭಿಸಿತ್ತು. ಬೇರುಗಳು ಒಣಗುತ್ತಾ, ಆಹಾರ ಮತ್ತು ನೀರನ್ನು ಎಲೆಗೆ ಒದಗಿಸುವಲ್ಲಿ ವಿಫಲವಾದವು. ತನ್ನ ಸ್ವಾರ್ಥತೆಯಿಂದ ಇನ್ನಿತರ ಎಲೆಗಳಿಗೆ ಕೇಡುಬಯಸಿದ ದೊಡ್ಡಎಲೆಗೆ ತನ್ನ ಕಾಲಮೇಲೆ ತಾನೆ ಚಪ್ಪಡಿಎಳೆದುಕೊಂಡಂತಾಗಿ ನೀರು ಮತ್ತು ಆಹಾರ ದೊರೆಯದಂತಾಯಿತು. ಇತರ ಎಲೆಗಳು ಜೀವಂತವಾಗಿ ಹರುಷದಿಂದ್ದಾಗ ಅದೂ ಕೂಡ ಆನಂದದಿಂದಿತ್ತು. ಈಗ ಇತರ ಎಲೆಗಳ ರೀತಿ ಅದೂ ಕೂಡ ಸಾವಿನೆಡೆ ಧಾವಿಸಿತು.

**ಪ್ರಶ್ನೋತ್ತರಗಳು:**

- ಎಲೆಗಳು ಆರಂಭದಲ್ಲಿ ಹರ್ಷದಿಂದಿದ್ದವು ಏಕೆ?
- ಒಂದುದಿನ ದೊಡ್ಡಎಲೆಯು ಏನುಮಾಡಿತು?
- ದೊಡ್ಡಎಲೆಯ ಅನುಚಿತ ವರ್ತನೆಗೆ ಕಾರಣವೇನು?
- ಇನ್ನಿತರ ಮೂರುಏಲೆಗಳಿಗೆ ಏನಾಯಿತು?
- ಕೊನೆಗೆ ದೊಡ್ಡಎಲೆಗೆ ಉಂಟಾದ ಪರಿಣಾಮವೇನು?

**ಚಟುವಟಿಕೆ 2:** ಆರು ಮಕ್ಕಳಂತೆ ತರಗತಿಯ ಮಕ್ಕಳನ್ನು ಗುಂಪುಗಳನ್ನಾಗಿ ವಿಂಗಡಿಸಿ. ಇತರ ಸಂಸ್ಕೃತಿಗೆಸೇರಿದ, ತಮ್ಮ ಸಂಸ್ಕೃತಿಯಲ್ಲಿಲ್ಲದ ಒಂದು ಹಬ್ಬವನ್ನು ಕುರಿತು ಭಿತ್ತಿಪತ್ರವನ್ನು ರಚಿಸುವಂತೆ ಸೂಚಿಸಿ. ಇನ್ನಿತರ ಪೂರಕ ಅಂಶಗಳಾದ ಸಂಗೀತ, ವೇಷಭೂಷಣ, ಆಹಾರಪದ್ಧತಿ ಇತ್ಯಾದಿಗಳನ್ನು ಕೂಡ ಅದಕ್ಕೆ ಸೇರಿಸಬಹುದು ಎಂದು ಸಲಹೆನೀಡಿ.

**ಚಟುವಟಿಕೆ 3:** ಐದರಿಂದ ಆರು ಮಕ್ಕಳಂತೆ ತರಗತಿಯ ಮಕ್ಕಳನ್ನು ಗುಂಪುಗಳನ್ನಾಗಿ ವಿಭಜಿಸಿ. ತಮಗೆ ತಿಳಿಯದ ಹೊಸಭಾಷೆ ಅಥವಾ ಪ್ರಾದೇಶಿಕಭಾಷೆಯ ಜನಪದಗೀತೆಯನ್ನು ಕಲಿಯುವಂತೆ ಪ್ರತೀಗುಂಪಿಗೂ ಸೂಚಿಸಿ. ಪ್ರತೀಗುಂಪೂ ತಮ್ಮ ಗೀತೆಯನ್ನು ತರಗತಿಯಲ್ಲಿ ಪ್ರಸ್ತುತಪಡಿಸಲಿ. ಈ ಕಾರ್ಯಚಟುವಟಿಕೆಯ ಮೂಲಕ ಅವರ ಜ್ಞಾನವೃಹೆಚ್ಚುವ ರೀತಿಯಲ್ಲಿ ಅವರು ಏನನ್ನು ಕಲಿತರೆಂದು ಮಕ್ಕಳೊಂದಿಗೆ ಚರ್ಚಿಸಿ.

**ಚಟುವಟಿಕೆ 4:**

- ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ನಿಲ್ಲಲಿ.
- ಅವರು ತಮ್ಮ ಕಣ್ಣುಗಳನ್ನು ಮುಚ್ಚಿ ತಾವುನಿಂತಲ್ಲಿಯೇ ಸುತ್ತಿಬರಲು ಸೂಚಿಸಿ.
- ನೀವು ಸೂಚನೆನೀಡಿದಾಗ ಅವರು ತಿರುಗುವುದನ್ನು ನಿಲ್ಲಿಸಿ, ಕಣ್ಣು ತೆರೆಯಲಿ.
- ಅವರು ಕಣ್ಣು ತೆರೆದಾಗ ಅವರಎದುರಿನಲ್ಲಿರುವ ಸಹ ವಿದ್ಯಾರ್ಥಿಯ ಯಾವ ಗುಣವನ್ನು ಅವರುಮೆಚ್ಚಿ ತಮ್ಮ ವ್ಯಕ್ತಿತ್ವದಲ್ಲಿ ಅದನ್ನು ಅಳವಡಿಸಿಕೊಳ್ಳಲು ಇಚ್ಚಿಸುವರೆಂದು ತಿಳಿಸಲು ಸೂಚಿಸಿ. ಆ ವಿದ್ಯಾರ್ಥಿಯಿಂದ ತಾವುಪಡೆದ ಸಹಾಯವನ್ನು ಕುರಿತ ಘಟನೆಯನ್ನು ಹಂಚಿಕೊಂಡು, ಅದನ್ನು ಮೆಚ್ಚಿ ಅದಕ್ಕೆ ತಕ್ಕ ಕೃತಜ್ಞತೆಯನ್ನು ಸಲ್ಲಿಸಲಿ.

## 5.2.6 ಸ್ವಚ್ಛತೆ

ಸ್ವಚ್ಛತೆಯು ದೇವರ ಪ್ರತಿರೂಪ. ನಮ್ಮ ದಿನಚರಿಯ ಅಂಗಗಳಾದ ಮನೆ, ಶಾಲೆ, ತರಗತಿ, ನೆರೆಹೊರೆ ಮತ್ತು ನಾವು ವಾಸಿಸುವ ಪರಿಸರವು ಪರಿಶುದ್ಧವಾಗಿರುವುದು ಬಹಳ ಮುಖ್ಯ. ವೈಯಕ್ತಿಕಸ್ವಚ್ಛತೆಯ ಪ್ರಾಮುಖ್ಯತೆಯೊಂದಿಗೆ ಪರಿಸರದ ಪರಿಶುದ್ಧತೆಯೂ ಬಹು ಮುಖ್ಯ ಎಂದು ಅರಿಯಬೇಕು.

ವಸ್ತುಗಳಿಗೆಅಂಟಿರುವ ಧೂಳು, ಕಸ ಅಥವಾ ತ್ಯಾಜ್ಯವಸ್ತುಗಳನ್ನು ಸಾಬೂನಿನಿಂದಾಗಲಿ ಅಥವಾ ಉಪಕರಣಗಳ ಸಹಾಯದಿಂದಲಾಗಲಿ ಸ್ವಚ್ಛಗೊಳಿಸುವುದು ಹಲವಾರು ವಿಧಾನಗಳಲ್ಲಿ ಒಂದು. ಸ್ವಚ್ಛಾತಾಭ್ಯಾಸವು ಹಲವಾರು ಸ್ವಚ್ಛತಾಕ್ರಿಯೆಗಳ ಮೂಲಕ ರೋಗಗಳ ತಡೆಗಟ್ಟುವಿಕೆಯ ಮೇಲೆ ಕೇಂದ್ರೀಕರಿಸುತ್ತದೆ. ಪರಿಸರಸ್ವಚ್ಛತೆಯ ಮೌಲ್ಯದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದರ ಸಲುವಾಗಿ ಈ ಕೆಳಗಿನ ಅಂಶಗಳನ್ನು ನೀಡಲಾಗಿದೆ:

- ತಿಂಡಿ/ಊಟ ಮಾಡುವಾಗ ಆಹಾರವನ್ನು ಕೆಳಗೆ ಬೀಳಿಸದಂತೆ ತಿನ್ನಲು ಮಕ್ಕಳಿಗೆ ಕಲಿಸಿರಿ.
- ಹಾಳೆತುಂಡುಗಳನ್ನಾಗಲಿ, ಕಸ–ಕಡ್ಡಿಗಳನ್ನಾಗಲಿ ಕೆಳಗೆ ಎಸೆಯದಂತೆ ಮಕ್ಕಳಿಗೆ ಎಚ್ಚರಿಸಿ. ಬದಲಾಗಿ ಅವುಗಳನ್ನು ಕಸದಡಬ್ಬಿಗಳಲ್ಲಿ ಮಾತ್ರ ಹಾಕುವಂತೆ ಮಕ್ಕಳಲ್ಲಿ ಅಭ್ಯಾಸ ಮಾಡಿಸಿ.
- ಆಟಿಕೆಗಳನ್ನು ಮತ್ತು ಪುಸ್ತಕಗಳನ್ನು ಒಪ್ಪವಾಗಿ ಓರಣಗೊಳಿಸುವಂತೆ ವಿದ್ಯಾರ್ಥಿಗಳಿಗೆ ಬೋಧಿಸಿ.
- ಮನೆಯಿಂದ ಹೊರಗೆ ಹೊರಟಾಗ, ಕಸಗಳನ್ನು ಹೊರಗೆ ಬೀದಿಯಲ್ಲಿ ಹಾಕುವುದನ್ನು ತಡೆಗಟ್ಟುವ ಸಲುವಾಗಿ ಸದಾ ಒಂದು ಚೀಲವನ್ನು ಜೊತೆಗೆ ಇಟ್ಟುಕೊಳ್ಳುವ ಪರಿಪಾಠವನ್ನು ಮಕ್ಕಳಿಗೆ ಕಲಿಸಿರಿ.
- ಶಾಲೆ, ಮನೆ ಹಾಗು ಮನೆಯಸುತ್ತಮುತ್ತ ಕಸಗಳನ್ನು ಹರಡದೆ ವಾತವರಣದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಮಕ್ಕಳಿಗೆ ಬೋಧಿಸಿ. ಅದೇರೀತಿ ನಗರ ಸ್ವಚ್ಛತೆಯ ಪ್ರಾಮುಖ್ಯತೆಯ ಬಗ್ಗೆ ಕೂಡ ಮನವರಿಕೆ ಮಾಡಿಸಿ.

ಉದ್ದೇಶ:


- ವೈಯಕ್ತಿಕನೈರ್ಮಲ್ಯ ಹಾಗು ಸ್ವಚ್ಛತೆಯು ಬಹು ಮುಖ್ಯವೆಂದು ಮಕ್ಕಳು ಅರಿಯುವರು.
- ವೈಯಕ್ತಿಕನೈರ್ಮಲ್ಯನ್ನು ಕಾಪಾಡಿಕೊಳ್ಳುವುದು ಹೇಗೆಂದು ಮಕ್ಕಳು ಅರಿತು ಅದರ ಬಗ್ಗೆ ಚರ್ಚಿಸುವರು.

ವಿಧಾನ: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು, ಕತೆ, ಚಿತ್ರಸಂವಹನಚಟುವಟಿಕೆ

ಸಮಯ: 60 ನಿಮಿಷಗಳು

## ಚಟುವಟಿಕೆ 1: ಚಿತ್ರಸಂವಹನ

**ಈ ಚಿತ್ರವನ್ನು ಮಕ್ಕಳಿಗೆ ತೋರಿಸಿ ನಂತರ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿರಿ:**



- ಚಿತ್ರದಲ್ಲಿ ಜನರು ಏನು ಮಾಡುತ್ತಿರುವರು?
- ಆಗ ಸಮಯ ಎಷ್ಟಿರಬಹುದು?
- ನಿದ್ದೆ ಕಳೆದು ಮುಂಜಾನೆ ಎಚ್ಚರಗೊಂಡ ನಂತರ ನೀವು ಮಾಡುವ ಮೊದಲ ಕೆಲಸ ಯಾವುದು?
- ನೀವು ಹಲ್ಲುಗಳನ್ನು ಸ್ವಚ್ಛಗೊಳಿಸದಿದ್ದಲ್ಲಿ ಆಗುವ ಪರಿಣಾಮವೇನು?
- ಪ್ರತಿದಿನವೂ ಸಾಬೂನಿನಿಂದ ಸ್ನಾನ ಮಾಡಬೇಕು ಏಕೆ?
- ಒಂದುವಾರದಲ್ಲಿ ಎಷ್ಟುಬಾರಿ ತಲೆಗೆ ಸ್ನಾನಮಾಡಬೇಕು?
- ಸ್ನಾನಮಾಡಿದ ಕೂಡಲೇ ಆಟವಾಡಲು ನಿಮ್ಮ ತಾಯಿಯು ಒಪ್ಪುತ್ತಾರೆಯೇ? ಏಕೆ?

## ಚಟುವಟಿಕೆ 2: ತರಗತಿಯಲ್ಲಿನ ಕಾರ್ಯಚಟುವಟಿಕೆ

ನಮ್ಮ ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ಅಗತ್ಯವಿರುವ ಸಣ್ಣ ವಿಷಯಗಳ ಮಹತ್ವವನ್ನು ತಿಳಿಸಲು ಕೆಲವು ಪ್ರಶ್ನೆಗಳನ್ನು ಕೇಳಿ:

- ನಿಮ್ಮಕೈಗಳನ್ನು ಯಾವಾಗ ಸ್ವಚ್ಛಗೊಳಿಸುವಿರಿ?
- ನಿಮ್ಮಕೈಗಳನ್ನು ನೀವು ಯಾವರೀತಿ ಸ್ವಚ್ಛಗೊಳಿಸುವಿರಿ?
- ಹಲ್ಲುಗಳನ್ನು ಸ್ವಚ್ಛಗೊಳಿಸುವ ಅಗತ್ಯತೆ ಏಕೆ?
- ತಮ್ಮ ತರಗತಿಯನ್ನು ಒಪ್ಪವಾಗಿ, ಸ್ವಚ್ಛವಾಗಿ ಇಟ್ಟುಕೊಳ್ಳುವಲ್ಲಿ ಮಕ್ಕಳು ಶಿಕ್ಷಕರಿಗೆ ಯಾವರೀತಿ ಸಹಾಯಮಾಡಬಹುದು?

ಪ್ರತಿದಿನ ಮಧ್ಯಾಹ್ನ ಭೋಜನಾನಂತರ ಒಂದು ಒದ್ದೆಬಟ್ಟೆಯಿಂದ ತರಗತಿಯ ನೆಲವನ್ನು ಸ್ವಚ್ಛಗೊಳಿಸುವುದರ ಬಗ್ಗೆ ಮಕ್ಕಳನ್ನು ಪ್ರೋತ್ಸಾಹಿಸಿ.

ತರಗತಿಯಲ್ಲಿ ಪಾಲಿಸಬೇಕಾದ ನಿಯಮಗಳು:

- ನೆಲದಮೇಲೆ ಬಿದ್ದಿರುವ ಕಸಕಡ್ಡಿಗಳನ್ನು ಆರಿಸಿ ತೆಗೆದುಹಾಕುವುದು.
- ಶಾಲಾವಧಿಮುಗಿದ ನಂತರ ಫಲಕವನ್ನು ಸ್ವಚ್ಛಗೊಳಿಸಲು ಸಹಕರಿಸುವುದು.
- ತರಗತಿಯಲ್ಲಿನ ಮೇಜು ಮತ್ತು ಕುರ್ಚಿಗಳನ್ನು ಅಂದವಾಗಿ ಹಾಗು ಒಪ್ಪವಾಗಿ ಜೋಡಿಸುವುದು.
- ತರಗತಿಯ ಮೇಜುಗಳಮೇಲೆ ಯಾವುದೇ ಪುಸ್ತಕಗಳನ್ನು ಬಿಟ್ಟುಹೋಗದಂತೆ ಖಾತ್ರಿಪಡಿಸಿಕೊಳ್ಳಿ.
- ಮೇಜು ಮತ್ತು ಕುರ್ಚಿಗಳ ಮೇಲೆ ಏನನ್ನೂ ಕೂಡ ಬರೆಯದಂತೆ ಎಚ್ಚರವಹಿಸಿ.
- ಶೌಚಾಲಯಬಳಕೆಯ ನಂತರ ಅದನ್ನು ನೀರಿನಿಂದ ಶುದ್ಧಗೊಳಿಸುವುದು.
- ಶೌಚಾಲಯದ ಬಳಕೆಯನಂತರ ಹಾಗು ಭೋಜನದನಂತರ ಕೈಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿ.
- ಜನರು ಓಡಾಡುವಾಗ ಜಾರಿ ಬೀಳಬಹುದಾದ ಸಾಧ್ಯತೆಯಿರುವುದರಿಂದ ನೆಲದಮೇಲೆ ನೀರುಚೆಲ್ಲದಂತೆ ಎಚ್ಚರವಹಿಸಿ.

## ಚಟುವಟಿಕೆ 3: ಕತೆ

ಒಂದುದಿನ ದೀಪ ಮತ್ತು ಅವಳ ಗೆಳೆಯರು ಒಂದು ಥೀಂ ಪಾರ್ಕ್‌ಗೆ ಹೋದರು. ಅಂದು ಬೆಳಿಗ್ಗೆ ಅವರು ಬಹಳಬೇಗ ಆಗಮಿಸಿದ್ದುದರಿಂದ ವಿಹಾರೋದ್ಯಾನದಲ್ಲಿ ಹೆಚ್ಚು ಜನರಿರಲಿಲ್ಲ. ಉದ್ಯಾನವನವು ಬಹುಸ್ವಚ್ಛವಾಗಿ ಸುಂದರವಾಗಿ ಕಾಣುತ್ತಿತ್ತು. ಅಲ್ಲಿದ್ದ ಮಾಲಿಯು ಸಂತೋಷದಿಂದಹಾಡುತ್ತಾ ತನ್ನ ಸ್ವಚ್ಛತಾಕಾರ್ಯವನ್ನು ಮುಂದುವರೆಸಿದ್ದನು. ಮುಂಜಾನೆಯ ಉದ್ಯಾನವನವು ಬಹು ಸ್ವಚ್ಛವಾಗಿದ್ದರೂ ಕೂಡ ಮಾಲಿಯು ಹರ್ಷದಿಂದ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದುದನ್ನು ಕಂಡ ಮಕ್ಕಳು ಆಶ್ಚರ್ಯಚಕಿತರಾದರು. ಅವನನ್ನು ಅಪಹಾಸ್ಯ ಮಾಡಲಾರಂಭಿಸಿದರು. ಮಕ್ಕಳ ಅಣಕಿನತ್ತ ಎಳ್ಳಷ್ಟೂ ಗಮನಹರಿಸದ ಮಾಲಿಯು ತನ್ನ ಕಾರ್ಯದಲ್ಲಿ ಮಗ್ನನಾಗಿದ್ದನು. ಅವನ ಉದಾಸೀನತೆಯಿಂದ ಇನ್ನಷ್ಟು ಪ್ರಚೋದನೆಗೊಳಗಾದ ಮಕ್ಕಳು ಎಲ್ಲೆಡೆ ಪುಸ್ತಕದ ಹಾಳೆಗಳನ್ನು, ತಮ್ಮ ಚೀಲಗಳನ್ನು ತೂರಲಾರಂಭಿಸಿದರು ಮಾಲಿಗೆ ಇನ್ನಷ್ಟು ಕೆಲಸ ನೀಡುವುದರ ಸಲುವಾಗಿ. ನಂತರ ನಿಧಾನವಾಗಿ ಆಗಮಿಸುತ್ತಿದ್ದ ಸಂದರ್ಶಕರು ದೀಪ ಮತ್ತು ಅವಳ ಸ್ನೇಹಿತರ ಈ ಕಾರ್ಯವನ್ನು ಕಂಡು, ಅದು ಉದ್ಯಾನವನದ ವಿನೋದಚಟುವಟಿಕೆಗಳಲ್ಲಿ ಒಂದಾಗಿರಬಹುದೆಂದು ಭಾವಿಸಿದರು. ಅವರೂ ಕೂಡ ಕಸ, ಹಾಳೆಗಳತುಂಡುಗಳನ್ನು ಎರಚಾಡಲಾರಂಭಿಸಿದರು. ಜನರು ಹೆಚ್ಚು ಹೆಚ್ಚು ಆಗಮಿಸುತ್ತಿದ್ದಂತೆ ಉದ್ಯಾನವನವೂ ಕಸ-ಕಡ್ಡಿಗಳಿಂದ ತುಂಬಿಹೋಯಿತು. ಆ ಕಸದರಾಶಿಯನ್ನು ತಾನೊಬ್ಬನೇ ಸ್ವಚ್ಛಮಾಡಲಾರದೆ ಮಾಲಿಯು ಸೋತುಹೋದನು. ಆದರೆ ಇದನ್ನೆಲ್ಲಾ ಗಮನಿಸದ ಸ್ಥಿತಿಯಲ್ಲಿತ್ತು ಅಲ್ಲಿದ್ದ ಜನಸಮೂಹ. ಇದೆಲ್ಲದರ ನಡುವೆ ಒಂದು ವಿಚಿತ್ರವಾದ ಪರಿಸ್ಥಿತಿಯು ಉಂಟಾಯಿತು. ಸಮಯಕಳೆಯುತ್ತಾ ಉದ್ಯಾನವನದ ಚಟುವಟಿಕೆಗಳಲ್ಲಿ ಭಾಗವಹಿಸುವ ಜನರ ಸಂಖ್ಯೆ ಇಳಿಮುಖವಾಯಿತು. ಉದ್ಯಾನವನವನ್ನೆಲ್ಲಾ ಆವರಿಸಿದ್ದ ಕಸದರಾಶಿಯನ್ನೇ ನೋಡುತ್ತಾ ನಿಂತುಬಿಟ್ಟರು ಆ ಜನರು. ಹೊತ್ತುಕಳೆದಂತೆ ಅಲ್ಲಿನ ಆಟಗಳಲ್ಲಿ ಆಡುವವರೇ ಇಲ್ಲದಂತಾದರು.

ತಮ್ಮಿಂದಾದ ಪರಿಸರಮಾಲಿನ್ಯವನ್ನು ಮನಗಂಡ ಜನತೆ ಲಜ್ಜಿತರಾದರು. ಮಾಲಿಯ ಅಸಹಾಯಕ ಪರಿಸ್ಥಿತಿಯನ್ನು ಕಂಡ ಅವರು ಉದ್ಯಾನವನದ ಸ್ವಚ್ಛತಾಕಾರ್ಯದಲ್ಲಿ ತೊಡಗಿದರು. ಜನರ ಕಾರ್ಯವನ್ನು ಪ್ರೋತ್ಸಾಹಿಸುತ್ತಾ ಮಾಲಿಯು ಕೂಡ ಎಂದಿನಂತೆ ಹಾಡನ್ನು ಗುನುಗುತ್ತಾ ತನ್ನ ಕರ್ತವ್ಯವನ್ನು ಮುಂದುವರೆಸಿದನು. ಇದೊಂದು ವಿನೋದಕರಚಟುವಟಿಕೆಯಾಗಿ ಮಾರ್ಪಾಡಾಯಿತು. ಅಂದಿನಿಂದ ಉದ್ಯಾನವನದಲ್ಲಿ ಒಂದು ಹೊಸ ಚಟುವಟಿಕೆಯು ಆರಂಭವಾಯಿತು. ಸಂದರ್ಶಕ ಜನತೆಯು ಹಾಡುತ್ತಾ ಪೊರಕೆ, ಬ್ರಶ್‌ಗಳಿಂದ ಉದ್ಯಾನವನವನ್ನು ಸ್ವಚ್ಛಗೊಳಿಸುವ ಕ್ರಿಯೆಯು ಆರಂಭವಾಯಿತು. ಮಾಲಿಯ ಕೆಲಸವು ಎಷ್ಟು ಮುಖ್ಯವೆಂದು ದೀಪ ಮತ್ತು ಅವಳ ಗೆಳೆಯರು ಅರಿತರು.

ಇನ್ನುಮುಂದೆ ತಾವು ಉದ್ಯಾನವನದ ಸ್ವಚ್ಛತೆಯನ್ನು ಕಾಪಾಡುವರೆಂದು ಅವರು ಮಾಲಿಗೆ ವಚನವಿತ್ತರು.

## ಪ್ರಶ್ನೋತ್ತರಗಳು:

- ದೀಪ ಮತ್ತು ಅವಳ ಗೆಳೆಯರು ಉದ್ಯಾನವನವನ್ನು ಹಾಳುಮಾಡಲು ಕಾರಣವೇನು?
- ಜನರೆಲ್ಲರೂ ವಿಹಾರೋದ್ಯಾನದ ಸ್ವಚ್ಛತಾಕ್ರಿಯೆಯಲ್ಲಿ ಏಕೆ ಪಾಲ್ಗೊಂಡರು?
- ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸುಂದರವಾಗಿಡುವಲ್ಲಿ ನಿಮ್ಮ ಕೊಡುಗೆ ಏನು?
- ಮಾಲಿಯ ವರ್ತನೆಯ ಮೂಲಕ ನೀವು ಅರಿತ ಅವನ ಗುಣಗಳಾವುವು?

## 5.2.7 ಪರಿಸರ ಸಂರಕ್ಷಣೆ ಹಾಗು ಪ್ರಕೃತಿಯ ಬಗ್ಗೆ ಗೌರವ

ಸಮಸ್ತ ಜೀವಂತಜೀವಿಗಳಾದ ಗಿಡಮರಗಳು, ಪ್ರಾಣಿಪಕ್ಷಿಗಳಿಗೆಲ್ಲಾ ನಮ್ಮ ಭೂಮಿತಾಯಿಯೇ ಆಶ್ರಯಧಾತೆ. ಆದ್ದರಿಂದಲೇ ಭೂಮಿಯನ್ನು 'ಭೂಮಿತಾಯಿ' ಎಂದು ಸಂಬೋಧಿಸುತ್ತೇವೆ. ನಮ್ಮೆಲ್ಲರ ಪಾಲನೆ ಪೋಷಣೆಗೆ ಅವಶ್ಯವಿರುವ ಗಾಳಿ, ನೀರು, ಬೆಳಕು, ವಸತಿ, ಆಹಾರಗಳನ್ನು ಪೂರೈಸಿ ನಮ್ಮನ್ನು ಪೊರೆಯುವವಳು ಭೂತಾಯಿ.

ಪ್ರಕೃತಿಯಲ್ಲಿನ ಎಲ್ಲ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆಯುತ್ತಾ ಒಂದು ನಿಯಮಕ್ಕೆ ಒಳಪಟ್ಟಿವೆ. ಕತ್ತಲಿನ ನಂತರ ಬೆಳಗು, ಮಳೆಗಾಲದ ನಂತರ ಚಳಿಗಾಲ, ಬೀಜಬಿತ್ತನೆ, ನಾಟಿ, ಕಟಾವು ಹೀಗೆ ಎಲ್ಲವೂ ಕಾಲಮಾನಕ್ಕನುಸಾರವಾಗಿ ನಡೆಯುವುದು. ನೈಸರ್ಗಿಕನಿಯಮಕ್ಕನುಸಾರವಾಗಿ ನಾವು ನಡೆಯದಿದ್ದಲ್ಲಿ, ಗಿಡಮರಗಳು, ಪ್ರಾಣಿಪಕ್ಷಿಗಳಾದಿಯಾಗಿ ಎಲ್ಲವೂ ಸಂಕಷ್ಟಕ್ಕೀಡಾಗುವುವು. ನಮ್ಮ ಹಿರಿಯರು ಮತ್ತು ತಂದೆತಾಯಿಯರನ್ನು ನಾವು ಯಾವರೀತಿ ಗೌರವಿಸುತ್ತೇವೆಯೋ ಅದೇರೀತಿ ಪ್ರಕೃತಿಮಾತೆಯನ್ನು ಕೂಡ ಗೌರವಿಸಬೇಕು.

ಉದ್ದೇಶ:

- ಪ್ರಕೃತಿಯ ಬಗ್ಗೆ ಜವಾಬ್ದಾರಿಯುತ ಭಾವನೆಯನ್ನು ಮಕ್ಕಳು ಬೆಳೆಸಿಕೊಳ್ಳುವರು.
- ಪ್ರಕೃತಿಯ ಪೋಷಣೆಯ ಸಲುವಾಗಿ ತಮ್ಮ ಕೊಡುಗೆಯೇನೆಂಬುದರ ವಿವಿಧ ಮಾರ್ಗಗಳ ಬಗ್ಗೆ ಅನ್ವೇಷಿಸುವರು.

ವಿಧಾನ: ಕತೆ, ತರಗತಿಯಲ್ಲಿನ ಕಾರ್ಯಚಟುವಟಿಕೆಗಳು, ಕಸದಿಂದರಸ, ಜಲಗಾರನ ಬೇಟೆ

ಸಮಯ: 45 ನಿಮಿಷಗಳು

### ಚಟುವಟಿಕೆ 1: ಬೂದುಕಾರಂಜಿ

ಒಂದಾನೊಂದುದಿನ ಒಬ್ಬಬಾಲಕನು ಕಾಡಿನ ನಡುವೆ ಹಾದುಹೋಗುತ್ತಿದ್ದಾಗ, ಎಲ್ಲಿಂದಲೋ ದು:ಖಪೂರಿತ ದನಿಯೊಂದು ಕೇಳಿಬಂದಿತು. ಹಾಡಿನೊಡನೆ ಅಳುತ್ತಿರುವ ದನಿಯಂತೆ ಭಾಸವಾಗುತ್ತಿತ್ತು. ದನಿಯ ಜಾಡುಹಿಡಿದು ನಡೆದ ಬಾಲಕನಿಗೆ ಒಂದುದೊಡ್ಡ ವೃತ್ತಾಕಾರದ, ನಿಗೂಢವಾದ ಬೂದುಬಣ್ಣದ ಕಾರಂಜಿಯೊಂದು ಕಂಡು ಬಂದಿತು. ಆ

ಕಾರಂಜಿಯಕೊಳದಿಂದ ಅಳುವಿನ ದನಿಯು ಕೇಳಿಬರುತ್ತಿತ್ತು. ಕೊಳದ ಮೇಲ್ಮೈ ಬಹಳ ಕೊಳೆಯಾಗಿ ಕಸಕಡ್ಡಿಗಳಿಂದ ತುಂಬಿದ್ದು, ಬಾಲಕನು ಅದನ್ನು ಸರಿಸಿನೋಡಿದಾಗ, ಅಲ್ಲಿದ್ದ ಬೂದುಬಣ್ಣದ ಮೀನುಗಳು ಕಂಡವು, ಜೊತೆಗೆ ಅವುಗಳ ಶೋಕಪೂರಿತ ದನಿಯೂ ಕೇಳಿಬಂದಿತು.

ಆಶ್ಚರ್ಯಚಕಿತನಾದ ಬಾಲಕನು ವಿಚಿತ್ರದನಿಯ ಆ ಮೀನನ್ನು ಹಿಡಿಯಲು ಕೊಳದೊಳಗೆ ತನ್ನಕೈಯನ್ನು ಹಾಕಿದನು. ಕೊಳದಲ್ಲಿ ಕೈಯನ್ನು ಹಾಕಿದೊಡನೆ ಮೊಣಕೈವರೆಗೂ ಅವನ ಕೈಗೆ ಬೂದುಬಣ್ಣವು ಮೆತ್ತಿಕೊಂಡಿತು. ಆಶ್ಚರ್ಯವೆಂದರೆ ಆ ಬೂದುಬಣ್ಣದ ಜೊತೆಗೆ ಅವನಮನಸ್ಸಿಗೂ ಬೇಸರವಾವರಿಸಿ ದು:ಖಿತನಾದನು. ಮಾಲಿನ್ಯಗೊಂಡ ಇಡೀ ಭೂಮಿಯೇ ಅವನ ಕೈಗೆ ಮೆತ್ತಿದಂತೆ ಭಾಸವಾಯಿತು. ಆ ಕೊಳದ ಮೀನುಗಳ ದು:ಖದ ಕಾರಣ ಬಾಲಕನಿಗೆ ತಿಳಿಯಿತು.

ತತ್ಕ್ಷಣ ತನ್ನ ಕೈಯನ್ನು ಕೊಳದಿಂದ ಹೊರಗೆತೆಗೆದ ಬಾಲಕನು ಅ ಸ್ಥಳದಿಂದ ಓಡಿಹೋದನು. ಆದರೂ ಅವನನ್ನು ಆವರಿಸಿದ್ದ ದು:ಖ ಕಡಿಮೆಯಾಗಲಿಲ್ಲ. ಅವನು ಎಷ್ಟೇ ಪ್ರಯತ್ನಪಟ್ಟರೂ ಅವನಮನವನ್ನು ಆವರಿಸಿದ್ದ ಬೇಸರ ಬಿಟ್ಟು ಹೋಗಲಿಲ್ಲ. ಭೂಮಿ ಮತ್ತು ಭೂಚರಗಳು ಸಂತೋಷದಿಂದಿರಬೇಕಾದರೆ ಪರಿಸರವು ಶುದ್ಧವಾಗಿರುವುದು ಅತ್ಯವಶ್ಯಕ ಎಂಬುದನ್ನು ಅಂದು ಬಾಲಕನು ಮನಗಂಡನು. ಅಂದಿನಿಂದ ಅವನು ಗಿಡಮರಗಳ ಬಗ್ಗೆ ಕಾಳಜಿವಹಿಸಲಾರಂಭಿಸಿ, ಕಾಲಕಾಲಕ್ಕೆ ಅವುಗಳಿಗೆ ನೀರೆರೆದು ಪೋಷಿಸಿದನು. ಜಲಮಾಲಿನ್ಯವನ್ನು ತಡೆಗಟ್ಟಲು ಅಗತ್ಯವಿರುವ ಕ್ರಮಗಳನ್ನು ಕೈಗೊಂಡನು. ಪರಿಸರದ ಶುದ್ಧತೆಯನ್ನು ಕಾಪಾಡುವಂತೆ ಇತರರನ್ನೂ ಸಹ ಪ್ರೇರೇಪಿಸಿದನು. ಕಾಲಕ್ರಮೇಣ ನೀರಿನ ಬೂದುಬಣ್ಣವೂ ಕಡಿಮೆಯಾಗುತ್ತಾ ಬಂದಿತು, ಅಂತೆಯೇ ಅವನ ಮನಸ್ಸನ್ನಾವರಿಸಿದ್ದ ವಿಷಾದವೂ ಕಡಿಮೆಯಾಗಿ ಮನವು ಮುದಗೊಂಡಿತು. ಬಾಲಕನು ಮತ್ತೆ ಆ ಬೂದುಕಾರಂಜಿಯ ಬಳಿ ಬಂದು ನೋಡಲಾಗಿ, ತಿಳಿಗೊಂಡ ಕೊಳದಲ್ಲಿ ಮೀನುಗಳು ಸಂತೋಷದಿಂದ ಹಾಡುತ್ತಾ, ಹರುಷದಿಂದ ಆಡುತ್ತಿದ್ದವು.

ತನ್ನ ಮೂಲಸ್ಥಿತಿಗೆ ಮರಳಿದ ಭೂಮಿಯು ಸಂತೋಷಗೊಂಡಿತು. ಅದನ್ನು ಕಂಡ ಬಾಲಕನು ಹರ್ಷಗೊಂಡನು.

## ಪ್ರಶ್ನೋತ್ತರಗಳು:

- ಕಾರಂಜಿಕೊಳದ ಮೀನುಗಳು ಏಕೆ ಅಳುತ್ತಿದ್ದವು?
- ಭೂಮಿಯ ಪರಿಸರದ ಪ್ರಸ್ತುತ ಪರಿಸ್ಥಿತಿ ಏನು?

- ಕೊಳದ ಬೂದುಬಣ್ಣವನ್ನು ಹೋಗಲಾಡಿಸಲು ಬಾಲಕನು ಮಾಡಿದ ಪ್ರಯತ್ನವೇನು?
- ನೀವು ಬಾಲಕನ ಪರಿಸ್ಥಿತಿಯಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿರಿ?
- ಪರಿಸರಸಂರಕ್ಷಣೆಗಾಗಿ ನೀವು ಕೈಗೊಳ್ಳಬೇಕಾದ ಕ್ರಮಗಳೇನು?

**ಚಟುವಟಿಕೆ 2: ಕತೆ – ಆ ಮೀನು**

ಆನಂದನು ಸಮುದ್ರದ ಸುಂದರದಂಡೆಯಲ್ಲೊಂದು ದಿನ ನಡೆದಾಡುತ್ತಿದ್ದನು. ಸೂರ್ಯನಹೊಂಗಿರಣಗಳಿಂದ ಹೊಳೆಯುತ್ತಿದ್ದ ಸುಂದರಶರಧಿಯೊಂದಿಗೆ ಅಂದಿನ ಬೆಳಗೂ ಹೊಂಬಣ್ಣದಿಂದ ಹೊಳೆಯುತ್ತಿತ್ತು. ಆ ಸಮಯದಲ್ಲಿ ಸಮುದ್ರದತೆರೆಗಳು ಮತ್ತು ದಂಡೆಯ ನಡುವೆ ಅತ್ತಿಂದಿತ್ತ ಓಡಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ದೂರದಲ್ಲಿ ಕಂಡನು ಆನಂದ. ಆ ವ್ಯಕ್ತಿಯು ಸುಮುದ್ರದ ಮರಳದಂಡೆಯ ಮೇಲೆ ಬಿದ್ದಿರುವ ಮೀನುಗಳನ್ನು ಒಂದೊಂದಾಗಿ ಆರಿಸಿ ಮರಳಿ ಸಮುದ್ರಕ್ಕೆ ಎಸೆಯುತ್ತಿದ್ದನು.

ಸಮುದ್ರದ ಉಬ್ಬರವಿಳಿತಗಳ ಪರಿಣಾಮವಾಗಿ ಮರಳುದಂಡೆಯ ಮೇಲೆ ಸಿಕ್ಕಿಬಿದ್ದಿದ್ದ ನೂರಾರು ಮೀನುಗಳನ್ನು ಸಮೀಪಕ್ಕೆ ಆಗಮಿಸಿದ ಆನಂದನು ಕಂಡನು. ಆ ವ್ಯಕ್ತಿಯು ವ್ಯರ್ಥಪ್ರಯತ್ನದಲ್ಲಿ ಸಿಲುಕಿರುವುದು ಗೋಚರವಾಯಿತು. ನೂರಾರುಮೀನುಗಳ ಆ ರಾಶಿಯಲ್ಲಿ ಹಲವಾರುಮೀನುಗಳಿಗೆ ಬದುಕುಳಿಯುವ ಸಾಧ್ಯತೆಯೇ ಇರಲಿಲ್ಲ. ಆದರೂ ಕೂಡ ಆ ವ್ಯಕ್ತಿಯು ತನ್ನಪ್ರಯತ್ನವನ್ನು ನಿಲ್ಲಿಸದೆ ಒಂದೊಂದೇ ಮೀನನ್ನು ತೆಗೆದು ಮರಳಿ ಸಮುದ್ರದ ಅಲೆಗಳ ನಡುವೆ ತೂರುತ್ತಿದ್ದನು.

ಅ ವ್ಯಕ್ತಿಯಬಳಿ ಬಂದ ಆನಂದನು "ನಿಮಗೆಲ್ಲೋ ಹುಚ್ಚು! ಸಾವಿರಾರು ಮೀನುಗಳಿಂದ ದಂಡೆಯು ತುಂಬಿಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಮೀನುಗಳಿಗೆ ಸಹಾಯವೆಸಗಲು ಹೇಗೆ ಸಾಧ್ಯ? ಬಹುಶ: ಯಾವುದೇರೀತಿಯ ವ್ಯತ್ಯಾಸವಾಗಲಾರದು" ನುಡಿದನು. ಆನಂದನನೊಮ್ಮೆ ದಿಟ್ಟಿಸಿನೋಡಿದ ಆ ವ್ಯಕ್ತಿಯು ಕೆಳಗೆಬಿದ್ದಿದ್ದ ಮೀನೊಂದನ್ನು ಎತ್ತಿ ಸಮುದ್ರದೆಡೆ ಎಸೆದನು. ನಂತರ ಆನಂದನೆಡೆ ತಿರುಗಿದ ಅವನು "ಆ ಒಂದು ಮೀನಿನಜೀವನದಲ್ಲಿ ವ್ಯತ್ಯಾಸವಾಯಿತು" ಎಂದು ನುಡಿದ ಆ ವ್ಯಕ್ತಿಯು ಮರಳಿ ತನ್ನ ಕಾರ್ಯದಲ್ಲಿ ನಿರತನಾದನು.

**ಪ್ರಶ್ನೋತ್ತರಗಳು:**

- ಆನಂದನು ಸಮುದ್ರದಂಡೆಯಲ್ಲಿ ಏನು ಮಾಡುತ್ತಿದ್ದನು?
- ಸಮುದ್ರದ ಬಳಿ ಆ ವ್ಯಕ್ತಿಯು ಮಾಡುತ್ತಿದ್ದ ಕಾರ್ಯವೇನು?

- ವ್ಯಕ್ತಿಯು ಉಸುಕಿನಲ್ಲಿ ಸಿಲುಕಿದ್ದ ಮೀನುಗಳನ್ನು ಮರಳಿಸಮುದ್ರಕ್ಕೆ ಎಸೆಯಲು ಕಾರಣವೇನು?
- ಅದರಿಂದ ವ್ಯಕ್ತಿಗೆ ಉಂಟಾಗುವ ಲಾಭವೇನು?
- ಪ್ರಕೃತಿಯು ನಮಗೆನೀಡಿರುವ ಅಮೂಲ್ಯನಿಧಿಯನ್ನು ಉಳಿಸಿ ಸಂರಕ್ಷಿಸಲು ಎಲ್ಲರೂ ತಮ್ಮ ಕೈಲಾದ ಕೊಡುಗೆ ನೀಡಬೇಕು. ನಿಮ್ಮ ಅನಿಸಿಕೆ ಏನು?
- ಈ ಕತೆಯಿಂದ ನೀವೇನನ್ನು ತಿಳಿದಿರಿ?

**ಚಟುವಟಿಕೆ 3: ಚರ್ಚೆ**

- ಪ್ರಕ್ರತಿಯು ಮಾನವಸಂಕುಲಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ವಿದ್ಯಾರ್ಥಿಗಳೊಡನೆ ಚರ್ಚಿಸಿ.
- ಅಳಿವಿನಂಚಿನಲ್ಲಿರುವ ಪ್ರಾಣಿಗಳ ಪಟ್ಟಿಯನ್ನು ಮಕ್ಕಳಿಂದ ತಯಾರಿಸಿ.
- ಅರಣ್ಯಸಂರಕ್ಷಣೆಯ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ.

**ಚಟುವಟಿಕೆ 4: ಜಲಗಾರನಬೇಟೆ**

- ತರಗತಿಯ ಮಕ್ಕಳನ್ನು ಇಬ್ಬಿಬ್ಬರಂತೆ ಅಥವಾ ಕೆಲವು ತಂಡಗಳಾಗಿ ವಿಂಗಡಿಸಿ.
- ಮನೆಯಂಗಳ, ಮೈದಾನ, ಹಿತ್ತಲು, ತೋಟಗಳಲ್ಲಿ ದೊರೆಯಬಹುದಾದ ಕಸಕಡ್ಡಿಗಳನ್ನು ಪಟ್ಟಿಮಾಡಿ ಅವುಗಳನ್ನು ಸಂಗ್ರಹಿಸುವಂತೆ ಮಕ್ಕಳಿಗೆ ಸೂಚಿಸಿ. (ಉದಾ: ಎಲೆಗಳು, ಹಕ್ಕಿಗರಿ, ಕಲ್ಲು, ಹೂವು, ಬೀಜಗಳು, ಕಸ ಇತ್ಯಾದಿ...)
  ಆ ವಸ್ತುಗಳನ್ನು ಹುಡುಕಿ ಸಂಗ್ರಹಿಸಲು ಮಕ್ಕಳಿಗೆ ಕಾಲಾವಧಿ ನೀಡಿ.
- ಅವಧಿ ಪೂರ್ಣಗೊಂಡನಂತರ ಕಲೆಹಾಕಿದ ವಸ್ತುಗಳನ್ನು ಎಣಿಸಿ. ಮೊದಲು ಪಟ್ಟಿಮಾಡಿದ ವಸ್ತುಗಳೊಡನೆ ಹೊಂದಾಣಿಕೆಯಾಗುತ್ತವೆಯೇ ಪರೀಕ್ಷಿಸಿ. ಹೊಂದಾಣಿಕೆಯಾಗುವ ಪ್ರತಿಯೊಂದು ವಸ್ತುವಿಗೆ ಒಂದುಅಂಕ ನೀಡಿ. ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಗೆದ್ದಂತೆ. ಆ ಮಕ್ಕಳಿಗೆ ತಕ್ಕ ಪುರಸ್ಕಾರವನ್ನು ನೀಡಿ.

## ಚಟುವಟಿಕೆ 5: ಕಸದಿಂದರಸ

- ಮನೆಯಲ್ಲಿರುವ ತ್ಯಾಜ್ಯವಸ್ತುಗಳನ್ನು ಉಪಯೋಗಿಸಿ ಹಲವಾರು ಇನ್ನಿತರ ಔಪಯೋಗಿಕ ವಸ್ತುಗಳನ್ನು ತಯಾರಿಸಬಹುದು.
- ಮನೆಯಲ್ಲಿ ದೊರಕುವ ಹಲವು ತ್ಯಾಜ್ಯವಸ್ತುಗಳನ್ನು ತರಗತಿಗೆ ತೆಗೆದುಕೊಂಡು ಬರುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿ. (ಉದಾ: ಹಾಳೆತುಂಡುಗಳು, ಲೋಹದವಸ್ತುಗಳು, ಪ್ಲಾಸ್ಟಿಕ್ ವಸ್ತುಗಳು, ಐಸ್‌ಕ್ರೀಂಕಡ್ಡಿಗಳು, ಹಳೆಯ ಅಡಕಮುದ್ರಿಕೆಗಳು, ರಟ್ಟುಕಾಗದ ಇತ್ಯಾದಿ.,)
- 'ಕಸದಿಂದರಸ' ಯೋಜನೆಯಡಿಯಲ್ಲಿ ಈ ವಸ್ತುಗಳನ್ನು ಉಪಯೋಗಿಸಿ ಇನ್ನಿತರ ಹಲವಾರು ಉಪಯುಕ್ತವಸ್ತುಗಳನ್ನು ತಯಾರಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿ. (ಉದಾ: ಐಸ್‌ಕ್ರೀಂ ಕಡ್ಡಿಗಳಿಂದ ಪುಟಗುರುತು, ಹಳೆಯ ವೃತ್ತಪತ್ರಿಕೆಗಳಿಂದ ಕಾಗದದಚೀಲಗಳು, ಹಳೆಯಶೀಷೆಗಳಿಂದ ಹೂದಾನಿ, ಅಡಕಮುದ್ರಿಕೆ ಮತ್ತು ಪೆಪ್ಸಿ ಕ್ಯಾನ್ ಗಳಿಂದ ಗೋಡೆಗೆ ತೂಗುಹಾಕುವ ಸುಂದರ ವಸ್ತು, ರಟ್ಟುಕಾಗದದಿಂದ ಫೋಟೊ ಫ್ರೇಂ ಇತ್ಯಾದಿ., )

## 5.2.8 ನಿಮ್ಮ ಉನ್ನತ ಪರಿಶ್ರಮ – ಯಶಸ್ಸು

ಜೀವನದಲ್ಲಿ ಯಶಸ್ಸುಗಳಿಸಲು ಕಠಿಣಪರಿಶ್ರಮ ಬಹುಮುಖ್ಯ. ಹಾಗಾದರೆ ಯಶಸ್ಸು ಎಂದರೇನು? ಪ್ರತಿಯೊಬ್ಬರ ಯಶಸ್ಸಿನ ವ್ಯಾಖ್ಯೆಯೂ ಭಿನ್ನವಾಗಿದೆ. ಕೇವಲ ಹಣ ಮತ್ತು ಹೆಸರುಗಳಿಸುವುದೇ ಯಶಸ್ಸೆಂದು ಕೆಲವರ ಅನಿಸಿಕೆ. ಆದರೆ ಇದೆಲ್ಲವನ್ನೂ ಮೀರಿದ ಅರ್ಥ ಯಶಸ್ಸಿಗಿದೆ.

ಕೇವಲ ಹಣ ಅಥವಾ ಅಂತಸ್ತುಗಳಿಸುವುದೇ ಯಶಸ್ಸಲ್ಲ. ನಿಮ್ಮ ವ್ಯಕ್ತಿತ್ವವು ಸಮಾಜದ ಮೇಲೆ ಉಂಟುಮಾಡಬಹುದಾದ ಸಕಾರಾತ್ಮಕ ಪರಿಣಾಮವೇ ನಿಜವಾದ ಯಶಸ್ಸು.

ಯಶಸ್ವೀಜೀವನದ ಹಲವಾರು ವ್ಯಾಖ್ಯೆಗಳು ಇಂತಿವೆ:

- ಇತರರಿಗೆ ಮಾದರಿಯಾದ, ಹೆಮ್ಮೆಪಡುವಂತಹ ಜೀವನಶೈಲಿ.
- ನಿಮ್ಮ ಅತ್ಯುತ್ತಮ ಕಾರ್ಯವೈಖರಿ.
- ನಿಮ್ಮ ಮನಸ್ಸಿಗೆ ಹತ್ತಿರವಾದವರ ಕೂಡ ಹೆಚ್ಚುಸಮಯ ಕಳೆಯುವುದರೊಂದಿಗೆ ನೀವು ಇಚ್ಛಿಸುವ ಕಾರ್ಯದಲ್ಲಿ ಹೆಚ್ಚು ತೊಡಗುವುದು.
- ಕಷ್ಟವಾದರೂ ಕೂಡ ನ್ಯಾಯಕ್ಕೆ ಬದ್ಧರಾಗಿ ನಿಲ್ಲುವುದು.
- ಅತ್ಯುತ್ತಮ ವ್ಯಕ್ತಿಯಾಗಿ ಬೆಳೆಯುವುದು.

ಒಬ್ಬ ವ್ಯಕ್ತಿಯ ಯಶಸ್ಸಿಗೆ ಕಾರಣ ಹಲವಾರು ಅಂಶಗಳು:

- ಯೋಗ್ಯವಾದ ಧ್ಯೇಯವನ್ನು ಹೊಂದಿರುವುದು
- ಮಾತನ್ನು ಮೀರಿದ ಕಾರ್ಯಸಾಧನೆ
- ಕಠಿಣ ಪರಿಶ್ರಮ
- ಪೂರ್ವಸಿದ್ಧತೆ ಮತ್ತು ಸತತ ಅಭ್ಯಾಸ
- ಒಳ್ಳೆಯ ಹವ್ಯಾಸಗಳು
- ದೃಡ ನಿಷ್ಠೆ ಮತ್ತು ಏಕನಿಷ್ಠಸಾಧನೆ

ಉದ್ದೇಶ:

- ತಮ್ಮ ಅತ್ಯುತ್ತಮ ಕಾರ್ಯದ ಪ್ರಾಮುಖ್ಯತೆಯನ್ನು ಮಕ್ಕಳು ಅರಿವರು.
- ಏಕಾಗ್ರತೆಯಿಂದ ಕಾರ್ಯನಿರ್ವಹಿಸುವ ವಿಧಾನಗಳನ್ನು ಕಂಡುಕೊಳ್ಳುವರು.
- ಮಕ್ಕಳು ಜೀವನದಲ್ಲಿ ಸ್ಪಷ್ಟವಾದ ಗುರಿ ಮತ್ತು ಉದ್ದೇಶಗಳನ್ನು ಹೊಂದುವರು.

ವಿಧಾನ: ಕತೆ, ತರಗತಿಯಲ್ಲಿನ ಕಾರ್ಯಚಟುವಟಿಕೆಗಳು , ಚರ್ಚೆ

ಸಮಯ: 60 ನಿಮಿಷಗಳು

## ಚಟುವಟಿಕೆ 1: ಕ್ರಮತೆಗೆದುಕೊಳ್ಳುವುದು

ನಿಮ್ಮ ಶಕ್ತಿಗೆತಕ್ಕಹಾಗೆ ಕೆಲಸನಿರ್ವಹಿಸುವುದಾಗಲಿ ಅಥವಾ ಯಾವುದಾದರೂ ಕಾರ್ಯವನ್ನು ಅತ್ಯುತ್ತಮವಾಗಿ ನಿರ್ವಹಿಸುವುದಾಗಲಿ ಬಹಳ ಕಷ್ಟ. ಹೊಸ ಕ್ರೀಡೆಯಾಗಲಿ ಅಥವಾ ಶಾಲೆಯ ಹೊಸಯೋಜನೆಯಂತಹ ಕಾರ್ಯಗಳನ್ನು ನಿರ್ವಹಿಸಬೇಕಾದ ಸಂದರ್ಭಗಳಲ್ಲಿ ನಮ್ಮ ಅತ್ಯುನ್ನತ ಕಾರ್ಯಶಕ್ತಿಯ ಅವಶ್ಯಕತೆಯಿದೆ. ನಿಮ್ಮ ನೆಚ್ಚಿನದಲ್ಲದ ವಿಷಯಗಳಲ್ಲಿ ನೀವು ಉತ್ತಮಮಟ್ಟದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದೇ ಇರಬಹುದು. ಆದರೆ ಎಂತಹ ಕಠಿಣ ಸನ್ನಿವೇಶದಲ್ಲಿಯೂ ನೀವು ನಿಷ್ಠೆಯಿಂದ, ಉತ್ತಮಮಟ್ಟದಲ್ಲಿ ಕಾರ್ಯನಿರ್ವಹಿಸಿದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ.

## ಕ್ರಮ ಕೈಗೊಳ್ಳಿರಿ:

- ನಿಮ್ಮ ಜೀವನದಲ್ಲಿ ನೀವು ಉತ್ತಮವಾಗಿ ಕಾರ್ಯನಿರ್ವಹಿಸಲಾರದ ಒಂದು ವಿಷಯವನ್ನು ಆಯ್ಕೆಮಾಡಿರಿ. ಅದನ್ನು ಬದಲಾಯಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಮಾರ್ಪಾಡುಗಳನ್ನು ಮಾಡಿರಿ. ಅದರ ಸಕಾರಾತ್ಮಕ ಪರಿಣಾಮವು ನಿಮ್ಮಲ್ಲಿ ಉಂಟುಮಾಡುವ ಭಾವನೆಯನ್ನು ಗಮನಿಸಿ.
- ನಿಮಗೆ ಬಹುಮುಖ್ಯವೆನಿಸಿದ ವಿಷಯದಬಗ್ಗೆ ಕಷ್ಟಪಟ್ಟು, ನಿಷ್ಠೆಯಿಂದ ಕಾರ್ಯನಿರ್ವಹಿಸಿ. ನಿಮಗೆ ಆಸಕ್ತಿಯಿರುವ ವಿಷಯಗಳಬಗ್ಗೆ ವಿಶೇಷವಾಗಿ ಗಮನಹರಿಸಿ. ಉದಾಹರಣೆಗೆ ಪ್ರಾಣಿಗಳ ಬಗ್ಗೆ ನಿಮಗೆ ವಿಶೇಷವಾದ ಕಾಳಜಿಯಿದ್ದಲ್ಲಿ, ಅದರ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ ನಿಮ್ಮಿಂದಾದ ಸಹಾಯ ಮಾಡಿ.

**ಚರ್ಚಿಸಿ:**

- ನಿಮ್ಮ ಜೀವನದಲ್ಲಿ ನೀವು ಕಷ್ಟಪಟ್ಟು ಕೆಲಸಮಾಡಿದ ಯಾವುದಾದರು ವಿಷಯದ ಬಗ್ಗೆ ಚರ್ಚಿಸಿ. ಅದರ ಪರಿಣಾಮವೇನು? ಅದರ ಯಶಸ್ವೀನಿರ್ವಹಣೆಯ ನಂತರ ನಿಮ್ಮ ಅನಿಸಿಕೆಯೇನು?
- ದೃಢನಿಷ್ಠೆಯಿಂದ, ಸತತಪರಿಶ್ರಮದಿಂದ ಹಾಗು ಉನ್ನತಮಟ್ಟದ ಕಾರ್ಯವೈಖರಿಯಿಂದ ಕೆಲಸನಿರ್ವಹಿಸಿ ಯಶಸ್ಸು ಗಳಿಸಿರುವ ವ್ಯಕ್ತಿಯ ಬಗ್ಗೆ ಚರ್ಚಿಸಿ. ಅವರಿಂದ ನಾವು ಕಲಿಯಬಹುದಾದ ಅಂಶಗಳೇನು? ಚರ್ಚಿಸಿ.
- ಸತತಪರಿಶ್ರಮ, ಅಭ್ಯಾಸಗಳಿಂದ ಯಶಸ್ಸುಗಳಿಸಿದ ವ್ಯಕ್ತಿಗಳ ಜೀವನವನ್ನು ಕುರಿತು ಚರ್ಚಿಸಿ. ಅಥವಾ ಯುಕ್ತಪರಿಶ್ರಮವಿಲ್ಲದೆ ಸೋತಿರುವ ವ್ಯಕ್ತಿಗಳ ಬಗ್ಗೆ ಕೂಡ ಚರ್ಚಿಸಬಹುದು.

## ಚಟುವಟಿಕೆ 2: ಕತೆ – ಕ್ರೀಡಾದಿನಾಚರಣೆ

ಶಾಲೆಯ ಕ್ರೀಡಾದಿನಾಚರಣೆಗೆ ಸಿದ್ಧತೆ ನಡೆಯುತ್ತಿತ್ತು. ಮಕ್ಕಳೆಲ್ಲರ ತುಂಬು ಹುರುಪಿನ ಅಭ್ಯಾಸ ನಡೆದಿತ್ತು. ಮುಖ್ಯವಾದ ಓಟದಪಂದ್ಯದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ತುಂಬುಪರಿಶ್ರಮದಿಂದ ಅಭ್ಯಾಸ ನಡೆಸಿದ್ದರು. ಚುರುಕಿನ ಓಟಗಾರನೆಂದು ಹೆಸರುಗಳಿಸಿದ್ದ ಪವನ್, ಗೆಲುವು ತನ್ನದೇ ಎನ್ನುವ ಅತಿಯಾದ ಆತ್ಮವಿಶ್ವಾಸದಿಂದ ಅಷ್ಟೇನು ಅಭ್ಯಾಸದಲ್ಲಿ ನಿರತನಾಗಲಿಲ್ಲ. “ಪಂದ್ಯದಲ್ಲಿ ಮೊದಲಸ್ಥಾನ ಗಳಿಸಲು ಸತತಾಭ್ಯಾಸ ಮಾಡಬೇಕು ನೀನು” ಪವನ್‌ನ ತಾಯಿ ನುಡಿದರು. ಅದಕ್ಕೆ ಪ್ರತ್ಯುತ್ತರವಾಗಿ ಪವನ್ “ಅಮ್ಮ, ನಾನು ಎಷ್ಟು ವೇಗವಾಗಿ ಓಡಬಲ್ಲನೆಂದು ನಿನಗೆ ತಿಳಿದಿಲ್ಲವೇ?! ವೃಥಾ ಅಭ್ಯಾಸದಲ್ಲಿ ಸಮಯ ನಷ್ಟ” ಉಡಾಫೆಯಿಂದ ನುಡಿದನು.

ಕ್ರೀಡಾದಿನಾಚರಣೆಗೆ ಇನ್ನು ಕೆಲವೇದಿನಗಳು ಉಳಿದಿದ್ದರೂ ಪವನ್ ಅಭ್ಯಾಸದಲ್ಲಿ ತೊಡಗಲೇ ಇಲ್ಲ. ಅತ್ತ ಆಕಾಶ್ ಹಗಲುರಾತ್ರಿಯನ್ನದೆ ಸತತವಾದ ಅಭ್ಯಾಸದಲ್ಲಿ ತೊಡಗಿದ್ದನು.

ಕೊನೆಗೂ ಎಲ್ಲರು ಎದುರುನೋಡುತ್ತಿದ್ದ ದಿನ ಬಂದೇಬಿಟ್ಟಿತು. ಮಕ್ಕಳೆಲ್ಲರೂ ತಮ್ಮ ನೆಚ್ಚಿನ ಪಟುವನ್ನು ಹುರಿದುಂಬಿಸಲು ಮೈದಾನದಲ್ಲಿ ಸೇರಿದ್ದರು. ಓಟದ ಪಂದ್ಯ ಆರಂಭವಾಯಿತು. ಆರಂಭದ ಶಿಳ್ಳೆ ಮೊಳಗಿದೊಡನೆ ಸ್ಪರ್ಧಿಗಳು ಓಡಲಾರಂಭಿಸಿದರು. ಇದ್ದಕ್ಕಿದ್ದಂತೆ ಆಕಾಶ್‌ನನ್ನು ಹಿಂದಿಕ್ಕಿದ ಪವನ್ ವೇಗವಾಗಿ ಮುಂದುವರಿದನು. ಮಕ್ಕಳೆಲ್ಲರು ಜೋರಾಗಿ ಕೂಗುತ್ತಾ ಅವನನ್ನು ಹುರಿದುಂಬಿಸಿದರು. ಮುಕ್ತಾಯದ ಗೆರೆಗೆ ಇನ್ನು ಕೆಲವೇ ಮೀಟರ್‌ಗಳಿರುವಾಗ ಆಕಾಶನು ಪವನ್‌ನನ್ನು ಹಿಂದಿಕ್ಕಿ ತಾನು ವೇಗವಾಗಿ

ಮುಂದುವರೆದು ಮುಕ್ತಾಯದ ಗೆರೆಯನ್ನು ದಾಟಿದನು. ತನ್ನ ಅತ್ಯುತ್ತಮ ಪ್ರದರ್ಶನದಿಂದ ಆಕಾಶ್ ಎಲ್ಲರೂ ಆಶ್ಚರ್ಯಗೊಳ್ಳುವಂತೆ ಮಾಡಿದನು. ಸತತಪರಿಶ್ರಮವೇ ಯಶಸ್ಸಿಗೆ ಕಾರಣ ಎಂಬ ಬಹು ಮುಖ್ಯ ಅಂಶವನ್ನು ಪವನ್ ಅಂದು ಅರಿತನು.

**ಪ್ರಶ್ನೋತ್ತರಗಳು:**

- ಓಟದಪಂದ್ಯದಲ್ಲಿ ಪವನ್‌ನನ್ನು ಸೋಲಿಸಿ ಆಕಾಶ್‌ಗೆಲ್ಲಲು ಕಾರಣವೇನು?
- ಪವನ್‌ನ ವರ್ತನೆಯನ್ನು ಕತೆಯು ಸಮರ್ಥಿಸುತ್ತದೆಯೇ?
- ಕಠಿಣಪರಿಶ್ರಮವು ಪ್ರತಿಫಲವನ್ನು ನೀಡುವುದೇ? ಏಕೆ?
- ನಿಮಗೆ ಬೇಕಾದ್ದನ್ನು ಸಾಧಿಸಲು ಕಠಿಣಪರಿಶ್ರಮವು ಯಾವರೀತಿ ಸಹಾಯಮಾಡುವುದು ಎಂಬುದನ್ನು ನಿಮ್ಮ ವೈಯಕ್ತಿಕ ಅನುಭವದ ಮೂಲಕ ಚರ್ಚಿಸಿ.

**ಚಟುವಟಿಕೆ 3: ಕಷ್ಟಪಟ್ಟು ಕೆಲಸಮಾಡಿ**

ತರಗತಿಯಲ್ಲಿನ ಯಾವ ಚಟುವಟಿಕೆ/ ಯೋಜನೆ/ ಕಾರ್ಯವನ್ನು ನಿರ್ವಹಿಸಲು ಮಕ್ಕಳಿಗೆ ಕಷ್ಟ ಎಂದು ತಿಳಿದುಕೊಳ್ಳಿರಿ. ವಿದ್ಯಾರ್ಥಿಗಳು ಉತ್ತರಿಸಿದ ಬಳಿಕ ಅದೇ ಕಾರ್ಯವನ್ನು ಅವರು ಪುನಃ ತರಗತಿಯಲ್ಲಿ ನಿಮ್ಮೆದುರು ನಿರ್ವಹಿಸುವಂತೆ ಸೂಚಿಸಿ. ಅವರಿಗೆ ನೆರವಾಗಿ ಮತ್ತು ಅವರ ಅನುಭವಗಳನ್ನು ಕುರಿತು ಚರ್ಚಿಸಿ.

## 5.2.9 ಸಂತೋಷ

ಸಂತೋಷವು ಒಂದು ಆಹ್ಲಾದಕರ, ಸಂತೃಪ್ತತಾ ಹಾಗು ಸಕಾರಾತ್ಮಕ ಸೌಖ್ಯದ ಅನುಭವ, ಜೊತೆಗೆ ಅರ್ಥವತ್ತಾದ, ಯೋಗ್ಯವಾದ ಮತ್ತು ತೃಪ್ತಿಕರ ಜೀವನವೆನ್ನುವ ನೆಮ್ಮದಿಯ ಭಾವನೆ ಕೂಡ. ಕೇವಲ ಸಿರಿವಂತಿಕೆ, ಸೌಂದರ್ಯ, ಒಳ್ಳೆಯೋಗ ಅಥವಾ ಯಶಸ್ಸುಗಳೇ ಸಂತೋಷವಲ್ಲ. ಅದು ಮನಸ್ಸಿನನೆಮ್ಮದಿ ಹಾಗು ಶಾಂತಿಗೆ ಸಂಬಂಧಿಸಿದ್ದು. ಸಂತೋಷವು ಯಾವುದೇ ಸಕಾರಾತ್ಮಕ ಅಥವಾ ನಕಾರಾತ್ಮಕ ಮೈಲಿಗಲ್ಲಿನ ಸಾಧನೆಯಾಗಲಿ ಅಲ್ಲ. ಅದು ಪ್ರತಿದಿನ ಮನಸ್ಸಿಗೆ ಮುದನೀಡುವ ಸಣ್ಣಸಣ್ಣ ವಿಷಯುಗಳಿಗೆ ಸಂಬಂಧಿಸಿದ್ದಾಗಿದೆ.

ಸಂತೋಷವೆನ್ನುವುದು ಸ್ವಪ್ರಯತ್ನದಿಂದ ಕ್ರಿಯಾಶೀಲಗೊಳಿಸಬಹುದಾದ ಮನದ ಒಂದು ಆಹ್ಲಾದಕರಭಾವ.

ಉದ್ದೇಶ:

- ಸಂತೋಷದ ಮಹತ್ವವನ್ನು ಅರಿತ ಮಕ್ಕಳು ಅದರ ಅನ್ವೇಷಣೆಯಲ್ಲಿ ತೊಡಗುವರು.
- ನಾವೆಲ್ಲರು ಬೇರೆಬೇರೆ ಸ್ಥಳ, ಕಾಲ ಮತ್ತು ಸನ್ನಿವೇಶಗಳಲ್ಲಿ ಜನಿಸಿದವರಾಗಿದ್ದು ನಮ್ಮ ಸಂತೋಷವನ್ನು ನಾವು ಹೇಗೆ ನಿರ್ಧರಿಸುತ್ತೇವೆ ಎಂಬುದು ನಮಗೆ ಬಿಟ್ಟಿದ್ದು ಎಂಬುದನ್ನು ಮಕ್ಕಳು ತಿಳಿವರು.
- ತಮ್ಮ ಮನದ ಈ ಸಂತೋಷದ ಭಾವವು ತಮ್ಮ ದೈನಂದಿನಜೀವನದಲ್ಲಿ ಮತ್ತು ತಮ್ಮಸುತ್ತಮುತ್ತಲಿನ ಜೀವನದಮೇಲೆ ಯಾವರೀತಿ ಪ್ರಭಾವ ಬೀರುವುದು ಎಂದು ಅರಿವರು.

ವಿಧಾನ: ಕತೆ, ತರಗತಿಯಲ್ಲಿನ ಕಾರ್ಯಚಟುವಟಿಕೆಗಳು

ಸಮಯ: 60 ನಿಮಿಷಗಳು

### ಚಟುವಟಿಕೆ 1: ನಗು ನೀ ನಗು

ಮಕ್ಕಳೊಡನೆ ಹಸನ್ಮುಖದಿಂದ ಮಾತನಾಡುವ ಶಿಕ್ಷಕರು ಅವರಲ್ಲಿ ಸಕಾರಾತ್ಮಕ ಭಾವನೆಯನ್ನು ಉಂಟುಮಾಡುತ್ತಾರೆ. ತಮ್ಮ ಒಡನಾಟದಲ್ಲಿ ಶಿಕ್ಷಕರು ಸಂತೋಷದಿಂದಿರುವರು ಎನ್ನುವ ಭಾವನೆಯು ಮಕ್ಕಳ ಮನಸ್ಸಿನಲ್ಲಿ ಆಹ್ಲಾದಕರ ಭಾವನೆಯನ್ನುಂಟುಮಾಡಿ ಅವರನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡುತ್ತದೆ.

## ಚಟುವಟಿಕೆ 2: ಸಂತೋಷವೆಂದರೇನು?

ಸಂತೋಷದ ಅರ್ಥವೇನೆಂದು ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಶ್ನಿಸಲಿ.

- ಸಂತೋಷದಭಾವದಿಂದ ನಿಮಗೆ ಏನೆನಿಸುತ್ತದೆ?
- ಸಂತೋಷಗೊಂಡಾಗ ನೀವು ಏನು ಮಾಡಬಯಸುವಿರಿ?

## ಚಟುವಟಿಕೆ 3: ಸಂತೋಷವನ್ನು ಪಸರಿಸುವುದು

ಸಂತೋಷ ಅಥವಾ ಆನಂದದ ಭಾವನೆಯಲ್ಲಡಗಿರುವ ಶಕ್ತಿಯಬಗ್ಗೆ ಅರಿಯಲು ಮಕ್ಕಳಿಗೆ ಸಹಾಯಮಾಡಿ. ದಿನಪೂರ್ತಿ ತಮಗೆ ಎದುರಾದವರೆಲ್ಲರಿಗೂ ಶುಭಾಶಯ ಕೋರುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಿ ಮತ್ತು ಪ್ರೋತ್ಸಾಹಿಸಿ. (ಉದಾ: ನಮಸ್ತೆ, ನಮಸ್ಕಾರ, ಹಲೊ...) ಶುಭಾಶಯ ಕೋರುವುದರ ಜೊತೆಗೆ, ಸಂತೋಷದ ಭಾವನೆಯ ಪ್ರತ್ಯಕ್ಷಗುರುತಾಗಿ ನಗುಮೊಗದ ಒಂದೊಂದು ಸ್ಟಿಕರನ್ನು ಕೂಡ ಹಂಚುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ. ಸಂತೋಷವನ್ನು ಎಲ್ಲೆಡೆಪಸರಿಸುವ ಅವರ ಈ ಕಾರ್ಯವು ಅವರ ಮನದಲ್ಲಿ ಉಂಟುಮಾಡಿದ ಭಾವನೆಯೇನು ಮತ್ತು ಅದಕ್ಕೆ ಇತರರಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ಮರುದಿನ ಮಕ್ಕಳೊಡನೆ ಚರ್ಚಿಸಿ.

- ನಿಮ್ಮ ವರ್ತನೆಯಲ್ಲಿ ಏನಾದರು ಬದಲಾವಣೆಯನ್ನು ಗುರುತಿಸಿದ್ದೀರಾ?
- ನಿಮ್ಮ ಸುತ್ತಮುತ್ತಲಿನವರ ನೈತಿಕತೆಯಲ್ಲಿ ಏನಾದರು ಬದಲಾವಣೆಯನ್ನು ಗಮನಿಸಿದ್ದೀರಾ?

ಸಂತೋಷವನ್ನು ಪಸರಿಸುವುದರ ಪರಿಣಾಮವನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸಿ. ಹೀಗೆ ಒಬ್ಬರಿಂದೊಬ್ಬರು ಸಂತೋಷವನ್ನು ಹರಡುವುದರಿಂದ ಇಡೀ ಸಮಾಜದ ಮೇಲೆ ಉಂಟಾಗುವ ಸಕಾರಾತ್ಮಕ ಪರಿಣಾಮದ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಸಿ. ನಮ್ಮ ನಗುಮೊಗವು ಇನ್ನೊಬ್ಬರ ಜೀವನದಲ್ಲಿ ಉಂಟುಮಾಡಬಹುದಾದ ಅಗಾಧ ಪ್ರಭಾವದ ಬಗ್ಗೆ ಮಕ್ಕಳೊಡನೆ ಚರ್ಚಿಸಿ.

## ಚಟುವಟಿಕೆ 4: ಪ್ರಾಣಾಯಾಮ

ಮನಸ್ಸು ತಳಮಳಗೊಂಡಾಗ ಅಥವಾ ಒತ್ತಡದಲ್ಲಿದಾಗ ಅದನ್ನು ಹೇಗೆ ನಿಯಂತ್ರಿಸಬಹುದು ಎಂಬುದನ್ನು ಮಕ್ಕಳಿಗೆ ತಿಳಿಯಪಡಿಸಿ. ಸ್ವಲ್ಪಕಾಲ ಕಣ್ಣುಮುಚ್ಚಿ ಕುಳಿತು ದೀರ್ಘಉಸಿರಾಟವನ್ನು ಅಭ್ಯಾಸಮಾಡಿಸಿ. ಸರಳವಾದ ಪ್ರಾಣಾಯಾಮವು ಮಾನಸಿಕ ಒತ್ತಡವನ್ನು ಕಡಿಮೆಮಾಡುತ್ತದೆ. ಇದರಿಂದ ತಿಳಿಗೊಂಡ ಮನವು

ಕ್ರಿಯಾಶೀಲವಾಗಿ ಕೆಲಸಮಾಡಬಲ್ಲದು. ಮನಸ್ತಾಪಗಳು ಜಗಳಗಳು ಇಲ್ಲವಾಗುತ್ತವೆ. ಕಡಿಮೆ ಒತ್ತಡವು ಮಾನಸಿಕ ನೆಮ್ಮದಿಯುನ್ನುಂಟುಮಾಡುತ್ತವೆ.

**ಚಟುವಟಿಕೆ 5: ಕತೆ**

ಒಂದಾನೊಂದು ಕಾಡಿನಲ್ಲಿ ಕಾಗೆಯೊಂದು ವಾಸಿಸುತ್ತಿತ್ತು. ಅದು ಸಂತೃಪ್ತಜೀವನವನ್ನು ನಡೆಸುತ್ತಾ ನೆಮ್ಮದಿಯಿಂದಿತ್ತು. ಹೀಗಿರುವಾಗ ಒಮ್ಮೆ ಕೊಳದಲ್ಲಿ ವಿಹರಿಸುತ್ತಿದ್ದ ಹಂಸಪಕ್ಷಿಯುನ್ನು ಕಂಡಿತು ಕಾಗೆ. "ಎಂತಹ ಸುಂದರವಾದ ಶ್ವೇತವರ್ಣದ ಪಕ್ಷಿ!! ನಾನೋ ಕಡುಕಪ್ಪು! ಈ ಜಗತ್ತಿನಲ್ಲಿಯೇ ಬಹು ಸಂತೋಷದಿಂದಿರುವ ಪಕ್ಷಿ ಈ ಹಂಸ" ಎಂದು ಆಲೋಚಿಸಿತು ಕಾಗೆ. ವಿಚಾರ ತಿಳಿದ ಹಂಸವು ನುಡಿಯಿತು "ನಿನಗೆ ಗೊತ್ತಾ?! ನಾನೆ ಬಹು ಸುಂದರವಾದ ಪಕ್ಷಿ ಎಂದು ತಿಳಿದಿದ್ದೆ. ಆದರೆ ಹಸಿರು ಮೈಯಿನ, ಕೆಂಪು ಕೊಕ್ಕಿನ ಸುಂದರವಾದ ಗಿಳಿಯುನ್ನು ನೋಡಿದ ಮೇಲೆ, ಆ ಗಿಳಿಯೇ ಬಹಳ ಸಂತೋಷದಿಂದಿರುವ ಪಕ್ಷಿ ಎಂದು ತಿಳಿಯಿತು"

ಸಂತೋಷದಿಂದಿರುವ ಗಿಣಿಯನ್ನು ಕಾಣಲು ಹೊರಟಿತು ಕಾಗೆ. ಸುಂದರವಾದ ಗಿಣಿಯನ್ನು ಕಂಡ ಕಾಗೆ ಅದರ ಸಂತೋಷವನ್ನು ವಿಚಾರಿಸಿತು. ಆಗ ಗಿಳಿಯು "ನಾನೆ ಬಹು ಸುಂದರವಾದ, ಆನಂದವಾಗಿರುವ ಪಕ್ಷಿ ಎಂದುನಂಬಿದ್ದೆ, ಆದರೆ ಬಣ್ಣಬಣ್ಣದ ರೆಕ್ಕೆಗಳಿರುವ ನವಿಲು ಬಹು ಸುಂದರವಾದ ಪಕ್ಷಿ. ಈ ಭೂಮಂಡಲದಲ್ಲಿಯೇ ಬಹು ಸುಂದರವಾದ ಮತ್ತು ಬಹು ಸಂತೋಷದಿಂದಿರುವ ಪಕ್ಷಿ ನವಿಲು" ಎಂದು ನುಡಿಯಿತು.

ನವಿಲನ್ನು ಹುಡುಕುತ್ತಾ ಹೊರಟ ಕಾಗೆಯು ಕೊನೆಗೆ ಒಂದು ಮೃಗಾಲಯದಲ್ಲಿ ಪಂಜರದಲ್ಲಿ ಬಂಧಿಯಾಗಿದ್ದ ನವಿಲನ್ನು ಕಂಡಿತು. ಪಂಜರದ ಸುತ್ತ ನೆರೆದಿದ್ದಜನರು ನವಿಲಿನ ಸೌಂದರ್ಯ ಹಾಗು ಘನವೈಭವವನ್ನು ನೋಡಿ ಮೆಚ್ಚುಗೆ ಸೂಸುತ್ತಿದ್ದರು. ಜನರಗುಂಪು ನಿರ್ಗಮಿಸಿದನಂತರ ನವಿಲಿನ ಬಳಿ ಸಾರಿದ ಕಾಗೆಯು " ಓಹ್! ನೀನೆಷ್ಟು ಸುಂದರ, ಸೊಗಸು ಓ ನವಿಲೆ! ನಿನ್ನ ಸೌಂದರ್ಯವನ್ನು ಕಾಣಲು ಪ್ರತಿದಿನವೂ ಸಾವಿರಾರು ಜನರು ಬರುವರು. ಆದರೆ ನನ್ನನ್ನು ನೋಡಿದೊಡನೆ ಕಲ್ಲುತೂರುವರು. ಈ ಪ್ರಪಂಚದಲ್ಲಿಯೇ ನಿನ್ನಷ್ಟು ಆನಂದದಿಂದಿರುವ ಪಕ್ಷಿ ಬೇರೊಂದಿಲ್ಲ" ಎಂದು ನುಡಿಯಿತು. ಕಾಗೆಯ ಹೊಗಳುವಿಕೆಗೆ ಮಾರುತ್ತರ ನೀಡುತ್ತಾ ನವಿಲು ನುಡಿಯಿತು. " ನನ್ನಷ್ಟು ಸೊಗಸಾದ ಪಕ್ಷಿ ಬೇರೊಂದಿಲ್ಲ ಎಂದು ಬಹು ಸಂತೋಷದಿಂದ ಮೆರೆಯುತ್ತಿದ್ದೆ. ಆದರೆ ಅದೇ ಸೌಂದರ್ಯದ ಕಾರಣದಿಂದ ನಾನಿಂದು ಬಂಧನದಲ್ಲಿ ಸಿಲುಕಿದ್ದೇನೆ. ಆದರೆ ನಾನೀವರೆಗೂ ಯಾವುದೇ ಕಾಗೆಯನ್ನು ಪಂಜರದಲ್ಲಿರಿಸಿರುವುದನ್ನು ಕಾಣಲಿಲ್ಲ. ನಾನೂ ಕಾಗೆಯಾಗಿದ್ದರೆ ಎಷ್ಟು ಚೆಂದವಿತ್ತು? ಸಂತೋಷದಿಂದ ಎಲ್ಲೆಡೆ ಹಾರಾಡುತ್ತಾ

ಸ್ವತಂತ್ರವಾಗಿರಬಹುದಿತ್ತು ಎಂಬ ಆಲೋಚನೆ ಕೆಲದಿನಗಳಿಂದ ನನ್ನ ಮನದಲ್ಲಿ ಮೂಡಿಬರುತ್ತಿದೆ".

**ನೀತಿ: ನಾವು ನಮ್ಮನ್ನೆಂದಿಗೂ ಇತರರಿಗೆ ಹೋಲಿಸಿ ನಮ್ಮ ಸಂತೋಷವನ್ನು ಹಾಳುಮಾಡಿಕೊಳ್ಳಬಾರದು. ಬದಲಾಗಿ ನಾವು ಹೇಗಿದ್ದೇವೆಯೋ ಅದನ್ನು ಹಾಗೆ ಒಪ್ಪಿಕೊಂಡು ಸಂತೋಷದಿಂದ ಹೆಮ್ಮೆಪಡಬೇಕು.**

**ಪ್ರಶ್ನೋತ್ತರಗಳು:**

- ಇತರ ಪಕ್ಷಿಗಳೆಲ್ಲ ಸಂತೋಷವಾಗಿರುವವು ಎಂದು ಅಸಂತುಷ್ಟಗೊಂಡ ಕಾಗೆಯು ಏಕೆ ಭಾವಿಸಿತು?
- ನವಿಲು ಏನೆಂದು ನುಡಿಯಿತು? ಅದನ್ನು ನೀವು ಅನುಮೋದಿಸುವಿರಾ?
- ನಿಮ್ಮ ಅಭಿಪ್ರಾಯದಲ್ಲಿ ಹೆಚ್ಚು ಸಂತೋಷವಾಗಿರುವ ಪಕ್ಷಿ ಯಾವುದು?
- ನಿಮ್ಮ ಮನಸ್ಸಿಗೆ ಸಂತೋಷತರುವ, ಅಥವಾ ನೀವು ಕೃತಜ್ಞರಾಗಿರುವ ವಿಷಯಗಳಾವುವು?
- ಸಂತೋಷಕಂಡುಕೊಳ್ಳುವ ವಿವಿಧ ಮಾರ್ಗಗಳಾವುವು?
- ನಿಮ್ಮ ದೈನಂದಿನ ಜೀವನದಲ್ಲಿ ಸಂತೋಷವಾಗಿರಲು ಅವಶ್ಯವಿರುವ ವಿವಿಧ ಮಾರ್ಗಗಳಾವುವು?

## 5.2.10 ಅಶೋಕಚಕ್ರ



- ಅಶೋಕಚಕ್ರವು 24 ಕಡ್ಡಿಗಳನ್ನೊಳಗೊಂಡ 'ಧರ್ಮಚಕ್ರ'ದ ರೂಪ.
- ಅಶೋಕಚಕ್ರವನ್ನು 'ಕರ್ಮಚಕ್ರ'ವೆಂತಲೂ ಕರೆಯುತ್ತಾರೆ. ಈ ಚಕ್ರದಲ್ಲಿನ 24 ಕಡ್ಡಿಗಳು ಮಾನವನ 24 ಗುಣಗಳನ್ನು ಪ್ರತಿನಿಧಿಸುತ್ತದೆ. ಮಾನವಸಂಕುಲದ ಏಳಿಗೆಗಾಗಿ ಮಾಡಿರುವ 24 ಧಾರ್ಮಿಕಪಥಗಳು ಎಂತಲೂ ಹೇಳಬಹುದು.
- ಅಶೋಕಚಕ್ರದಲ್ಲಿನ 24 ಕಡ್ಡಿಗಳು ಪ್ರತಿಯೊಬ್ಬ ಭಾರತೀಯನನ್ನೂ 24 ಗಂಟೆಗಳು ದಣಿವುಗೊಳ್ಳದೆ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ಪ್ರೇರೇಪಿಸುತ್ತವೆ.
- ಅಶೋಕಚಕ್ರದಲ್ಲಿ ಸೂಚಿತವಾಗಿರುವ ಎಲ್ಲ ಮಾರ್ಗಗಳು ಯಾವ ದೇಶವನ್ನಾಗಲಿ ಪ್ರಗತಿಪಥದೆಡೆಗೆ ಒಯ್ಯುತ್ತವೆ. ಆದ್ದರಿಂದಲೇ ನಮ್ಮ ರಾಷ್ಟ್ರಧ್ವಜ ವಿನ್ಯಾಸಕಾರರು ಅಶೋಕಸ್ತಂಭದಲ್ಲಿನ ಚಕ್ರವನ್ನು ನಮ್ಮ ರಾಷ್ಟ್ರಧ್ವಜದ ನಟ್ಟನಡುವೆ ಶ್ವೇತವರ್ಣದ ಹಿನ್ನಲೆಯಲ್ಲಿ ಎದ್ದುಕಾಣುವಂತೆ ವಿನ್ಯಾಸಗೊಳಿಸಿದ್ದಾರೆ.
- ಹಲವಾರು ಪ್ರಮುಖ ಆದೇಶಗಳಲ್ಲಿ, ನಿಯೋಗಗಳಲ್ಲಿ, ಶಾಸನಗಳಲ್ಲಿ ಅಶೋಕಚಕ್ರವು ಕಂಡುಬಂದಿದ್ದು ಅವುಗಳಲ್ಲಿ ಪ್ರಧಾನವಾಗಿರುವುದು ನಾಲ್ಕು ಸಿಂಹಗಳುಳ್ಳ ಅಶೋಕಸ್ತಂಭ.

ಕಳೆದವರ್ಷ ನಾವು ಸಾಮ್ರಾಟ ಅಶೋಕನ ಬಗ್ಗೆ ಸ್ವಲ್ಪ ತಿಳಿದಿದ್ದೇವೆ. ಈಗ ಅಶೋಕನ ಧರ್ಮಶಾಸನದ ಬಗ್ಗೆ ತಿಳಿಯೋಣ. ಧರ್ಮವು ಸಾಮಾನ್ಯವಾಗಿ ಜಾತೀಯತೆಯೊಂದಿಗೆ ಹಣೆದು ಕೊಂಡಿದೆಯಾದರೂ, ಇಲ್ಲಿ ಅದೊಂದು ಸಾಮಾಜಿಕ ಹಾಗು ರಾಜಕೀಯ ಅಂತರಾರ್ಥವನ್ನು ಹೊಂದಿರುವ ಒಂದು ಜಾತ್ಯಾತೀತ ನೀತಿ. ಮಾನವತಾವಾದದ ಬಗ್ಗೆ ಉದಾತ್ತವಿಚಾರಗಳನ್ನು ಒಳಗೊಂಡಿರುವ ಅಶೋಕಚಕ್ರವು ಎಲ್ಲ ಧರ್ಮಗಳ ಮೂಲತತ್ವವಾಗಿದೆ.

## 5.2.10.1 ಅಶೋಕನ ಧಮ್ಮ

ಕಳಿಂಗಕದನವು ಸಾಮ್ರಾಟ ಅಶೋಕನನ್ನು ಸಂಪೂರ್ಣವಾಗಿ ಬದಲಾಯಿಸಿತು. ಮಹತ್ವಾಕಾಂಕ್ಷೆ ಹಾಗು ಯುದ್ಧವನ್ನು ತ್ಯಜಿಸಿದ ಅವನು ಶಾಂತಿಪಥದೆಡೆಗೆ ಸಾರಿದನು. ಬೌದ್ಧಧರ್ಮವನ್ನು ಸ್ವೀಕರಿಸಿದ ಅಶೋಕನು ಬುದ್ಧನ ತತ್ವಗಳಾದ ಪ್ರೀತಿ, ದಯೆ, ಅಹಿಂಸೆ ಮತ್ತು ಶಾಂತಿಯ ಸಂದೇಶವನ್ನು ತನ್ನ ಜೀವನದ ಆದರ್ಶವನ್ನಾಗಿ ಅಳವಡಿಸಿಕೊಂಡನು. ಜಗತ್ತಿನ ಇತಿಹಾಸದ ಮಹಾಯುದ್ಧಗಳಲ್ಲಿ ಜಯಗಳಿಸಿದ ನಂತರವೂ ಎಲ್ಲವನ್ನೂ ತ್ಯಾಗಮಾಡಿದವರಲ್ಲಿ ಆಶೋಕನು ಪ್ರಮುಖನಾದವನು.

### ಅಶೋಕನ ಧಮ್ಮ:

ಸಂಸ್ಕೃತಪದ 'ಧರ್ಮ' ದ ಪ್ರಾಕೃತ ರೂಪವು 'ಧಮ್ಮ'. ಅಶೋಕನ ಧಮ್ಮವು ಎಲ್ಲಾ ಧರ್ಮಗಳ ನೈತಿಕತತ್ವಗಳ ಸಂಶ್ಲೇಷಣೆಯಾಗಿದ್ದು, ಜನರ ನೈತಿಕ ಹಾಗು ಸಾಮಾಜಿಕ ಪ್ರಜ್ಞೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಸಾರ್ವತ್ರಿಕ ನೈತಿಕ ಕಾನೂನುಗಳ ಪ್ರಕಾರ ಧಮ್ಮವು ಸಮಾಜದಲ್ಲಿ ಪ್ರಜೆಗಳ ವೈಯಕ್ತಿಕ ನಡವಳಿಕೆಯನ್ನು ಮಾರ್ಗದರ್ಶಿಸುವುದಕ್ಕೆ ಸಂಬಂಧಿಸಿದ್ದಾಗಿದೆ. ಇದೊಂದು ಏಕೈಕ ನೈತಿಕಸಂಹಿತೆ.

ಅಶೋಕನ ಧಮ್ಮವು ದೇವರಆರಾಧನೆಯನ್ನಾಗಲೀ ಅಥವಾ ಪ್ರಾಣಿಬಲಿಯನ್ನಾಗಲೀ ಸಮರ್ಥಿಸುವುದಿಲ್ಲ. ಒಬ್ಬ ತಂದೆಯು ಮಾರ್ಗದರ್ಶಿಯಾಗಿ ತನ್ನ ಮಕ್ಕಳನ್ನು ಹೇಗೆ ನೀತಿಪಥದೆಡೆಗೆ ಒಯ್ಯುತ್ತಾನೆಯೋ ಅಂತೆಯೇ ತನ್ನ ಪ್ರಜೆಗಳ ಹಿತರಕ್ಷಣೆಗಾಗಿ ಅವರಿಗೆ ಸರಿಯಾದ ಮಾರ್ಗತೋರುವುದು ತನ್ನ ಆದ್ಯ ಕರ್ತವ್ಯವೆಂದು ತಿಳಿದವನು ಅಶೋಕ. ಬುದ್ಧನ ತತ್ವಗಳಿಂದ ಪ್ರೇರೇಪಿತನಾದವನು ಅಶೋಕ.

ಮಾನವತಾವಾದದ ಬಗ್ಗೆ ಉದಾತ್ತವಿಚಾರಗಳನ್ನು ಒಳಗೊಂಡಿರುವ ಅಶೋಕಚಕ್ರವು ಎಲ್ಲ ಧರ್ಮಗಳ ಮೂಲತತ್ವವಾಗಿದೆ. ಅಶೋಕಸ್ತಂಭ ಹಾಗು ಅವನ ಶಾಸನಗಳು ಅವನ ಧಮ್ಮದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸಿವೆ.

ಅಶೋಕನ ಧಮ್ಮದ ಪ್ರಮುಖ ಸಿದ್ಧಾಂತಗಳು:

- ಶಾಂತಿ ಮತ್ತು ಸೌಹಾರ್ದತೆ – ಜನರು ಶಾಂತಿಯಿಂದ ಬದುಕಬೇಕು.
- ಅಹಿಂಸೆ – ಪ್ರತಿಯೊಬ್ಬರೂ ಅಹಿಂಸಾಸಿದ್ಧಾಂತವನ್ನು ಪಾಲಿಸಬೇಕು.
- ಜ್ಯಾತ್ಯಾತೀತತೆ – ಸರ್ವ ಧರ್ಮವನ್ನೂ ಜನರು ಏಕಭಾವನೆಯಿಂದ ಗೌರವಿಸಬೇಕು.

- ಗೌರವ – ಮಕ್ಕಳು ಹಿರಿಯರಿಗೆ ವಿಧೇಯರಾಗಿ ನಡೆದುಕೊಳ್ಳಬೇಕು ಮತ್ತು ಹಿರಿಯರೂ ಕಿರಿಯರನ್ನು ಅರ್ಥಮಾಡಿಕೊಳ್ಳಬೇಕು.
- ಪ್ರಾಮಾಣಿಕತೆ – ಜನರು ಪ್ರಾಮಾಣಿಕರಾಗಿಯೂ ಹಾಗು ಕರುಣೆಗಳಾಗಿಯೂ ನಡೆದುಕೊಳ್ಳಬೇಕು.

**ಅಶೋಕನ ಧಮ್ಮದಲ್ಲಿನ ಸಕಾರಾತ್ಮಕ ಅಂಶಗಳು:**

- ದಯೆ
- ದಾನ
- ಶುದ್ಧತೆ
- ಸಂತತೆ
- ಸಂಯಮ
- ಸತ್ಯಸಂಧತೆ

**ಅಶೋಕನ ಶಾಸನಗಳು:**

ಅಶೋಕನು ಬುದ್ಧನ ತತ್ವಗಳಿಗೆ ಬದ್ಧವಾದ ಸುರಕ್ಷಿತ, ಸುಂದರ, ಸುಭದ್ರ ಹಾಗು ನ್ಯಾಯಯುತ ಸಾಮ್ರಾಜ್ಯವನ್ನು ಬಯಸಿದನು. ತನ್ನ ತತ್ವಗಳನ್ನು ಪ್ರಜೆಗಳಿಗೆ ತಲುಪಿಸುವ ಸಲುವಾಗಿ ಅವನು ಹಲವು ಯೋಜನೆಗಳನ್ನು ರೂಪಿಸಿನು. ನ್ಯಾಯ, ಭದ್ರತೆ, ಬೌದ್ಧಧರ್ಮ ಹಾಗು ಸಾಮನ್ಯ ಕ್ಷೇಮಾಭ್ಯುದಯಗಳನ್ನು ಪ್ರಚಾರ ಮಾಡುವುದಕ್ಕಾಗಿ ಅವನು ಗೋಡೆ, ಕಲ್ಲುಗಳು ಹಾಗು ಸ್ತಂಭಗಳ ಮೇಲೆ ಶಾಸನಗಳನ್ನು ಕೊರೆಯಿಸಿದನು.

**ಅಶೋಕನ ನಾಲ್ಕು ಮೌಲ್ಯಗಳು:**

1. ಸುರಕ್ಷತೆ – ಭದ್ರತಾ ಶಾಸನಗಳು ನಮ್ಮ ಪ್ರಜೆಗಳ ಸುರಕ್ಷತೆಗೆ ಸಂಬಂಧಿಸಿವೆ.
2. ಬುದ್ಧನ ತತ್ವಗಳು – ಅಶೋಕನ ಶಾಸನದ ಈ ಭಾಗವು ಬುದ್ಧನ ತತ್ವಗಳಾದ ಶಾಂತಿ, ಪ್ರೇಮ ಹಾಗು ಗೌರವವನ್ನು ಪ್ರತಿಪಾದಿಸುತ್ತದೆ.
3. ಸಾಮಾನ್ಯಾಭ್ಯುದಯ – ಸಾಮ್ರಾಜ್ಯವು ಒಂದು ಮಾದರಿಯಾಗಿರುವಂತಹ ಕಾನೂನುಗಳನ್ನು ಈ ಸಾಮಾನ್ಯಾಭ್ಯುದಯ ಶಾಸನವು ಒಳಗೊಂಡಿದೆ.
4. ನ್ಯಾಯ – ಈ ಭಾಗದಲ್ಲಿರುವ ಎಲ್ಲಾ ಶಾಸನಗಳು ನಮ್ಮ ಸಾಮ್ರಾಜ್ಯವು ನ್ಯಾಯಯುತ ರಾಜ್ಯವಾಗಲು ಅಗತ್ಯವಿರುವ ಎಲ್ಲಾ ಅಂಶಗಳನ್ನು ಒಳಗೊಂಡಿದೆ.

**ಸಮಾಜಕ್ಕೆ ನೀಡಿದ ಕೊಡುಗೆಗಳು:**

ಅಶೋಕನು ತನ್ನ ಪ್ರಜೆಗಳಿಗಾಗಿ ಹಲವಾರು ವಿಶ್ವವಿದ್ಯಾಲಯುಗಳನ್ನು ಸ್ಥಾಪಿಸಿದನು. ವಾಣಿಜ್ಯ ಮತ್ತು ಕೃಷಿ ಅಭಿವೃದ್ಧಿಗಾಗಿ ನೀರಾವರಿವ್ಯವಸ್ಥೆ ಮತ್ತು ನೀರಿನಕಾಲುವೆಗಳನ್ನು ನಿರ್ಮಿಸಿದನು. ಜಾತಿ, ಧರ್ಮಗಳ ತಾರತಮ್ಯವಿಲ್ಲದೆ ಅಶೋಕನು ತನ್ನ ಪ್ರಜೆಗಳನ್ನು ಸಮಾನವಾಗಿ ಕಾಣುತ್ತಿದ್ದನು. ಪ್ರಾಣಿಗಳಿಗಾಗಿ ಚಿಕಿತ್ಸಾಲಗಳನ್ನು ಆರಂಭಿಸಿದ್ದಲ್ಲದೇ, ತನ್ನ ರಾಜ್ಯದಲ್ಲಿನ ರಸ್ತೆಗಳನ್ನು ದುರಸ್ತಿಗೊಳಿಸಿದ ಹೆಸರು ಸಾಮ್ರಾಟ ಅಶೋಕನಿಗೆ ಸಲ್ಲುತ್ತದೆ.

## 5.2.10.2 ಅಹಿಂಸೆ

ಯಾವುದೇ ಸಂದರ್ಭವಿರಲಿ, ಇತರರಿಗೂ ಮತ್ತು ತಮಗೂ ಯಾವುದೇರೀತಿಯ ಹಾನಿಯಾಗದಂತೆ ವರ್ತಿಸುವ ಒಂದು ವೈಯಕ್ತಿಕ ಅಭ್ಯಾಸವೇ ಅಹಿಂಸೆ. ತಮ್ಮ ಲಾಭಕ್ಕಾಗಿ ಪ್ರಾಣಿ–ಪಕ್ಷಿಗಳು ಮತ್ತು ಪ್ರಕೃತಿಗೆ ಘಾಸಿಯುಂಟುಮಾಡುವುದು ಅನವಶ್ಯಕ ಹಾಗು ಅಪರಾಧವು ಕೂಡ ಎಂಬುದು ಎಲ್ಲರೂ ತಿಳಿದಿರುವಂತಹ ವಿಷಯ.

ಹಿಂಸೆಯ ಬಗ್ಗೆ ಆಲೋಚಿಸಿದಾಗ, ಜನರು ತಮ್ಮ ಲಾಭಕ್ಕಾಗಿಯೋ, ಪ್ರತಿಷ್ಠೆಗಾಗಿಯೋ, ಮಹತ್ವಾಕಾಂಕ್ಷೆಗಾಗಿಯೋ ಹೊಡೆದಾಟಗಳಲ್ಲಿ, ಯುದ್ಧಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಇತರರ ಮನಸ್ಸಿಗೆ ನೋವುಂಟಾಗುವಂತೆ ಮಾತನಾಡುವುದು ಕೂಡ ಒಂದು ರೀತಿಯ ಹಿಂಸೆಯೆಂದು ನಾವು ಆಲೋಚಿಸುವುದೇ ಇಲ್ಲ. ಕಠಿಣವಾದ, ಕ್ರೂರವಾದ, ನಿರ್ದಯವಾದ ಬಿರುಸುಮಾತುಗಳು ಇತರರ ಮನಸಿಗೆ ನೋವನ್ನುಂಟುಮಾಡುತ್ತದೆ.

ಉದ್ದೇಶ:

- ಸ್ವಾಯತ್ತತೆ, ಜವಾಬ್ದಾರಿ, ಸಹಕಾರಮನೋಭಾವ, ಸೃಜನಶೀಲತೆ ಮತ್ತು ಐಕ್ಯತೆಯಂತಹ ನಿಲುವುಗಳನ್ನು ಮಕ್ಕಳು ಬೆಳೆಸಿಕೊಳ್ಳುವರು.
- ಮಕ್ಕಳು ತಮ್ಮ ಜೊತೆಗಾರರ ನಡುವಿನ ಸಾಮ್ಯತೆಗಳನ್ನು ಹಾಗು ಭಿನ್ನತೆಗಳನ್ನು ಗುರುತಿಸಿ, ಗೌರವಿಸಲು ಕಲಿಯುವರು.
- ಸಹಬಾಳ್ವೆಯನ್ನು ಕಲಿಯುವರು.
- ಮಧ್ಯಸ್ತಿಕೆ ಮತ್ತು ಸಂಘರ್ಷ ಪರಿಹಾರತಂತ್ರಗಳಂತಹ ಅಹಿಂಸಾತ್ಮಕ ವಿಧಾನಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದನ್ನು ಮಕ್ಕಳು ಕಂಡುಕೊಳ್ಳುವರು.

ವಿಧಾನ: ಪ್ರಕರಣದ ಪರಿಶೀಲನೆ ಮತ್ತು ಚರ್ಚೆ, ಕತೆ ಮತ್ತು ಚರ್ಚೆ, ವಿದ್ಯಾರ್ಥಿಗಳ ಚರ್ಚೆ

ಸಮಯ: 60 ನಿಮಿಷಗಳು

### ಚಟುವಟಿಕೆ 1: ಪ್ರಕರಣ ಪರಿಶೀಲನೆ

ತನ್ಮಯ್ ಹನ್ನೆರೆಡುವರುಷದ ಬಾಲಕ. ಹಸನ್ಮುಖಿನಾದ ತನ್ಮಯ್‌ಗೆ ಶಾಲೆಯಲ್ಲಿ ಬಹಳ ಗೆಳೆಯರಿದ್ದರು. ತನ್ನ ಸನ್ನಡತೆಯ ಕಾರಣದಿಂದ ಅವನು ತನ್ನ ಗೆಳೆಯರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಯಾವುದೇ ತೊಂದರೆಗೊಳಗಾದಲ್ಲಿ ಗೆಳೆಯರು

ಪರಸ್ಪರರಿಗೆ ಸಹಾಯ ಮಾಡುತ್ತಿದ್ದರು. ಅವರು ಸದಾ ಜೊತೆಜೊತೆಯಾಗಿದ್ದು ಶಾಲೆಗೆ ಬರುವಾಗ ಮತ್ತು ಮರಳಿ ಮನೆಗೆ ಹೋಗುವಾಗಲೂ ಜೊತೆಜೊತೆಯಾಗಿರುತ್ತಿದ್ದರು. ಆಟ, ಪಾಠ, ಊಟಗಳಲ್ಲೂ ಸದಾ ಜೊತೆ. ಎಲ್ಲರೂ ಅವರ ಸ್ನೇಹವನ್ನು ಕಂಡು ಸಂತೋಷಪಡುತ್ತಿದ್ದರು.

ಒಂದುದಿನ ಶಾಲೆಯು ಮುಗಿದ ನಂತರ ಎಲ್ಲರೂ ಅಲ್ಲಿಯೇ ಕೆಲಕಾಲ ಆಟವಾಡಲು ಬಯಸಿದರು. ಆದರೆ ಯಾವುದೋ ಕಾರಣಕ್ಕಾಗಿ ತನ್ಮಯ ಮರಳಿ ಮನೆಗೆ ಹೊರಟನು.

ತನ್ಮಯ್ ಮರಳಿ ಮನೆಗೆ ಒಬ್ಬನೇ ಬರುತ್ತಿರುವಾಗ, ದಾರಿಯಲ್ಲಿ ಅವನು ಅವನ ಶಾಲೆಯ ನಾಲ್ವರು ಹಿರಿಯ ವಿದ್ಯಾರ್ಥಿಗಳನ್ನು ಸಂಧಿಸಿದನು. ಅವನು ತನ್ನಪಾಡಿಗೆ ತಾನು ಮುಂದೆ ಸಾಗಿದಾಗ, ಆ ವಿದ್ಯಾರ್ಥಿಗಳು ಅವನತಲೆಗೆ ಚೆಂಡಿನಿಂದ ಹೊಡೆದರು. ತನ್ಮಯ್‌ಗೆ ಬಹಳ ನೋವಾಯಿತು. ಸುಮ್ಮನಿರದ ಆ ನಾಲ್ವರು ಮತ್ತೆ ಅವನನ್ನು ಹಿಡಿದು ಎಳೆದಾಡಿ, ದೂಡಿ ಬೀಳಿಸಿದರು. ತನ್ಮಯ್‌ನ ಒಂದು ಪಾದಕ್ಕೆ ಪೆಟ್ಟಾಯಿತು. ಆದರೂ ಅವನು ಏನೊಂದೂ ಎದುರುಮಾತನಾಡದೆ ಮನೆಗೆ ಮರಳಿದನು. ನಡೆದ ಸಂಗತಿಯ ಬಗ್ಗೆ ತನ್ನ ತಂದೆತಾಯಿಯರಿಗೂ ಸಹ ತಿಳಿಸಲಿಲ್ಲ. ಮರುದಿನ ಶಾಲೆಯಲ್ಲಿ ತನ್ನ ಗೆಳೆಯರಿಗೆ ನಡೆದ ಸಂಗತಿಯನ್ನು ತಿಳಿಸಿದನು. ವಿಷಯ ತಿಳಿದು ಕುಪಿತಗೊಂಡ ಅವರು ಸೇಡು ತೀರಿಸಿಕೊಳ್ಳಲು ಸಂಚು ಹೂಡಿದರು. ಆದರೆ ತನ್ಮಯ್‌ಗೆ ಅವರ ಯೋಜನೆ ರುಚಿಸಲಿಲ್ಲ. ಸೇಡು ತೀರಿಸಿಕೊಳ್ಳುವುದರಿಂದ ಯಾರಿಗೂ ಏನೂ ಪ್ರಯೋಜನವಿಲ್ಲವೆಂದೂ, ತಮ್ಮದೇ ಶಾಲೆಯ ಹುಡುಗರಿಗೆ ನೋವುಂಟುಮಾಡುವುದು ಸರಿಯಲ್ಲವೆಂದೂ ಅವನು ತನ್ನ ಗೆಳೆಯರಿಗೆ ಮನವರಿಕೆ ಮಾಡಿಕೊಟ್ಟನು.

## ಪ್ರಶ್ನೋತ್ತರಗಳು:

- ತನ್ಮಯ್ ಆ ನಾಲ್ವರು ಹುಡುಗರಿಗೆ ಸ್ವತ: ಉತ್ತರಿಸಬೇಕಿತ್ತೇ?
- ನಡೆದ ಸಂಗತಿಯನ್ನು ತನ್ಮಯ್ ತನ್ನ ತಂದೆತಾಯಿಯರಿಗೆ ಏಕೆ ತಿಳಿಸಲಿಲ್ಲ?
- ತನ್ಮಯ್‌ನ ಗೆಳೆಯರು ಮಾಡಿದ ಸಂಚು ಏನು?
- ತನ್ಮಯ್‌ನ ಸ್ಥಾನದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದಿರಿ?

## ಚಟುವಟಿಕೆ 1: ಕತೆ

ರಿಯಾ ಮತ್ತು ಅಂಶು ಇಬ್ಬರು ಮನೆಯಲ್ಲಿ ಸದಾ ಜಗಳವಾಡುತ್ತಿದ್ದರು. ಅವರಿಬ್ಬರ ಕಿತ್ತಾಟವು ಮನೆಯಲ್ಲಿನ ಶಾಂತಿಯನ್ನು ಸಂಪೂರ್ಣವಾಗಿ ಕದಡಿತ್ತು. ಅವರ ತಾಯಿತಂದೆಯರು ಅವರ ನಿರಂತರ ಕದನವನ್ನುಕಂಡು ಹತಾಶರಾಗಿ ಕೋಪಗೊಳ್ಳುತ್ತಿದ್ದರು. ಮನೆಯಲ್ಲಿ ಸಂತೋಷದ ವಾತಾವರಣ ವಿರಳವಾಗತೊಡಗಿತು. ಅವರ ಈ ವರ್ತನೆ ಮನೆಗೆಮಾತ್ರ ಸೀಮಿತವಾಗಿರದೆ, ಶಾಲೆಗೂ ಹರಡಿತ್ತು. ತಮ್ಮ ಒರಟಾದ, ಕಟುವಾದ ಮಾತುಗಳಿಂದ ಇತರರ ಮನಸಿಗೆ ಸದಾ ನೋವನ್ನುಂಟುಮಾಡುತ್ತಿದ್ದರು ಈ ಇಬ್ಬರು. ಅವರನ್ನು ಯಾರೂ ಇಷ್ಟಪಡುತ್ತಿರಲಿಲ್ಲ.

ಹೀಗಿರಲು, ಒಮ್ಮೆ ಅವರ ಸೋದರಸಂಬಂಧಿ ಸಿಯಾ ಅವರ ಮನೆಗೆಬಂದಳು. ರಿಯಾ ಮತ್ತು ಅಂಶುವಿನ ಅನುಚಿತ ವರ್ತನೆಯನ್ನು ಗಮನಿಸಿದ ಅವಳು ಒಮ್ಮೆ ಅವರನ್ನು ಕೇಳಿದಳು "ಕ್ರೂರವಾದ ನುಡಿಗಳನ್ನು ಬಳಸುತ್ತಾ ನೀವೇಕೆ ಸದಾ ಜಗಳವಾಡುವಿರಿ?".

ಸಿಯಾಳ ಪ್ರಶ್ನೆಯಿಂದ ಅವಮಾನಗೊಂಡ ಅವರೀರ್ವರು ಸಿಯಾಳಿಗೆ ತಮ್ಮ ವಿಷಯದಲ್ಲಿ ಹಸ್ತಕ್ಷೇಪಮಾಡದಂತೆ ಎಚ್ಚರಿಸಿದರು. ಅವರ ಬಿರುನುಡಿಗಳಿಂದ ನೊಂದರೂ ಕೂಡ ಸಿಯಾ ಏನೂ ಮಾತನಾಡಲಿಲ್ಲ.

ಕೆಲದಿನಗಳ ನಂತರ ಸಿಯಾಳು ಅಳುತ್ತಿದ್ದ ರಿಯಾಳನ್ನು ಕಂಡಳು. ಅಚ್ಚರಿಗೊಂಡ ಅವಳು ರಿಯಾಳ ದುಖ:ದ ಕಾರಣವನ್ನು ವಿಚಾರಿಸಲು, ರಿಯಾಳು ತನ್ನ ಗೆಳತಿಯೊಬ್ಬಳು ತನ್ನನ್ನು 'ಸರ್ಪ'ವೆಂದು ಕರೆದಳು ಎಂದು ದು:ಖಿಸಿಕೊಂಡಳು. ಇದನ್ನು ಕೇಳಿ ಗಾಬರಿಗೊಂಡ ಸಿಯಾ, "ನಿನ್ನ ಗೆಳತಿಯು ನಿನ್ನನ್ನು ಸರ್ಪವೆಂದು ಕರೆಯಲು ಕಾರಣವೇನು?" ಎಂದು ಕೇಳಿದಳು. ಉತ್ತರವಾಗಿ ರಿಯಾಳು ತಾನು ಸದಾ ಬೇರೆಯವರಿಗೆ ನೋವುಂಟುಮಾಡುವುದರಿಂದ ಆ ಗೆಳತಿಯು ತನ್ನನು ಸರ್ಪವೆಂದು ಕರೆದುದಾಗಿ ತಿಳಿಸಿದಳು.

ಸಿಯಾಳಲ್ಲಿ ವಿಷಯವನ್ನು ಅರುಹುವಾಗ ರಿಯಾಳ ಮನಸಿಗೆ ತನ್ನ ತಪ್ಪಿನ ಅರಿವಾಯಿತು. ತಾನು ಎಲ್ಲರ ಮನನೋಯುವಂತೆ ಮಾತನಾಡುತ್ತಿದ್ದುದನ್ನು ನೆನೆದು ಪಶ್ಚಾತ್ತಾಪಗೊಂಡಳು. ಇನ್ನುಮುಂದೆ ತಾನೆಂದು ಆ ರೀತಿ ವರ್ತಿಸುವುದಿಲ್ಲವೆಂದು ಸಿಯಾಳಿಗೆ ವಚನಕೊಟ್ಟಳು.

ಬದಲಾದ ರಿಯಾಳನ್ನು ಕಂಡು ಸಂತೋಷಗೊಂಡ ಸಿಯಾ ಅವಳಿಗೆ "ಇತರರಿಗೆ ಕಟುನುಡಿಗಳನ್ನು ಬಳಸುವ ಮುನ್ನ ಅವರು ತನಗೆ ಅದೇ ಕಟುನುಡಿಗಳನ್ನು ಬಳಸಿದಾಗ ಆಗುವ ನೋವನ್ನೊಮ್ಮೆ ನೆನೆಯಬೇಕೆಂದು ಉಪದೇಶಿಸಿದಳು. ಕೋಪದಿಂದ ಏನಾದರು

ಹೇಳುವ ಮುನ್ನ ಮನದಲ್ಲಿ ಒಂದರಿಂದ ಹತ್ತರವರೆಗೆ ಎಣಿಸಬೇಕು. ನಂತರ ನಿಧಾನವಾಗಿ ಕೆಲವು ದೀರ್ಘ ಉಸಿರುಗಳನ್ನು ತೆಗೆದುಕೊಳ್ಳಬೇಕು. ಅಷ್ಟರಲ್ಲಿ ಮನವು ತಿಳಿಯಾಗಿ ಕೋಪವು ಶಮನವಾಗುವುದು ಎಂದು ಸಲಹೆ ನೀಡಿದಳು.

ಅಂದು ಸಂಜೆ ರಿಯಾಳನ್ನು ಎಂದಿನಂತೆ ಚೇಡಿಸಲಾರಂಭಿಸಿದನು ಅಂಶು. ಕೋಪಗೊಂಡ ರಿಯಾ ಅದಕ್ಕೆ ಬದಲಾಗಿ ತಾನೂ ಉತ್ತರಿಸಬೇಕೆಂದುಕೊಂಡರೂ, ಸಿಯಾಳ ಬುದ್ಧಿಮಾತುಗಳು ಅದಕ್ಕೆ ತಡೆಹಾಕಿದವು. ಅವಳು ಒಂದರಿಂದ ಹತ್ತರವರೆಗೆ ಎಣಿಸಲಾರಂಭಿಸಿದಳು ಹಾಗು ದೀರ್ಘವಾದ ಉಸಿರಾಟದಲ್ಲಿ ತೊಡಗಿದಳು. ಅವಳ ಕೋಪ ಶಾಂತವಾಯಿತು. ಅವಳನ್ನು ಪ್ರಚೋದಿಸಲು ಅಂಶು ಪಟ್ಟ ಪ್ರಯತ್ನವೆಲ್ಲ ವಿಫಲವಾಯಿತು. ತನ್ನ ಮನವು ಎಷ್ಟು ಹಗುರವಾಗಿ, ತಿಳಿಯಾಗಿರುವುದನ್ನು ಅರಿತ ರಿಯಾ ಸೋಜಿಗಪಟ್ಟಳು. ಕ್ರಮೇಣ ಶಾಂತಿ ಮತ್ತು ಸೌಹಾರ್ದತೆಯ ಬೆಲೆಯನ್ನು ಅರಿತ ಅಂಶುವೂ ಸಹ ಬದಲಾದನು.

## ಪ್ರಶ್ನೋತ್ತರಗಳು:

- ರಿಯಾ ಮತ್ತು ಅಂಶು ಯಾವರೀತಿಯ ಪದಗಳನ್ನು ಬಳಸುತ್ತಿದ್ದರು?
- ಅವರ ವರ್ತನೆಯಿಂದ ಮನೆಯವರು ಸಂತೋಷಗೊಂಡಿದ್ದರೇ?
- ರಿಯಾಳನ್ನು ಅವಳ ಗೆಳತಿಯು ಏನೆಂದು ಕರೆದಳು?
- ಗೆಳತಿಯ ನುಡಿಯಿಂದ ರಿಯಾಳ ಮನಸಿಗೆ ನೋವಾಯಿತೇ? ಏಕೆ?
- ಸಿಯಾಳು ರಿಯಾಳಿಗೆ ಏನೆಂದು ಬೋಧಿಸಿದಳು?

## ಚಟುವಟಿಕೆ 3: ತರಗತಿಯಲ್ಲಿ ಚರ್ಚೆ

1. ಹಿಂಸೆಯ ಕುರಿತಂತೆ ತಮ್ಮ ಅನುಭವಗಳನ್ನು ವಿವರಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿ.
2. ಆ ಸನ್ನಿವೇಶದಲ್ಲಿ ಅವರ ಮನದಲ್ಲಿ ಮೂಡಿಬಂದ ಭಾವನೆಗಳ ಕುರಿತು ವಿಚಾರಿಸಿ.
3. ಅಹಿಂಸಾ ವಿಧಾನದಿಂದ ಹಿಂಸೆಯನ್ನು ನಿವಾರಿಸುವ ಹಲವು ಮಾರ್ಗಗಳನ್ನು ಕುರಿತು ಚರ್ಚಿಸಿ.

## 5.2.10.3 ಗೌರವ

ನಮ್ಮಮಕ್ಕಳಿಗೆ ಕಲಿಸಲೇಬೇಕಾದ ಮೌಲ್ಯಗಳಲ್ಲಿ ಬಹಳ ಪ್ರಮುಖವಾದುದು ಗೌರವ. ಯಾರೇ ಇರಲಿ, ಅವರಿಗೆ ಅರ್ಹತೆಯಿರಲಿ ಬಿಡಲಿ ಎಲ್ಲರಿಗೂ ಗೌರವತೋರಿಸಿ ವಿನಯದಿಂದ ನಡೆದುಕೊಳ್ಳುವುದನ್ನು ನಮ್ಮ ಮಕ್ಕಳಿಗೆ ತೋರಿಸಿಕೊಡಬೇಕು. ಇತರರು ಎಷ್ಟೇ ಭಿನ್ನವ್ಯಕ್ತಿತ್ವದವರಾಗಿದ್ದರೂ ಸರಿ, ಅವರೊಂದಿಗೆ ಸೌಜನ್ಯದಿಂದ, ಸಭ್ಯತೆಯಿಂದ ವರ್ತಿಸಬೇಕೆಂಬುದನ್ನು ನಮ್ಮಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು.

ಒಬ್ಬವ್ಯಕ್ತಿಗೆ ನೀವು ಗೌರವ ನೀಡುವಿರಿ ಎಂದಾದರೆ, ಆ ವ್ಯಕ್ತಿಯ ಮತ್ತು ಅವನ ವರ್ತನೆಯ ಬಗ್ಗೆ ನೀವು ಸಕಾರಾತ್ಮಕವಾಗಿ ಆಲೋಚಿಸುವಿರಿ ಎಂದರ್ಥ. ಇತರರಿಗೆ ಗೌರವ ಸೂಚಿಸುವುದರೊಡನೆ ಆತ್ಮಗೌರವ ಹೊಂದಿರುವುದು ಕೂಡಾ ಅಷ್ಟೇ ಮುಖ್ಯ.

ಗೌರವಸೂಚಿಸುವುದು ಎಂದರೆ:

- ಜನರು ಹಾಗು ಅವರಿಗೆ ಸಂಬಂಧಿಸಿದ ಸ್ವತ್ತುಗಳನ್ನು ಕೂಡ ಪರಿಗಣಿಸಿ ಗೌರವಿಸುವುದು.
- ತಮ್ಮನ್ನೂ ಸೇರಿದಂತೆ ಕುಟುಂಬ, ಸಮುದಾಯ ಮತ್ತು ಶಾಲೆಯಬಗ್ಗೆ ಕಾಳಜಿವಹಿಸುವುದು.
- ವ್ಯಕ್ತಿಗತ ಭಿನ್ನತೆಗಳನ್ನು ಮೆಚ್ಚಿ, ಅವುಗಳನ್ನು ಒಪ್ಪಿಕೊಳ್ಳುವುದು.
- ನಿಮ್ಮೊಂದಿಗೆ ಇತರರು ಹೇಗೆ ವ್ಯವಹರಿಸಬೇಕೆಂದು ಬಯಸುವಿರೊ ಅಂತೆಯೇ ನೀವು ಬೇರೆಯವರೊಂದಿಗೆ ನಡೆದುಕೊಳ್ಳಬೇಕು.

ಉದ್ದೇಶ:

- ಮಕ್ಕಳು 'ಗೌರವಿಸು' ಪದದ ಅರ್ಥವನ್ನು ವಿವರಿಸಲು ಕಲಿಯುವರು.
- ಅವರು ಗೌರವ ಪದವನ್ನು ಸಮರ್ಥಿಸುವ ಗುಣಲಕ್ಷಣಗಳನ್ನು ಗುರುತಿಸುವರು.

ವಿಧಾನ: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು, ಕತೆ, ಚರ್ಚೆ, ಭಿತ್ತಿಪತ್ರರಚನೆ.

ಸಮಯ: 45 ನಿಮಿಷಗಳು

## ಚಟುವಟಿಕೆ 1: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು

- ಈ ಕೆಳಕಂಡ ವಿಷಯಗಳನ್ನು ಕಪ್ಪುಹಲಗೆಯ ಮೇಲೆ ನಮೂದಿಸಿ.

  ಸರ್ವರಲ್ಲೂ ಗೌರವಭಾವನೆ, ಆತ್ಮಗೌರವ, ಸಂಪತ್ತುಗಳ ಬಗ್ಗೆ ಗೌರವ ಮತ್ತು ಭೂಮಿತಾಯಿಯ ಬಗ್ಗೆ ಗೌರವ. ಈ ಪ್ರತಿಯೊಂದು ವಿಷಯದ ಬಗ್ಗೆ ಆಲೋಚಿಸಲು ವಿದ್ಯಾರ್ಥಿಗಳಿಗೆ ಸಮಯನೀಡಿ. ಮೂರರಿಂದ ಐದು ವಿಶೇಷವಾದ ವಿಧಾನಗಳಲ್ಲಿ ಪ್ರತೀಅಂಶಗಳಿಗೂ ಯಾವರೀತಿ ಗೌರವಸೂಚಿಸಬಹುದು ಎಂಬುದರ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಪಟ್ಟಿಮಾಡಿಸಿ.

- ತರಗತಿಯ ವಿದ್ಯಾರ್ಥಿಗಳನ್ನು ನಾಲ್ಕರಿಂದ ಐದು ವಿದ್ಯಾರ್ಥಿಗಳ ಗುಂಪುಗಳನ್ನಾಗಿ ವಿಂಗಡಿಸಿ. ಮೊದಲನೆಯ ಅಂಶವಾದ ಇತರರ ಬಗ್ಗೆ ಗೌರವವನ್ನು ಕುರಿತು ಅವರು ಪಟ್ಟಿಮಾಡಿರುವ ವಿಧಾನಗಳಲ್ಲಿ ಒಂದು ವಿಧಾನವನ್ನು ಅವರು ಆಯ್ಕೆಮಾಡಲಿ. ಆ ವಿಧಾನದ ಮೂಲಕ ತಾವು ಇತರರಿಗೆ ಯಾವರೀತಿ ಗೌರವಸೂಚಿಸುವರೆಂದು ಒಂದು ಸಣ್ಣ ಪ್ರಹಸನದ ಮೂಲಕ ಪ್ರತಿಯೊಂದು ಗುಂಪು ತರಗತಿಯ ಮುಂದೆ ಪ್ರದರ್ಶಿಸಲಿ.
- ಪ್ರತಿಯೊಂದು ಪ್ರಸ್ತುತಿಯನಂತರ ಇತರಗುಂಪಿನ ವಿದ್ಯಾರ್ಥಿಗಳು ಆ ವಿಷಯವನ್ನು ಕುರಿತು ಪ್ರಶ್ನೆಗಳನ್ನು ಕೇಳಲಿ ಮತ್ತು ರಚನಾತ್ಮಕ ವಿಮರ್ಶೆಯನ್ನು ನೀಡಲಿ. ಆ ಲಘುಪ್ರಹಸನವು ಇತರರಿಗೆ ಹೇಗೆ ಗೌರವಸಲ್ಲಿಸಬೇಕೆಂಬುದನ್ನು ಸಮರ್ಥವಾಗಿ ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾಗಿದೆಯಾ ಎಂಬುದರ ಬಗ್ಗೆ ಚರ್ಚೆ ನಡೆಯಲಿ. ಈ ಚರ್ಚೆಯು ಖಂಡಿತವಾಗಿಯೂ ಬಹಳ ಉತ್ತಮವಾದ ಹಾಗು ಸಕಾರಾತ್ಮಕವಾದ ಚರ್ಚೆಯಾಗುವುದರಲ್ಲಿ ಸಂದೇಹವಿಲ್ಲ.
- ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಗೌರವಸೂಚಿಸುವ ಸಂದರ್ಭಗಳನ್ನು ಪಟ್ಟಿಮಾಡಿ. ಗೌರವಸೂಚಿಸಬಹುದಾದ ಹಲವಾರು ಸಂದರ್ಭಗಳ ಬಗ್ಗೆ ಮಕ್ಕಳಿಗೆ ಆಲೋಚಿಸಲು ಸೂಚಿಸಿ.
- ಗೌರವಸೂಚಿಸುವುದು ಮತ್ತು ಅಗೌರವಸೂಚಿಸುವುದರ ನಡುವಿನ ವ್ಯತ್ಯಾಸವನ್ನು ಉದಾಹರಣೆಗಳೊಂದಿಗೆ ಚರ್ಚಿಸಿ.

## ಚಟುವಟಿಕೆ 2: ಕತೆ – ಮಾಡಿದ್ದುಣ್ಣೋ ಮಹರಾಯ

ಒಂದಾನೊಂದು ಊರಿನಲ್ಲಿ ಶ್ಯಾಮ ಎನ್ನುವ ಬಡಗಿಯೊಬ್ಬನಿದ್ದ. ಅವನಿಗೆ ರಾಜು ಎನ್ನುವ ಐದುವರುಷದ ಮಗನಿದ್ದ. ಜೊತೆಗೆ ಬಹಳ ವಯಸ್ಸಾದ ಮುದಿತಂದೆ ರಾಮುವು ಅವನೊಡನಿದ್ದ. ರಾಮುತಾತನು ಬಹಳ ಮುದಿಯಾಗಿದ್ದು ಎಲ್ಲಾ ಕೆಲಸಗಳಿಗೂ ಮಗ ಶ್ಯಾಮನ ಮೇಲೆ ಅವಲಂಬಿತನಾಗಿದ್ದ.

ಮುದಿತಂದೆಯಿಂದ ಏನೂ ಉಪಯೋಗವಿಲ್ಲವೆಂಬ ಭಾವನೆಯು ಕ್ರಮೇಣ ಶ್ಯಾಮನ ಮನದಲ್ಲಿ ಮೂಡಿ, ಅವನು ತಂದೆಯನ್ನು ತಿರಸ್ಕಾರದಿಂದ ಕಾಣತೊಡಗಿದ. ಕೋಪದಿಂದ ತಂದೆಯನ್ನು ಸದಾ ಅವಹೇಳನ ಮಾಡುತ್ತಿದ್ದ. ಅಸಹಾಯಕ ಪರಿಸ್ಥಿತಿಯಲ್ಲಿದ್ದ ಮುದಿತಂದೆಯು ಏನೊಂದೂ ಮಾತನಾಡದೆ ಸುಮ್ಮನಿರುತ್ತಿದ್ದ.

ಹೀಗಿರಲು, ಒಂದುದಿನ ಶ್ಯಾಮನು ಒಂದು ಮಣ್ಣಿನತಟ್ಟೆಯಲ್ಲಿ ತಂದೆಗೆ ಆಹಾರವನ್ನು ನೀಡಿದನು. ಮಣ್ಣಿನತಟ್ಟೆಯ ಭಾರವನ್ನು ತಡೆಯದಾದ ಮುದಿ ರಾಮುತಾತನ ಕೈಗಳು ನಡುಗತೊಡಗಿ ತಟ್ಟೆಯು ಕೆಳಗೆ ಬಿದ್ದು ಚೂರುಚೂರಾಯಿತು. ಕೋಪಗೊಂಡ ಶ್ಯಾಮನು ತಂದೆಯನ್ನು ಹೀನಾಮಾನವಾಗಿ ಬಯ್ದನು. ಪುಟ್ಟ ರಾಜುವು ಸದ್ದಿಲ್ಲದೆ ಇದನ್ನೆಲ್ಲಾ ಗಮನಿಸುತ್ತಿದ್ದನು.

ಮರುದಿನ ಶ್ಯಾಮನು ಹೊಸ ಮಣ್ಣಿನತಟ್ಟೆಯಲ್ಲಿ ತಂದೆಗೆ ಊಟವನ್ನು ಕೊಟ್ಟು ತಾನು ಕೆಲಸಕ್ಕೆ ಹೊರಟನು. ಸಂಜೆ ಕೆಲಸ ಮುಗಿಸಿ ಮನೆಗೆ ಹಿಂತಿರುಗಿದ ಶ್ಯಾಮನಿಗೆ ಒಡೆದು ಚೂರಾಗಿದ್ದ ಮಣ್ಣಿನತಟ್ಟೆಯು ಕಣ್ಣಿಗೆಬಿದ್ದಿತು. ತೀವ್ರಕೋಪದಿಂದ ಅವನು ತಂದೆಯನ್ನು ಬಹಳ ಕಟುವಾದ ನುಡಿಗಳಿಂದ ಬಯ್ದನು. ಅವನು ತಂದೆಯನ್ನು ಕುರಿತು, "ಎಲವೋ ಮುದಿಯ, ನೀನು ಮತ್ತೆ ಮಣ್ಣಿನತಟ್ಟೆಯನ್ನು ಒಡೆದೆಯಾದರೆ ನಿನಗೆ ಈ ಮನೆಯಲ್ಲಿ ಸ್ಥಳವೂ ಇಲ್ಲ ಹಾಗು ಆಹಾರವೂ ದೊರೆಯುವುದಿಲ್ಲ ಎಚ್ಚರಿಕೆ!" ಎಂದು ಬಿರುಸಾಗಿ ನುಡಿದನು. ತಂದೆಯ ಕಟುನುಡಿಗಳನ್ನು ರಾಜು ಸದ್ದಿಲ್ಲದೆ ಗಮನವಿಟ್ಟು ಕೇಳುತ್ತಿದ್ದನು.

ಮರುದಿನ ಕೆಲಸಮುಗಿಸಿ ಎಂದಿನಂತೆ ಸಂಜೆ ಮನೆಗೆ ಮರಳಿದ ಶ್ಯಾಮನು ತನ್ನ ಬಡಗಿಯ ಸಾಧನಗಳ ಸಹಾಯದಿಂದ ಮರಗೆಲಸ ಮಾಡುತ್ತಿದ್ದ ಮಗ ರಾಜುವನ್ನು ಕಂಡು ಅಚ್ಚರಿಗೊಂಡನು. ಶ್ಯಾಮನು "ಏನು ಮಾಡುತ್ತಿರುವೆ ಮಗು?" ಎಂದು ಮಗನನ್ನು ಕೇಳಲು, ರಾಜು "ಅಪ್ಪ, ನಾನು ನಿನಗಾಗಿ ಮರದತಟ್ಟೆಯೊಂದನ್ನು ತಯಾರಿಸುತ್ತಿರುವೆ. ನಿನಗೂ ರಾಮುತಾತನಂತೆ ವಯಸ್ಸಾದಾಗ ನಾನು ನಿನಗೆ ಈ ಮರದತಟ್ಟೆಯನ್ನೇ ನೀಡುವೆ. ಇದು ಮಣ್ಣಿನತಟ್ಟೆಯಂತೆ ಒಡೆದು ಚೂರಾಗುವುದಿಲ್ಲ. ಆಗ ನಿನ್ನನ್ನು ನಾನು ಮನೆಯಿಂದ ಹೊರಗೆ ಕಳಿಸುವ ಅಗತ್ಯವೂ ಇರುವುದಿಲ್ಲ" ಮುಗ್ಧನಾಗಿ ನುಡಿದನು.

ಮಗನಮಾತುಗಳನ್ನು ಕೇಳಿದ ಶ್ಯಾಮನಿಗೆ ಲಜ್ಜೆಯಿಂದ ತಲೆತಗ್ಗಿಸುವಂತಾಯಿತು. ಅವನಿಗೆ ತನ್ನ ತಪ್ಪಿನ ಅರಿವಾಯಿತು. ತನ್ನ ಮುದಿತಂದೆಯ ಮನವನ್ನು ನೋಯಿಸಿದ್ದಕ್ಕಾಗಿ ಪಶ್ಚಾತ್ತಾಪಗೊಂಡನು. ಕೂಡಲೇ ಅವನು ತಂದೆಯಬಳಿ ಸಾರಿ ತನ್ನ ವರ್ತನೆಗಾಗಿ ಕ್ಷಮೆಕೋರಿದನು. ತಮ್ಮ ಕರ್ಮಗಳ ಫಲವನ್ನು ತಾವೇ ಅನುಭವಿಸಬೇಕಾಗಬಹುದು ಎಂಬ ಸತ್ಯವನ್ನು ಅವನು ಅಂದು ಅರಿತನು.

**ಪ್ರಶ್ನೋತ್ತರಗಳು:**

- ರಾಮುತಾತನು ಶ್ಯಾಮನೊಡನೆ ವಾಸಿಸಲು ಕಾರಣವೇನು?
- ರಾಜು ಯಾರು?
- ಶ್ಯಾಮನು ತನ್ನತಂದೆಯೊಡನೆ ಯಾವರೀತಿ ನಡೆದುಕೊಳ್ಳುತ್ತಿದ್ದನು?
- ಮಣ್ಣಿನತಟ್ಟೆಯು ಒಡೆಯಲು ಕಾರಣವೇನು?
- ಮಣ್ಣಿನತಟ್ಟೆಯು ಮರುದಿನ ಪುನ: ಒಡೆದಾಗ, ಶ್ಯಾಮನು ರಾಮುತಾತನಿಗೆ ಏನೆಂದು ಹೇಳಿದನು?
- ತನ್ನತಂದೆಯ ಉಪಕರಣಗಳಿಂದ ರಾಜುವು ಏನನ್ನು ಮಾಡುತ್ತಿದ್ದನು?
- ಶ್ಯಾಮನು ತನ್ನತಂದೆಯ ಕ್ಷಮೆಕೋರಲು ಕಾರಣವೇನು?

**ಚಟುವಟಿಕೆ 3:**

ಪೋಷಕರಿಗೆ ಹಾಗು ಶಿಕ್ಷಕರಿಗೆ ಗೌರವಸೂಚಿಸಬಹುದಾದ ಮೂರು ವಿಧಾನಗಳು ಯಾವುವು ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿ.

**ಚಟುವಟಿಕೆ 4: ಭಿತ್ತಿಪತ್ರ ರಚನೆ**

- ಇತರರಿಗೆ ಗೌರವಸೂಚಿಸುತ್ತಿರುವ ಐದು ಚಿತ್ರಗಳಿಂದ ಒಂದು ಕೊಲಾಜ್ ರಚಿಸಿ.
- ರಚಿಸಿರುವ ಕೊಲಾಜ್‌ನ ವಿಷಯವನ್ನು ವಿವರಿಸಿ. ಅಥವಾ
- ಹೆಚ್ಚುಹೆಚ್ಚು ಜನರು ಎಲ್ಲರ ಬಗ್ಗೆ ಗೌರವಭಾವನೆ ತಳೆದಾಗ ಈ ಜಗತ್ತು ಯಾವರೀತಿ ಬದಲಾಗಬಹುದು ಎಂಬುದನ್ನು ಚರ್ಚಿಸಿ.

## 5.2.10.4 ಒಳ್ಳೆಯತನ/ಉತ್ತಮ ನಡವಳಿಕೆ

ಮಕ್ಕಳಿಗೆ ನಾವು ಒಳ್ಳೆಯತನ ಮತ್ತು ಕಾರುಣ್ಯಗಳ ಪ್ರಾಮುಖ್ಯತೆಯನ್ನು ಕಲಿಸಬೇಕಾದಲ್ಲಿ, ಪ್ರಮುಖವಾಗಿ ಅವು ಏನನ್ನು ಒಳಗೊಳ್ಳುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹುಮುಖ್ಯ. ನಾವು ನಮ್ಮಮಕ್ಕಳಿಗೆ ಉತ್ತಮನಡವಳಿಕೆ ಹಾಗು ಕರುಣೆಗಳ ಬಗ್ಗೆ ಕಲಿಸುವಾಗ ಅವು ಕೇವಲ ಅವರ ತಾತ್ಕಾಲಿಕ ನಡವಳಿಕೆಯಾಗಿರದೆ, ಹೊರಜಗತ್ತಿನಲ್ಲಿ ಇತರರ ಮೇಲೆ ಸಕಾರಾತ್ಮಕಪರಿಣಾಮ ಉಂಟಾಗುವಂತೆ ಹೇಗೆ ಬದುಕಬೇಕು ಎಂಬುದನ್ನು ಗುರುತಿಸಿಕೊಂಡು ಅದರಂತೆ ನಿರಂತರ ಜೀವಿಸುವಂತಾಗಬೇಕು. ನಮ್ಮ ಜೀವನದಲ್ಲಿ 'ಒಳ್ಳೆಯತನ' ಎಂಬಪದವನ್ನು ಸಕಾರಣ ಸಂದರ್ಭಗಳಲ್ಲಿ ಮಾತ್ರವೇ ಬಳಸುವುದು ಉತ್ತಮ. ಮಗುವು ಕಿರಿಕಿರಿ ಉಂಟುಮಾಡುತ್ತಿರುವಾಗ, ಒಳ್ಳೆಯತನಕ್ಕಿಂತ ಸ್ವಯಂನಿಯಂತ್ರಣದ ಮಹತ್ವನ್ನು ಎತ್ತಿಹಿಡಿಯುವುದು ಸೂಕ್ತ. ಮಾನವೀಯತೆಯ ಪ್ರಪಂಚದಲ್ಲಿ ಒಳ್ಳೆಯತನ ಮತ್ತು ದಯೆ ಎರಡೂ ಒಂದುರೀತಿಯಲ್ಲಿ ಬಂಡವಾಳ ಹೂಡಿದಂತೆ. ನಮ್ಮ ಸುತ್ತಮುತ್ತಲಿನ ಜನರು ಅದರಿಂದ ಪ್ರಯೋಜನವನ್ನು ಪಡೆದು, ಉತ್ಕೃಷ್ಟ ಮಟ್ಟಕ್ಕೆ ಏರಲು ಸಹಾಯವಾಗಬೇಕು.

**ಉದ್ದೇಶ:**

- ಸಕಲ ಜೀವರಾಶಿಗಳ ಬಗ್ಗೆ ಪ್ರೀತಿತೋರುವುದನ್ನು ಬೆಳೆಸುವುದು.
- ಕರುಣೆಯ ಮನೋಭಾವವನ್ನು ಬೇರೂರಿಸುವುದು.
- ಉದಾರ ಮತ್ತು ಕಾಳಜಿಯುಳ್ಳವರಾಗಿರುವುದು ಹೇಗೆಂಬುದನ್ನು ಕಲಿಯುವುದು.

**ವಿಧಾನ:** ಕತೆ, ಬುದ್ಧಿಮತ್ತೆ , ಚರ್ಚೆ.

**ಸಮಯ:** 40 ನಿಮಿಷಗಳು

### ಚಟುವಟಿಕೆ 1: ಕತೆ – ಒಂದು ಲೋಟ ಹಾಲು

ಒಮ್ಮೆ ಹರಿಯು ಶಾಲೆಯಿಂದ ಮರಳಿಮನೆಗೆ ನಡೆದು ಬರುತ್ತಿರುವಾಗ ಹಸಿವಿನಿಂದ ತಲೆಸುತ್ತಿ ಬವಳಿಬಂದಂತಾಯಿತು. ಮನೆಯಲ್ಲಿ ತನ್ನತಾಯಿಯು ಇನ್ನೂ ತಿಂಡಿಯನ್ನು ಸಿದ್ಧಪಡಿಸಿರುವುದಿಲ್ಲವೆಂದು ಅವನಿಗೆ ತಿಳಿದಿತ್ತು. ಹಸಿವಿನ ತೀವ್ರತೆಯು ಹೆಚ್ಚಾಗಿ ದಾರಿಯಲ್ಲಿದ್ದ ಮನೆಗಳಲ್ಲಿ ಏನಾದರು ತಿನ್ನಲು ಬೇಡಿದನು. ಕೊನೆಗೆ ಒಬ್ಬ ಹುಡುಗಿಯು ಅವನಿಗೆ ಒಂದು ದೊಡ್ಡಲೋಟದ ಭರ್ತಿ ಹಾಲನ್ನು ಕೊಟ್ಟಳು. ಹಾಲಿಗೆಬದಲಾಗಿ ಹಣವನ್ನು ಕೊಡಲು ಹರಿಯು ಮುಂದಾದಾಗ, ಆ ಹುಡುಗಿಯು ಅದನ್ನು ನಿರಾಕರಿಸಿ ಅವನನ್ನು ಕಳುಹಿದಳು.

ಹೀಗೆಯೇ ವರುಷಗಳು ಉರುಳಿದವು. ಆ ಹುಡುಗಿಯು ಬೆಳೆದು ದೊಡ್ಡವಳಾದಳು. ಒಮ್ಮೆ ಅವಳು ಯಾರಿಂದಲೂ ಗುಣಪಡಿಸಲಾರದ ಖಾಯಿಲೆಗೆ ತುತ್ತಾದಳು. ಕೊನೆಗೆ ಅವಳು ಆ ಊರಿನ ದೊಡ್ಡ ಆಸ್ಪತ್ರೆಯಲ್ಲಿನ ವೈದ್ಯರಬಳಿ ಚಿಕಿತ್ಸೆಗೆಂದು ಹೋದಳು. ಹಲವು ತಿಂಗಳುಗಳ ಚಿಕಿತ್ಸೆಯನಂತರ ಅವಳ ಖಾಯಿಲೆಯನ್ನು ಗುಣಪಡಿಸುವಲ್ಲಿ ವೈದ್ಯರು ಯಶಸ್ವಿಯಾದರು. ಇದರಿಂದ ಆ ಮಹಿಳೆಯು ಸಂತೋಷಗೊಂಡರೂ, ಆಸ್ಪತ್ರೆಯ ದುಬಾರಿ ವೆಚ್ಚವನ್ನು ಊಹಿಸಿ ಭಯಗೊಂಡಳು. ಕೊನೆಗೆ ಚಿಕಿತ್ಸೆಯ ವೆಚ್ಚದ ಬಿಲ್ ಅವಳ ಕೈ ಸೇರಿತು. ಅವಳು ಅದನ್ನು ತೆರೆದುಓದಿದಳು, "ಒಂದು ಲೋಟ ಹಾಲಿನೊಂದಿಗೆ ಸಂಪೂರ್ಣವಾಗಿ ಪಾವತಿಸಲಾಗಿದೆ".

**ಕತೆಯ ನೀತಿ: ಒಂದು ಒಳ್ಳೆಯಕಾರ್ಯವು ಎಂದಿಗೂ ಪ್ರತಿಫಲವನ್ನು ಪಡೆಯದಿರುವುದಿಲ್ಲ.**

**ಪ್ರಶ್ನೋತ್ತರಗಳು:**

- ಶಾಲೆಯಿಂದ ಮರಳಿ ಮನೆಗೆ ಬರುತ್ತಿದ್ದ ಹರಿಯು ದಾರಿಯಲ್ಲಿ ಮನೆಯಿಂದ ಮನೆಗೆ ಏಕೆ ಹೋದನು?
- ಹರಿಯಬಳಿ ಹಣತೆಗೆದುಕೊಳ್ಳಲು ನಿರಾಕರಿಸಿದ ಆ ಹುಡುಗಿಯ ವರ್ತನೆಯಿಂದ ನೀವು ಯಾವ ಗುಣವನ್ನು ನಿರೂಪಿಸಬಹುದು?
- ಅಸ್ವಸ್ಥ ಮಹಿಳೆಯನ್ನು ಗುಣಪಡಿಸಿದ ವೈದ್ಯರು ಯಾರು?
- ದಯಾಳು ಮಹಿಳೆಯ ಚಿಕಿತ್ಸಾವೆಚ್ಚವನ್ನು ಹೇಗೆ ಭರಿಸಲಾಯಿತು?
- ನಿಮ್ಮ ಜೀವನದಲ್ಲಿ ನೀವು ಕಣ್ಣಾರೆಕಂಡಂತಹ ಒಳ್ಳೆಯತನದ ಸಂದರ್ಭಗಳನ್ನು ಕುರಿತು ಚರ್ಚಿಸಿ.

## ಚಟುವಟಿಕೆ 2: ಕತೆ

ರಾಮಪುರ ಎಂಬ ಊರಿನಲ್ಲಿ ಶ್ಯಾಮ ಎಂಬ ಬಾಲಕನಿದ್ದನು. ಸಹೃದಯಿ ಬಾಲಕನಾದ ಶ್ಯಾಮನು ಆಟಪಾಠಗಳಲ್ಲಿ ಸದಾಮುಂದು. ಜೊತೆಗೆ ತಂದೆತಾಯಿಯರಿಗೆ ವಿಧೇಯನಾಗಿದ್ದು ಅವನು ಕರುಣಾಳುವು ಸಹ ಆಗಿದ್ದನು. ಅವನ ಒಳ್ಳೆಯ ನಡೆನುಡಿಗಳಿಂದ ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಪ್ರೀತಿಪಾತ್ರನಾಗಿದ್ದನು. ಅವನ ಈ ಜನಪ್ರಿಯತೆ ಅವನ ಕೆಲವು ಮಿತ್ರರ ಮಾತ್ಸರ್ಯಕ್ಕೂ ಕಾರಣವಾಗಿತ್ತು.

ಶ್ಯಾಮನ ತರಗತಿಯಲ್ಲಿಯೇ ಅವನ ಸಹಪಾಠಿಯಾಗಿ ಕರಣ್ ಎನ್ನುವ ಬಾಲಕನೋರ್ವನಿದ್ದನು. ಶ್ಯಾಮನ ವರ್ತನೆಗೆ ತದ್ವಿರುದ್ಧವಾಗಿ ಕರಣ್ ಒಬ್ಬ ಬೇಜವಾಬ್ದಾರಿಯುತ ಬಾಲಕನಾಗಿದ್ದನು. ಅವನು ಓದಿನಲ್ಲಿ ಸದಾ ಹಿಂದಿದ್ದು, ಶಾಲಾವೇಳೆಯ ಬಹಳಸಮಯವನ್ನು ಹೊರಗೆ ಆಟದಲ್ಲಿ ಕಳೆಯುತ್ತಿದ್ದನು. ತಂದೆತಾಯಿಯರ ಮಾತಿಗೆ ಗೌರವಕೊಡುತ್ತಿರಲಿಲ್ಲ. ತನ್ನ ಮಿತ್ರರೊಂದಿಗೆ ಸದಾ ಜಗಳವಾಡುತ್ತಾ ಅವರನ್ನು ಬೆದರಿಸುತ್ತಿದ್ದನು, ಮತ್ತು ಶ್ಯಾಮನನ್ನು ಆಗಾಗ್ಗೆ ಅವಮಾನಿಸುತ್ತಿದ್ದನು. ಶ್ಯಾಮನನ್ನು ತರಗತಿಯಲ್ಲಿ ಎಲ್ಲರಮುಂದೆ ಕೀಳಾಗಿಕಾಣುತ್ತಾ ತಿರಸ್ಕಾರದಿಂದ ನೋಡುತ್ತಿದ್ದನು. ಆದಾಗ್ಯೂ ಶ್ಯಾಮನ ನಡವಳಿಕೆಯಲ್ಲಿ ಕಿಂಚಿತ್ತೂ ಬದಲಾವಣೆಯಾಗಲಿಲ್ಲ, ಜೊತೆಗೆ ಅವನು ಉತ್ತಮ ಶ್ರೇಣಿಯನ್ನು ಕೂಡ ಗಳಿಸುತ್ತಿದ್ದನು.

ತನ್ನ ಎಂಟನೇವರುಷದ ಹುಟ್ಟುಹಬ್ಬದ ಅಂಗವಾಗಿ ಶ್ಯಾಮನು ತಂದೆತಾಯಿಯರಿಂದ ಒಂದು ಉತ್ತಮ ಲೇಖನಿಯನ್ನು ಉಡುಗೊರೆಯಾಗಿ ಪಡೆದನು. ನವಲೇಖನಿಯಲ್ಲಿ ಟಿಪ್ಪಣಿಗಳನ್ನು ಬರೆದುಕೊಳ್ಳುವಸಲುವಾಗಿ ಅದನ್ನು ಶ್ಯಾಮನು ಶಾಲೆಗೆ ತೆಗೆದುಕೊಂಡು ಬಂದನು. ಅದೊಂದು ಬಹು ಉತ್ತಮ ಗುಣಮಟ್ಟದ ಲೇಖನಿಯಾಗಿದ್ದು, ಬಹಳ ವೇಗವಾಗಿ ಬರೆಯುಬಹುದಾಗಿತ್ತು. ಶ್ಯಾಮನ ಹೊಸಲೇಖನಿಯನ್ನು ಕಂಡು ಕರುಬಿದ ಕರಣ್ "ಈ ಹೊಸಲೇಖನಿ ನಿನಗೆಲ್ಲಿ ಸಿಕ್ಕಿತು? ನೀನು ಅದನ್ನು ಕೊಂಡುಕೊಂಡೆಯಾ?" ಕೇಳಿದನು. ಉತ್ತರವಾಗಿ ಶ್ಯಾಮನು "ಇದು ನನ್ನ ತಂದೆತಾಯಿಯರು ನೀಡಿದ ಹುಟ್ಟುಹಬ್ಬದ ಉಡುಗೊರೆ" ನುಡಿದನು.

ತನ್ನ ಕೆಟ್ಟವರ್ತನೆಯಿಂದ ತಂದೆತಾಯಿಯರ ಅಸಂತೋಷಕ್ಕೆ ಕಾರಣನಾಗಿದ್ದ ಕರಣ್ ಅವರಿಂದ ಉಡುಗೊರೆ ಪಡೆಯುತ್ತಿದ್ದುದೇ ವಿರಳ. ಹಾಗಾಗಿ ಅವನು ಮಾತ್ಸರ್ಯದಿಂದ ಕುಪಿತನಾದನು. ಶ್ಯಾಮನ ಹೊಸಲೇಖನಿಯನ್ನು ಕದಿಯಲು ಸಂಚುಹೂಡಿದನು.

ಭೋಜನವಿರಾಮದ ವೇಳೆಯಲ್ಲಿ ತರಗತಿಯ ಮಕ್ಕಳೆಲ್ಲರು ಹೊರಹೋದ ಸಮಯವನ್ನು ಕಾಯುತ್ತಿದ್ದ ಕರಣ್, ಶ್ಯಾಮನ ಚೀಲದಿಂದ ಅವನ ಹೊಸಲೇಖನಿಯನ್ನು ಕದ್ದು, ಅದನ್ನು

ಯಾರಿಗೂ ಗೊತ್ತಾಗದಂತೆ ತನ್ನ ಚೀಲದಲ್ಲಿ ಅಡಗಿಸಿಟ್ಟನು. ನಂತರ ಎಲ್ಲರಂತೆ ಅವನೂ ಭೋಜನಕ್ಕಾಗಿ ತೆರಳಿದನು.

ಭೋಜನಮುಗಿಸಿ ತರಗತಿಗೆ ಮರಳಿದ ಶ್ಯಾಮನು ತನ್ನ ಹೊಸಲೇಖನಿಯನ್ನು ಕಾಣದೆ ಕಳವಳಗೊಂಡನು. ಕೂಡಲೆ ವಿಷಯವನ್ನು ತರಗತಿಯ ಶಿಕ್ಷಕರಿಗೆ ತಿಳಿಸಿದನು. ಕಳೆದು ಹೋದ ಹೊಸಲೇಖನಿಗಾಗಿ ಹುಡುಕಾಟ ಆರಂಭವಾಯಿತು. ತರಗತಿಯ ಎಲ್ಲಾ ವಿದ್ಯಾರ್ಥಿಗಳ ಚೀಲವನ್ನು ಹುಡುಕುವಂತೆ ತರಗತಿಯ ಮೇಲ್ವಿಚಾರಕನಿಗೆ ಶಿಕ್ಷಕರು ನಿರ್ದೇಶಿಸಿದರು. ಕೊನೆಗೆ ಹೊಸಲೇಖನಿಯು ಕರಣ್‌ನ ಚೀಲದಲ್ಲಿ ದೊರಕಿತು. ಕೋಪಗೊಂಡ ಶಿಕ್ಷಕರು, "ಕರಣ್, ನೀನು ಮಾಡಿದುದು ಸರಿಯೆ?" ಗದರಿಸಿದರು. ಅಷ್ಟರಲ್ಲಾಗಲೇ ಕರಣ್‌ನ ಕಣ್ಣಾಲಿಗಳು ತುಂಬಿಬಂದಿದ್ದವು. ಮಾತಿಲ್ಲದೇ ಮೂಕನಾಗಿ ನಿಂತನು.

ಕಣ್ಣೀರಿಡುತ್ತಿದ್ದ ಕರಣ್‌ನನ್ನು ಕಂಡ ಶ್ಯಾಮನು ಮರುಕಗೊಂಡನು. ಸಹಜವಾಗಿಯೇ ಎಲ್ಲರಲ್ಲೂ ಕರುಣೆದೋರುತ್ತಿದ್ದ ಶ್ಯಾಮನ ಮನದಲ್ಲಿ ತನ್ನ ಸಹಪಾಠಿಗಳ ವಿರುದ್ಧ ಯಾವುದೇ ಅನ್ಯಭಾವನೆಗೆಡೆಯಿರಲಿಲ್ಲ. ಕರಣ್‌ನ ವಿರುದ್ಧ ಯಾವುದೇ ಕ್ರಮಕೈಗೊಳ್ಳದಂತೆ ಅವನು ಶಿಕ್ಷಕರನ್ನು ಬೇಡಿದನು. ತನ್ನ ಲೇಖನಿಯು ಮರಳಿ ದೊರೆತುದು ತನಗೆ ಸಾಕೆಂದನು.

ಶ್ಯಾಮನ ವರ್ತನೆಯು ಕರಣ್‌ನ ಕಣ್ಣುತೆರೆಸಿತು. ಶ್ಯಾಮನ ಒಳ್ಳೆಯಮನಸ್ಸಿಗೆ ಅವನು ಮಾರುಹೋದನು. ಅವನು ಶಿಕ್ಷಕರಲ್ಲಿ ಹಾಗು ಶ್ಯಾಮನಲ್ಲಿ ಕ್ಷಮೆಕೋರಿದನು. ಅಂದಿನಿಂದ ಶ್ಯಾಮ ಮತ್ತು ಕರಣ್ ಉತ್ತಮ ಗೆಳೆಯರಾದರು. ಕ್ರಮೇಣ ಕರಣ್ ತನ್ನ ನಡವಳಿಕೆಯನ್ನು ಬದಲಾಯಿಸಿಕೊಂಡು ಶ್ಯಾಮನಂತೆ ಸಹೃದಯಿ ಬಾಲಕನಾದನು. ಎಲ್ಲರೂ ಕರಣ್‌ನನ್ನು ಪ್ರೀತಿಯಿಂದ ಕಾಣತೊಡಗಿದರು. ತನ್ನ ಹೊಸಗೆಳೆಯನ ಜನಪ್ರಿಯತೆಯನ್ನು ಕಂಡ ಶ್ಯಾಮನು ಹೆಮ್ಮೆಪಟ್ಟನು.

ಕರಣ್‌ನಿಂದ ನೋವನ್ನನುಭವಿಸಿದರೂ ಕೂಡ, ಪ್ರತಿಯಾಗಿ ಶ್ಯಾಮನು ಅವನಿಗೆ ಪ್ರೀತಿ, ಕರುಣೆಯನ್ನೇ ತೋರಿದನು. ನಮ್ಮ ಶತ್ರುವಾದರೂ ಸರಿ, ನಾವು ಎಲ್ಲರನ್ನೂ ಪ್ರೀತಿ ಮತ್ತು ಕಾರುಣ್ಯಭಾವದಿಂದ ಕಾಣಬೇಕು. ನಮ್ಮ ನಡವಳಿಕೆಯು ಕೆಲವೊಮ್ಮೆ ಮತ್ತೊಬ್ಬರನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಮಾರ್ಪಡಿಸಬಹುದು.

**ಕತೆಯ ನೀತಿ: ಯಾರೇ ನಿಮಗೆ ಕೇಡನ್ನು ಬಯಸಿದರೂ ನೀವು ಅವರಿಗೆ ಕೇಡನ್ನು ಬಯಸದಿರಿ. ಎಲ್ಲರನ್ನೂ ಪ್ರೀತಿ, ವಿಶ್ವಾಸದಿಂದ ಕಾಣಿರಿ.**

**ಪ್ರಶ್ನೋತ್ತರಗಳು:**

- ಶ್ಯಾಮನ ಜನಪ್ರಿಯತೆಯನ್ನು ಕಡಿಮೆಮಾಡಿ, ಅವನು ಎಲ್ಲರದೃಷ್ಟಿಯಲ್ಲಿ ಕೀಳಾಗಿ ಕಾಣುವಂತಾಗಲು ಕರಣ್ ಏನು ಮಾಡುತ್ತಿದ್ದನು?
- ಶ್ಯಾಮನನ್ನು ಕಂಡ ಕರಣ್ ಅಸೂಯೆಪಡಲು ಕಾರಣವೇನು?
- ತನ್ನ ಹೊಸಲೇಖನಿಯು ಕಾಣದಾದಾಗ ಶ್ಯಾಮನು ಏನು ಮಾಡಿದನು?
- ಕರಣ್‌ನ ಚೀಲದಲ್ಲಿ ಲೇಖನಿಯು ದೊರೆತಾಗ, ಇಬ್ಬರು ಬಾಲಕರ ಪ್ರತಿಕ್ರಿಯೆ ಏನು?
- ಕರಣ್‌ನ ಕಣ್ತೆರೆಸಿ, ಒಳ್ಳೆಯತನದ ಮಹತ್ವವನ್ನು ಅವನಿಗೆ ಅರಿವಾಗಿಸಿದ ಸನ್ನಿವೇಶವಾವುದು?

# 5.2.10.5 ನಿಷ್ಠೆ

ಒಬ್ಬವ್ಯಕ್ತಿಯ ಯಾವುದೇ ಕಷ್ಟ–ಸುಖದ ಪರಿಸ್ಥಿತಿಯಾಗಲಿ, ಎಂಥದೇ ಸವಾಲುಗಳಿರಲಿ, ಸಂತೋಷದಸಂದರ್ಭವಿರಲಿ, ನಮ್ಮ ಮನಸಿಗೆ ಒಪ್ಪಿಗೆಯಿರಲಿ ಬಿಡಲಿ ಆ ವ್ಯಕ್ತಿಯೊಂದಿಗೆ ಬೆಂಬಲವಾಗಿ ಜೊತೆನಿಲ್ಲುವುದೇ ನಿಷ್ಠೆ. ಕೆಲವೊಮ್ಮೆ ಮಿತ್ರರೊಂದಿಗೆ, ಕುಟುಂಬದೊಂದಿಗೆ ಅಥವಾ ಸಂಗಾತಿಯೊಂದಿಗೆ ನಿಷ್ಠೆಯಿಂದಿರುವುದು ನಮಗೆ ಬೇಡವಾಗಿರಬುಹುದು, ಆದರೆ ಚಿಕ್ಕಂದಿನಿಂದ ನಾವು ಅರಿತಿರುವಂತೆ ಎಲ್ಲರೊಂದಿಗೆ ಪ್ರೀತಿಯಿಂದ ಜೊತೆಯಾಗಿರುವುದು ಉತ್ತಮ.

**ಉದ್ದೇಶ:**

- ಮಕ್ಕಳು ನಿಷ್ಠೆಯ ಅರ್ಥವನ್ನು ತಿಳಿಯುವರು.
- ಅವರು ನಿಷ್ಠೆಯ ಪ್ರಾಮುಖ್ಯತೆಯ ಬಗ್ಗೆ ಅರಿಯುವರು.

**ವಿಧಾನ:** ಕತೆ ಮತ್ತು ಚರ್ಚೆ, ನಿಷ್ಠೆಯ ಆಟ

**ಸಮಯ:** 45 ನಿಮಿಷಗಳು

## ಚಟುವಟಿಕೆ 1: ನಿಜವಾದ ಸ್ನೇಹಿತ

ಒಂದಾನೊಂದುದಿನ ಗೆಳೆಯರಿಬ್ಬರು ಕಾಡಿನಲ್ಲೊಮ್ಮೆ ಸಾಗುತ್ತಿದ್ದರು. ದಟ್ಟವಾದ ಕಾಡಿನನಡುವೆ ಯಾವಕ್ಷಣದಲ್ಲಾದರೂ ಎದುರಾಗಬಹುದಾದ ವಿಪತ್ತನ್ನು ಅವರು ಅರಿತಿದ್ದರು. ಆದ್ದರಿಂದ ಒದಗಿಬರಬಹುದಾದ ಆಪತ್ತನ್ನು ಅವರೀರ್ವರೂ ಒಗ್ಗಟ್ಟಾಗಿದ್ದು, ಜೊತೆಯಾಗಿ ಎದುರಿಸಲು ವಚನಬದ್ಧರಾದರು.

ಹೀಗೆ ಸಾಗುತ್ತಿದ್ದಾಗ, ಒಮ್ಮಿಂದೊಮ್ಮೆಗೆ ಒಂದು ದೊಡ್ಡಕರಡಿಯು ಎದುರಾಯಿತು. ಸಮೀಪಿಸುತ್ತಿದ್ದ ಕರಡಿಯನ್ನು ಕಂಡ ಅವರಲ್ಲೊಬ್ಬನು ಹತ್ತಿರದಲ್ಲಿದ್ದ ಮರವನ್ನೇರಿದನು. ಇನ್ನೋರ್ವನಿಗೆ ಮರವೇರುವ ಕಲೆ ತಿಳಿದಿರುವುದಿಲ್ಲ. ತನಗಿದ್ದ ಸಾಮಾನ್ಯಜ್ಞಾನದ ತಿಳುವಳಿಕೆಯಿಂದ ಅವನು ನೆಲದಮೇಲೆ ಮಿಸುಕಾಡದೆ ಸತ್ತಂತೆ ಮಲಗಿಕೊಂಡನು. ಹತ್ತಿರಬಂದ ಕರಡಿಯು ಅವನಕಿವಿಯನ್ನೊಮ್ಮೆ ಮೂಸಿನೋಡಿತು. ಕರಡಿಗಳು ಸತ್ತಪ್ರಾಣಿಗಳನ್ನು ಮುಟ್ಟುವುದಿಲ್ಲವಾದ್ದರಿಂದ ಅದು ನಿಧಾನವಾಗಿ ಕಾಡಿನಲ್ಲಿ ಮಾಯವಾಯಿತು.

ಕರಡಿಯ ನಿರ್ಗಮನದ ಬಳಿಕ ಮರದಿಂದಿಳಿದು ಬಂದ ಮೊದಲನೆಯವನು ಕೆಳಗೆ ಮಲಗಿದ್ದ ಗೆಳೆಯನ್ನು ಕೇಳಿದನು, “ಓ ಗೆಳೆಯಾ, ಕರಡಿಯು ನಿನ್ನ ಕಿವಿಯಲ್ಲಿ ಏನು

ಹೇಳಿತು?". ಉತ್ತರವಾಗಿ ಅವನು ನುಡಿದನು, "ನಿಷ್ಠೆಯಿಲ್ಲದ ಗೆಳೆಯನನ್ನು ಎಂದಿಗೂ ನಂಬಬೇಡ ಎಂದು ಕರಡಿಯು ಬುದ್ಧಿವಾದ ಹೇಳಿತು".

**ನೀತಿ: ಯಾವುದೇ ಸಂದರ್ಭವಿರಲಿ, ನಿಮಗೆ ಬೆಂಬಲವಾಗಿ ಸದಾ ನಿಲ್ಲುವವನೇ ನಿಜವಾದ ಗೆಳೆಯ**

**ಪ್ರಶ್ನೋತ್ತರಗಳು:**

- ಗೆಳೆಯರಿಬ್ಬರೂ ಹೆದರಲು ಕಾರಣವೇನು?
- ಅವರಿಬ್ಬರು ಪರಸ್ಪರ ಏನೆಂದು ವಚನನೀಡಿದರು?
- ನೆಲದಮೇಲೆ ಮಲಗಿದ್ದ ಗೆಳೆಯನನ್ನು ಘಾಸಿಗೊಳಿಸದೆ ಕರಡಿಯು ತನ್ನಪಾಡಿಗೆ ತಾನು ಹೊರಟುಹೋಗಲು ಕಾರಣವೇನು?
- ನೀಡಿದ ಭಾಷೆಯನ್ನು ಮುರಿದವರಾರು?
- ಇಬ್ಬರುಗೆಳೆಯರಲ್ಲಿ ಜಾಣನಾರು? ಏಕೆ?
- ಈ ಕತೆಯಿಂದ ನೀವು ತಿಳಿದ ನೀತಿಯೇನು?
- ಮೊದಲನೆಯ ಗೆಳೆಯನು ಓಡಿ ಮರವೇರುವ ಬದಲಿಗೆ ಏನು ಮಾಡಬೇಕಿತ್ತು?

**ಚಟುವಟಿಕೆ 2: ಆಟ – ನಿಷ್ಠಾವಂತನಾರು?**

- ಹನ್ನೆರೆಡುಮಕ್ಕಳನ್ನು ನಾಲ್ಕುಮಕ್ಕಳಂತೆ ಮೂರುಗುಂಪುಗಳನ್ನಾಗಿ ವಿಂಗಡಿಸಿ.
- ಚೌಕ, ತ್ರಿಕೋನ, ಆಯತಾಕಾರ ಮತ್ತು ವೃತ್ತಾಕಾರದ ನಾಲ್ಕು ಆಕಾರಗಳನ್ನು ಕಾಗದದಲ್ಲಿ ಕತ್ತರಿಸುವಂತೆ ಅವರಿಗೆ ಸೂಚಿಸಿ.
- ಆ ಆಕಾರಗಳಿಗೆ ಕ್ರಮವಾಗಿ ಕೆಂಪು, ಹಸಿರು, ನೀಲಿ ಮತ್ತು ಹಳದಿಬಣ್ಣಗಳನ್ನು ತುಂಬಲು ಸೂಚಿಸಿ.
- ಆ ಬಣ್ಣಗಳಲ್ಲಿ ಯಾರಿಗೆ ಯಾವ ಬಣ್ಣವು ಪ್ರಿಯವಾದುದೆಂದು ಕೇಳಿ ತಿಳಿಯಿರಿ. ಆದರೆ ಅವರಪ್ರಿಯವಾದ ಬಣ್ಣವನ್ನು ಅವರು ಇಟ್ಟುಕೊಳ್ಳದಂದೆ ಸೂಚಿಸಿ.
- ಕಾಗದದ ಆಕಾರಗಳನ್ನು ತರಗತಿಯಲ್ಲಿ ವಿವಿಧ ಸ್ಥಳಗಳಲ್ಲಿ ಅಡಗಿಸಿಡಿ. ಅವರವರಿಗೆ ಸೂಚಿಸಿದ ಆಕಾರವನ್ನು ಆ ನಿರ್ಧಿಷ್ಟತಂಡವು ಹುಡುಕಿ ತರಲು ಹೇಳಿ.
- ಮಕ್ಕಳನಡುವೆ ನಂಬಿಕೆಬೆಳೆಯಲು ಮತ್ತು ಸಹಕಾರಮನೋಭಾವ ಬೆಳೆಯಲು ಈ ರೀತಿಯ ಆಟಗಳು ಸಹಕಾರಿಯಾಗುತ್ತವೆ.

## ಚಟುವಟಿಕೆ 3: ಕತೆ

ಒಂದಾನೊಂದು ಹಳ್ಳಿಯಲ್ಲಿ ಮಾಧವನೆಂಬ ಬಾಲಕನು ತನ್ನತಾಯಿಯೊಡನೆ ವಾಸಿಸುತ್ತಿದ್ದನು. ಒಮ್ಮೆ ಮಾಧವನತಾಯಿಯು ಅಸ್ವಸ್ಥಳಾದಳು. ಹತ್ತಿರದಲ್ಲಿಯೇ ವೈದ್ಯರನ್ನು ಹುಡುಕಲು ಮಾಧವನು ಯತ್ನಿಸಿದನಾದರೂ ಯಾವ ವೈದ್ಯರೂ ಸಮಯಕ್ಕೆ ದೊರೆಯಲಿಲ್ಲ. ಅಸಹಾಯಕ ಪರಿಸ್ಥಿತಿಯಲ್ಲಿದ್ದ ಮಾಧವನು ಕಳವಳದಿಂದ ಕಂಗೆಟ್ಟನು. ಅಂತಹ ಸಂದರ್ಭದಲ್ಲಿ ಅವನ ಗೆಳೆಯನಾದ ಕೇಶವನು ಅವನ ಮನೆಗೆ ಬಂದನು.

ಗೆಳೆಯನ ದು:ಖದ ಪರಿಸ್ಥಿತಿಯನ್ನು ಕಂಡ ಕೇಶವನು ಅವನನ್ನು ಸಮಾಧಾನಗೊಳಿಸಿ, ಪಕ್ಕದೂರಿನಿಂದ ವೈದ್ಯರನ್ನು ಕರೆತರುವಂತೆ ಮಾಧವನಿಗೆ ಸಲಹೆಕೊಟ್ಟನು. ಪಕ್ಕದೂರಾಗಲೀ, ಅಲ್ಲಿಗೆ ಹೋಗುವದಾರಿಯನ್ನಾಗಲಿ ತಿಳಿಯದ ಮಾಧವನಿಗೆ ಸಹಾಯಮಾಡುವುದಾಗಿ ನಿಶ್ಚಯಿಸಿದ ಕೇಶವನು ಅವನನ್ನು ಕರೆದುಕೊಂಡು ಪಕ್ಕದೂರಿಗೆ ಹೊರಟನು.

ಪಕ್ಕದೂರಿಗೆ ಹೋಗುವ ಹಾದಿಯಲ್ಲಿ ಗಾಯಗೊಂಡ ಮಾಧವನು ಹಲವು ಅಡಚಣೆಗಳನ್ನು ಎದುರಿಸಬೇಕಾಗಿ ಬಂದಿತು. ಆದರೆ ಅವನೊಡನಿದ್ದ ಕೇಶವನು ಅವನ ಬೆಂಬಲವಾಗಿ ನಿಂತು ಹಾದಿಯುದ್ದಕ್ಕೂ ಅವನಿಗೆ ಸಹಾಯಮಾಡಿದನು. ಕೊನೆಗೆ ಪಕ್ಕದೂರಿನ ಚಿಕಿತ್ಸಾಲಯವನ್ನು ತಲುಪಿದ ಗೆಳೆಯರಿಬ್ಬರು ಅಲ್ಲಿನ ವೈದ್ಯರನ್ನು ಕಂಡು ಮಾತನಾಡಿ ಅವರನ್ನು ಮಾಧವನತಾಯಿಯ ಚಿಕಿತ್ಸೆಗಾಗಿ ಅವರೂರಿಗೆ ಕರೆತಂದರು.

ತನ್ನ ನಿಷ್ಠಾವಂತ ಗೆಳೆಯನ ಸಮಯೋಚಿತ ಸಹಾಯದಿಂದ ಸಂತೋಷಗೊಂಡ ಮಾಧವನು ಅವನಿಗೆ ಕೃತಜ್ಞತೆಗಳನ್ನು ಸಲ್ಲಿಸಿದನು.

### ಪ್ರಶ್ನೋತ್ತರಗಳು:

- ಮಾಧವನ ದು:ಖಕ್ಕೆ ಕಾರಣವೇನು?
- ಮಾಧವನ ತಾಯಿಯಚಿಕಿತ್ಸೆಗಾಗಿ ಗೆಳೆಯರಿಬ್ಬರು ಏನು ಮಾಡಿದರು?
- ಕೇಶವನು ಮಾಧವನಿಗೆ ಯಾವರೀತಿ ಸಹಾಯಮಾಡಿದನು?
- ನೀವು ಕೇಶವನ ಸ್ಥಾನದಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿರಿ?
- ನಮ್ಮ ದೈನಂದಿನ ಜೀವನದಲ್ಲಿ ನಿಷ್ಠೆಯಪ್ರಾಮುಖ್ಯತೆಯನ್ನು ಕುರಿತು ಚರ್ಚಿಸಿ. ನಿಮ್ಮ ವೈಯಕ್ತಿಕ ಅನುಭವಗಳೊಂದಿಗೆ ಅದನ್ನು ಸಮರ್ಥಿಸಿ.

# 5.2.10.6 ಕಾರುಣ್ಯ

ಸರ್ವರನ್ನೂ ಒಳ್ಳೆಯತನದಿಂದ, ದಯೆಯಿಂದ ಕಾಣುವುದೇ ಕಾರುಣ್ಯ. ಕಷ್ಟದಲ್ಲಿರುವವರಿಗೆ ಮರುಕ ತೋರಿ ಸಹಾಯವೆಸಗುವುದೇ ಕಾರುಣ್ಯ. ಇತರರ ಭಾವನೆಗಳನ್ನು ಅರ್ಥಮಾಡಿಕೊಂಡು ಪ್ರೀತಿಯಿಂದ ಸ್ಪಂದಿಸುವುದೇ ಕಾರುಣ್ಯ.

**ಉದ್ದೇಶ:**

- ಸಮಸ್ತಜೀವಿಗಳ ಬಗ್ಗೆ ಪ್ರೀತಿಯಭಾವನೆ ಬೆಳೆಸುವುದು.
- ಕರುಣೆಯ ಮನೋಭಾವವನ್ನು ಮಕ್ಕಳಲ್ಲಿ ಅಂತರ್ಗತಗೊಳಿಸುವುದು.
- ದಯಾಳುವೂ ಹಾಗೂ ಕಾಳಜಿಪರರಾಗಿರುವುದನ್ನು ಕಲಿಯುವುದು.

**ವಿಧಾನ:** ಪಾತ್ರನಿರ್ವಹಣೆ ಮತ್ತು ಚರ್ಚೆ, ದಯೆ ಮತ್ತು ನಿರ್ದಯೆ ಕುರಿತ ಪದಗಳ ಪಟ್ಟಿ, ಕತೆ, ಬುದ್ಧಿಮತ್ತೆ ಮತ್ತು ಗುಂಪುಚರ್ಚೆ.

**ಸಮಯ:** 40 ನಿಮಿಷಗಳು.

## ಚಟುವಟಿಕೆ 1: ಪಾತ್ರನಿರ್ವಹಣೆ ಮತ್ತು ಚರ್ಚೆ

- ನಿಮ್ಮ ಗೆಳೆಯನೊಬ್ಬನು ತನ್ನ ಕೈಯಲಿದ್ದ ತಿಂಡಿಡಬ್ಬಿಯನ್ನು ಕೆಳಗೆ ಬೀಳಿಸಿಕೊಂಡು ಅದರಲ್ಲಿದ್ದ ಆಹಾರವೆಲ್ಲವೂ ಕೆಳಗೆಚೆಲ್ಲುವುದು. ನಿಮ್ಮತಿಂಡಿಡಬ್ಬಿಯು ನಿಮ್ಮಬಳಿಯಿರುವುದು.
- ಆಟದಮೈದಾನದಲ್ಲಿ ನಿಮ್ಮ ಗೆಳತಿಯೋರ್ವಳು ಅಳುತ್ತಿರುವಳು. ಏಕೆಂದು ಕೇಳಿದಾಗ ಅವಳು ತಾನು ತನಗಿಂತ ಹಿರಿಯ ಹುಡುಗರೊಡನೆ ಆಡಬೇಕೆಂದೂ ಆದರೆ ಅವರಾರು ತನ್ನನ್ನು ಆಟಕ್ಕೆ ಸೇರಿಸಿಕೊಳ್ಳುತ್ತಿಲ್ಲವೆಂದು ನುಡಿವಳು.
- ನಿಮ್ಮ ತಂದೆತಾಯಿಯರೊಡನೆ ನೀವೊಮ್ಮೆ ದಿನಸಿಅಂಗಡಿಗೆ ಹೋದಾಗ, ಅಲ್ಲಿ ಗ್ರಾಹಕನೊಬ್ಬನು ದಿನಸಿ ಪೊಟ್ಟಣವನ್ನು ಕೆಳಗೆ ಬೀಳಿಸಿಕೊಳ್ಳುವನು.
- ನಿಮ್ಮತರಗತಿಗೆ ಗಾಲಿಕುರ್ಚಿಯಲ್ಲಿ ಕುಳಿತ ಹೊಸಬಾಲಕಿಯ ಸೇರ್ಪಡೆಯಾಗುತ್ತದೆ. ವಿರಾಮದ ವೇಳೆಯಲ್ಲಿ ಅವಳು ತರಗತಿಯಲ್ಲಿ ಒಬ್ಬಳೇ ಕುಳಿತಿರುವುದನ್ನು ಗಮನಿಸುವಿರಿ.
- ವಿರಾಮದವೇಳೆಯಲ್ಲಿ ತರಗತಿಯ ಮಕ್ಕಳೆಲ್ಲರೂ ಹೊರಗೆ ಆಡಲು ಹೋದರೂ, ಒಬ್ಬ ವಿದ್ಯಾರ್ಥಿಯು ಮಾತ್ರ ತರಗತಿಯಲ್ಲಿಯೇ ಉಳಿದು ಶಿಕ್ಷಕರಿಗೆ ಸಹಾಯಮಾಡುತ್ತಿರುವುದನ್ನು ಗಮನಿಸುವಿರಿ.

- ವಿರಾಮದಸಮಯದಲ್ಲಿ ನಿಮ್ಮ ಗೆಳತಿಯೋರ್ವಳು ಬಿದ್ದು ಗಾಯಗೊಳ್ಳುವಳು.
- ಭೋಜನವನ್ನು ಸಮಯಕ್ಕೆ ಸರಿಯಾಗಿ ಸಿದ್ಧಮಾಡಲು ನಿಮ್ಮತಾಯಿಯು ಬಹಳ ಶ್ರಮವಹಿಸುತ್ತಿರುವರು.

**ಚಟುವಟಿಕೆ 2: ಕರುಣೆ ಮತ್ತು ನಿಷ್ಕರುಣೆ ಪದಗಳ ಪಟ್ಟಿ.**

| ಕರುಣೆ | ನಿಷ್ಕರುಣೆ |
|---|---|
| | |
| | |

**ಚಟುವಟಿಕೆ 3: ಕತೆ**

ರಾಮನು ಒಮ್ಮೆ ರಸ್ತೆಯಲ್ಲಿ ನಡೆದುಹೋಗುತ್ತಿದ್ದನು. ದಾರಿಯಲ್ಲಿ 'ನಿಮ್ಮ ಬೂಟುಗಳನ್ನು ಇಲ್ಲಿ ಸ್ವಚ್ಛಗೊಳಿಸಿ' ಎನ್ನುವ ಫಲಕದೊಂದಿಗೆ ಕುಳಿತಿರುವ ಓರ್ವ ವೃದ್ಧನನ್ನು ಕಂಡನು. ಆತನಬಳಿ ಜನರಾರು ಹೋಗುವುದನ್ನು ರಾಮನು ಕಾಣಲಿಲ್ಲ. ಅಷ್ಟರಲ್ಲಿ ಹತ್ತು ಹನ್ನೆರೆಡು ವರುಷದ ಬಾಲಕನೊಬ್ಬನು ದಾರಿಹೋಕರಲ್ಲೊಬ್ಬರನ್ನು ನಿಲ್ಲಿಸಿ, ಅವರ ಬೂಟುಗಳನ್ನು ತಾನು ಸ್ವಚ್ಛಗೊಳಿಸುವುದಾಗಿ ಬೇಡಿದನು. ಒಪ್ಪಿಗೆಯಿತ್ತ ಆತನು ಬಾಲಕನು ಬೂಟುಗಳನ್ನು ಸ್ವಚ್ಛಗೊಳಿಸಿದನಂತರ ಬಾಲಕನಿಗೆ ಹಣವನ್ನು ನೀಡಿದನು.

ಇದನ್ನು ಕಂಡ ವೃದ್ಧನು ಬಾಲಕನನ್ನು ಕುರಿತು "ಏತಕ್ಕಾಗಿ ಹಣವನ್ನು ಸಂಪಾದಿಸುತ್ತಿರುವೆ?" ಎಂದು ಕೇಳಿದನು. ಉತ್ತರವಾಗಿ ಬಾಲಕನು, "ನನಗೆ ಶಾಲೆಗೆಹೋಗಿ ವ್ಯಾಸಂಗ ಮಾಡಬೇಕೆಂದು ಇಚ್ಛೆ. ಆದರೆ ನನ್ನನ್ನು ಶಾಲೆಗೆ ಕಳುಹಿಸುವಷ್ಟು ಹಣ ನನ್ನ ತಂದೆತಾಯಿರ ಬಳಿ ಇಲ್ಲ. ಈಗ ನನ್ನ ತಂಗಿಯು ಶಾಲೆಗೆಹೋಗಲು ಇಚ್ಛಿಸುತ್ತಿದ್ದಾಳೆ. ಅವಳಿಗೆ ಶಾಲಾ ಸಮವಸ್ತ್ರದ ಅಗತ್ಯವಿದೆ. ಅವಳು ವಿದ್ಯಾವಂತಳಾಗಿ, ಒಬ್ಬ ಸಮರ್ಥ ಹಾಗು ಸ್ವಾವಲಂಬಿ ಮಹಿಳೆಯಾಗಬೇಕೆಂದು ನನ್ನ ಬಯಕೆ" ನುಡಿದನು. ಬಾಲಕನ ಮಾತುಗಳನ್ನು ಕೇಳಿದ ವೃದ್ಧನು ಕೂಡಲೇ ಅವನನ್ನು ಕರೆದುಕೊಂಡು ಹೊರಟನು. ಕುತೂಹಲಗೊಂಡ ರಾಮನು ಅವರೀರ್ವರನ್ನು ಹಿಂಬಾಲಿಸಿದನು. ಬಾಲಕನನ್ನು ಮಾರುಕಟ್ಟೆಗೆ ಕರೆದೊಯ್ದು ವೃದ್ಧನು ಅಂಗಡಿಯಲ್ಲಿ ಆ ಬಾಲಕನ ತಂಗಿಗಾಗಿ ಸಮವಸ್ತ್ರವನ್ನು ಕೊಡಿಸಿದನು.

ವೃದ್ಧನ ಸಹೃದಯತೆ, ಕರುಣೆಯನ್ನು ವೀಕ್ಷಿಸಿದ ರಾಮನ ಕಣ್ಣಾಲಿಗಳು ತುಂಬಿಬಂದವು. ತನಗೇ ಒಂದು ಹೊತ್ತು ಆಹಾರದ ಕೊರತೆಯಿದ್ದರೂ, ಬಾಲಕನ ಕಷ್ಟಕ್ಕಾಗಿ ಮರುಗಿ ಅವನಿಗೆ ಸಹಾಯವೆಸಗಿದ ವೃದ್ಧನ ಔದಾರ್ಯವನ್ನು ಕಂಡ ರಾಮನ ಮನ ಸಂತಸಪಟ್ಟಿತು.

**ಪ್ರಶ್ನೋತ್ತರಗಳು:**

- ರಸ್ತೆಯಲ್ಲಿ ಸಾಗಿಬರುತ್ತಿದ್ದ ರಾಮನು ಏನನ್ನು ನೋಡಿದನು?
- ಬಾಲಕನಿಗೆ ಹಣದಗತ್ಯತೆಯು ಏಕಿದ್ದಿತು?
- ವೃದ್ಧನಕಾರ್ಯವು ಸಮರ್ಥನೀಯವೇ? ಚರ್ಚಿಸಿ.
- ರಾಮನ ಸ್ಥಾನದಲ್ಲಿ ನೀವಿದ್ದಿದ್ದರೇ ಎನು ಮಾಡುತ್ತಿದ್ದಿರಿ?
- ನಮ್ಮ ಜೀವನದಲ್ಲಿ ಕಾರುಣ್ಯವು ಏಕೆ ಮುಖ್ಯ? ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ.

## 5.2.10.7 ಉತ್ತಮ ಆರೋಗ್ಯದ ಅಭ್ಯಾಸಗಳು

ಕೆಲವು ಅಭ್ಯಾಸಗಳನ್ನು ಮುರಿಯುವುದು ಬಹು ಕಷ್ಟ. ಆದ್ದರಿಂದಲೇ ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಚಿಕ್ಕಂದಿನಿಂದಲೇ ಅಳವಡಿಸಿಕೊಂಡಷ್ಟೂ, ಅವುಗಳು ನಮ್ಮಜೊತೆಗೆ ಬೆಳೆದುಬಂದು ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಸಹಕಾರಿಯಾಗುತ್ತದೆ. ಉತ್ತಮಾಭ್ಯಾಸಗಳು ಕೆಟ್ಟಅಭ್ಯಾಸಗಳಿಗೆ ಜಾಗಕೊಡುವುದಿಲ್ಲ.

ಉದ್ದೇಶ:

- ಉತ್ತಮಆರೋಗ್ಯದ ಮಹತ್ವವನ್ನು ಮಕ್ಕಳು ಅರಿಯುವರು.
- ಉತ್ತಮಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆಂಬುದನ್ನು ಅವರು ತಿಳಿಯುವರು.

ವಿಧಾನ: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು

ಸಮಯ: 45 ನಿಮಿಷಗಳು

### ಚಟುವಟಿಕೆ 1: ತರಗತಿಯಲ್ಲಿನ ಕಾರ್ಯಚಟುವಟಿಕೆಗಳು

### ಆರೋಗ್ಯಕರ ಆಹಾರವನ್ನು ಸೇವಿಸಿ

- ಎಲ್ಲಕಿಂತ ಕಷ್ಟಕರವಾದ ಅಭ್ಯಾಸವಿದು. ಮಕ್ಕಳ ಕೈಬಾಯಿಗೆ ಆಲೂಗೆಡ್ಡೆ ಉಪ್ಪೇರಿಯಂತಹ ಕರಿದತಿಂಡಿಗಳೇ ಪ್ರಿಯ.
- ಇಂತಹ ಆಹಾರಗಳು ಉತ್ತಮಆರೋಗ್ಯಕ್ಕೆ ಹಾನಿಕಾರಕವಾದುದು ಎಂಬುದನ್ನು ಮಕ್ಕಳಿಗೆ ಮನವರಿಕೆಮಾಡಿಸಿ. ಅದರಬದಲಾಗಿ ಆರೋಗ್ಯಕರವಾದ, ಪೌಷ್ಟಿಕವಾದ ಆಹಾರಸೇವನೆಯ ಪ್ರಾಮುಖ್ಯತೆಯನ್ನು ತಿಳಿಸಿಕೊಡಿ.
- ಮಕ್ಕಳಿಗೆ ಪ್ರಿಯವಾದ ಉಪ್ಪೇರಿ, ಲಾಡು, ಸಮೋಸಗಳಂತಹ ತಿಂಡಿಗಳನ್ನು ಅಂಗಡಿಗಳಲ್ಲಿ ಕೊಳ್ಳುವಬದಲಿಗೆ ಮನೆಯಲ್ಲಿಯೇ ತಯಾರಿಸಲು ಪೋಷಕರಿಗೆ ಸಲಹೆನೀಡಿ.

### ದಿನಕ್ಕೆರೆಡು ಬಾರಿ ದಂತಮಾರ್ಜನ

- ದಂತಗಳ ಸ್ವಚ್ಛತೆಯಬಗ್ಗೆ ಮಕ್ಕಳಿಗೆ ತಿಳಿಸಿಕೊಡಿ. ದಿನಕ್ಕೆರೆಡು ಬಾರಿ ಹಲ್ಲುಗಳನ್ನು ಸ್ವಚ್ಛಗೊಳಿಸುವುದರ ಉತ್ತಮಪರಿಣಾಮವನ್ನು ತಿಳಿಸಿ. ಹಲ್ಲುಗಳನ್ನು ಉಜ್ಜುವುದರ ಸರಿಯಾದರೀತಿಯನ್ನು ಮಕ್ಕಳಿಗೆ ಕಲಿಸಿ.

## ಸಕಾಲ ಸವಿನಿದ್ರೆ

- ಗಾಢವಾದ ಸವಿನಿದ್ರೆಯು ಮಕ್ಕಳ ಮಿದುಳನ್ನು ಜಾಗೃತಗೊಳಿಸಿ ಅವರ ಗ್ರಹಣಶಕ್ತಿಯನ್ನು ವರ್ಧಿಸುತ್ತದೆ. ಜೊತೆಗೆ ಪಠ್ಯವಿಷಯಗಳಿಂದ ಹೊರತಾದ ಕ್ರೀಡೆಗಳು, ಲಲಿತಕಲೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಲಿಯುವಲ್ಲಿ ಮಿದುಳನ್ನು ಚುರುಕುಗೊಳಿಸುತ್ತದೆ.

## ಕೋಣೆಮಕ್ಕಳುಕೊಳೆತೋ; ಬೀದಿಮಕ್ಕಳುಬೆಳೆದೊ.

- ಪ್ರಕೃತಿಯಮಡಿಲಿನಲಿ ನಾಕುಗೋಡೆಗಳಾಚೆ ಆಡುತ್ತಾ ಮಕ್ಕಳು ಬೆಳೆಯಬೇಕು. ಆಗ ಅವರು ತಾವು ಬೆಳೆಯುತ್ತಿರುವ ಪರಿಸರ ಮತ್ತು ಪ್ರಕೃತಿಯನ್ನು ಪ್ರೀತಿಸಿ ಗೌರವಿಸಲು ಕಲಿಯುತ್ತಾರೆ. ಪ್ರಕೃತಿಯನಡುವೆ ಕಲಿಯುವುದು ಮತ್ತು ಆಟವಾಡುವುದರಿಂದ ತಮ್ಮಸುತ್ತಮುತ್ತಲಿನ ಪರಿಸರದ ವಿವಿಧ ಅಂಶಗಳೊಡನೆ ಪರಸ್ಪರ ಪ್ರತಿಕ್ರಿಯಿಸುತ್ತಾ, ತಾವು ಜೀವಿಸುತ್ತಿರುವ ಜಗತ್ತಿನ ಬಗ್ಗೆ ಅರಿಯಲು ಮಕ್ಕಳಿಗೆ ಸಹಾಯವಾಗುತ್ತದೆ.
- ಹೊರಾಂಗಣ ಕ್ರೀಡೆಗಳು ಮಕ್ಕಳನ್ನು ಹೆಚ್ಚು ಕ್ರಿಯಾಶೀಲಗಳಿಸುವಲ್ಲಿ ಮಹತ್ವದಪಾತ್ರ ವಹಿಸುತ್ತದೆ. ಜೊತೆಗೆ ಅವರ ಶಕ್ತಿಸಾಮರ್ಥ್ಯಗಳನ್ನು ಮತ್ತು ದೇಹದಾರ್ಢ್ಯವನ್ನು ವರ್ಧಿಸುತ್ತದೆ.

## ಸ್ವಚ್ಛತಾಕಾರ್ಯ

- ತಾವೇ ಉಂಟುಮಾಡಿರುವ ಕೊಳಕನ್ನು ಸ್ವಚ್ಛಗೊಳಿಸುವುದನ್ನು ನಮ್ಮಮಕ್ಕಳಿಗೆ ಕಲಿಸುವುದು ಸರ್ವೇಸಾಧಾರಣವಾದ ವಿಷಯವಾಗಿರಬಹುದು. ಅವರಿಗೆ ತಾವು ಮಾಡಿರುವ ಕೊಳಕನ್ನು ಸ್ವಚ್ಛಗೊಳಿಸುವಾಭ್ಯಾಸವನ್ನು ಕಲಿಸಿದಾಗ, ಅದು ಅವರಲ್ಲಿ ಇನ್ನೂ ಕೆಲವು ಜವಾಬ್ದಾರಿಯುತ ಅಂಶಗಳನ್ನು ಕಲಿಸಿಕೊಡುತ್ತದೆ. ವೈಯಕ್ತಿಕಜವಾಬ್ದಾರಿಯ ಜೊತೆಗೆ ನೈತಿಕ ಹೊಣೆಗಾರಿಕೆಯನ್ನು ಅವರು ಬೆಳೆಸಿಕೊಳ್ಳುವಲ್ಲಿ ಇದು ಸಹಾಯಮಾಡುತ್ತದೆ.

## ಹಣದ ಜವಾಬ್ದಾರಿ

ಮಕ್ಕಳು ತಾವೆ ಸ್ವತ: ಮಾರುಕಟ್ಟೆಗೆ ತೆರಳಿ ಖರೀದಿಸುವಷ್ಟು ಜವಾಬ್ದಾರಿಯುತರಾದಾಗ, ಕಷ್ಟಪಟ್ಟು ದುಡಿದ ಹಣದಬೆಲೆಯ ಬಗ್ಗೆ ಅವರಲ್ಲಿ ಅರಿವುಮೂಡಿಸುವುದು ಅತ್ಯಗತ್ಯ. ಜೊತೆಗೆ ಹಣದ ಉಳಿತಾಯದ ಬಗ್ಗೆ ಕೂಡ ಮಕ್ಕಳಿಗೆ ಮನವರಿಕೆಮಾಡಿಕೊಡಿ.

## ಹಂಚಿಕೆಯೂ ಕಾಳಜಿಯೇ

ತಮ್ಮಲ್ಲಿರುವುದನ್ನು ಇತರರೊಂದಿಗೆ ಹಂಚಿಕೊಳ್ಳುವುದರಲ್ಲಿರುವ ಸಂತೋಷದ ಬಗ್ಗೆ ಮಕ್ಕಳಿಗೆ ಅರಿವುಮೂಡಿಸಿ. ಪರಸ್ಪರ ಹಂಚಿಕೊಂಡಾಗ ಸಿಗುವ ದುಪ್ಪಟ್ಟು ಲಾಭದಿಂದ ನಮಗೆ ದೊರೆಯುಬಹುದಾದ ಆನಂದದ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಿ.

## ಸಾರ್ವಜನಿಕಸ್ಥಳಗಳ ಸ್ವಚ್ಚತೆ

- ಜವಾಬ್ದಾರಿಯುತ ಹಾಗು ಸುಸಂಸ್ಕೃತ ಪ್ರಜೆಗಳಾಗುವಂತೆ ಮಕ್ಕಳಿಗೆ ಶಿಕ್ಷಣನೀಡಿ. ಸಾರ್ವಜನಿಕಸ್ಥಳಗಳಿರುವುದು ಕಸಹಾಕುವುದಕ್ಕಾಗಿಯಲ್ಲ, ಮತ್ತು ತ್ಯಾಜ್ಯವಸ್ತುಗಳನ್ನು ಹತ್ತಿರದ ಕಸದಡಬ್ಬಗಳಲ್ಲಿಯೇ ಎಸೆಯಬೇಕು ಎಂಬ ಅಂಶಗಳನ್ನು ಮಕ್ಕಳಿಗೆ ವಿವರಿಸಿ. ಈ ಅಭ್ಯಾಸವನ್ನು ರೂಢಿಮಾಡಿಕೊಂಡು ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಅವರಿಗೆ ಸಹಕರಿಸಿ. ಮತ್ತು ಈ ಉತ್ತಮ ಅಭ್ಯಾಸವನ್ನು ಎಲ್ಲೆಡೆ ಅನುಸರಿಸುವಂತೆ ಸೂಚಿಸಿ. ಇದರಿಂದ ಅವರು ಸತ್ಪ್ರಜೆಗಳಾಗುವಲ್ಲಿ ಸಂಶಯವಿಲ್ಲ.
- ಹೂದೋಟ ಅಥವಾ ಉದ್ಯಾನವನದಂತಹ ಸಾರ್ವಜನಿಕಸ್ಥಳಗಳಲ್ಲಿ ಕಸವನ್ನು ಹಾಕುವುದು ಒಬ್ಬ ಕೆಟ್ಟ ನಾಗರಿಕನ ಸಂಕೇತವಾಗುತ್ತದೆ ಎಂಬುದನ್ನು ಮಕ್ಕಳಿಗೆ ಮನವರಿಕೆಮಾಡಿಕೊಡಿ. ತ್ಯಾಜ್ಯವಸ್ತುಗಳನ್ನು ಸರ್ವದಾ ಕಸದಡಬ್ಬಗಳಲ್ಲಿಯೇ ಎಸೆದು ಒಬ್ಬ ಸುಸಂಸ್ಕೃತ ನಾಗರೀಕನ ಪಾತ್ರವಹಿಸಲು ಮಕ್ಕಳಿಗೆ ನೆರವಾಗಿ.

# ಅನುಬಂಧ – 1

**ಮೌಲ್ಯಗಳ ಪಟ್ಟಿ:**

**ಮೌಲ್ಯಗಳನ್ನು ಗುರುತಿಸಲು ಮಾರ್ಗಸೂಚಿಗಳು:**

- ಮೌಲ್ಯಗಳನ್ನು ಅಭಿವ್ಯಕ್ತಿಸುವ ಪದಬಳಕೆಯಲ್ಲಿ ಯಾವುದೇ ಅಸ್ಪಷ್ಟತೆ ಇರಬಾರದು.
- ಪ್ರತಿಯೊಬ್ಬರೂ ಮೌಲ್ಯಗಳನ್ನು ಸಮಾನರೀತಿಯಲ್ಲಿ ವ್ಯಾಖ್ಯಾನಿಸುವಂತಿರಬೇಕು.
- ಅದು ಮಾತೃತ್ವದ ಹೇಳಿಕೆಯಾಗಿರಬಾರದು.
- ಮುಖ್ಯವಾಗಿ ಮೌಲ್ಯಗಳನ್ನು ಕಾರ್ಯರೂಪಕ್ಕೆ ತರಬಹುದಾದ ಹಿನ್ನಲೆಯಿಂದ ಗುರುತಿಸಿ.
- 'ರಾಷ್ಟ್ರೀಯಮೌಲ್ಯಗಳ ಮಾರ್ಗಸೂಚಿ'ಯನ್ನು ಅಳವಡಿಸಿಕೊಳ್ಳತಕ್ಕದ್ದು.

**ಮೌಲ್ಯಗಳು ಸಾರ್ವತ್ರಿಕವಾಗಿಯೂ / ಶಾಶ್ವತವಾಗಿಯೂ ಇರತಕ್ಕದ್ದು:**

- ಸಮಗ್ರತೆ
- ಅಂತರ್ಗತತೆ
- ಸುಸ್ಥಿರತೆ
- ಜವಾಬ್ದಾರಿ
- ರಾಷ್ಟ್ರಪ್ರೇಮ
- ಧೈರ್ಯ
- ಪಾರದರ್ಶಕತೆ

ರಾಷ್ಟ್ರೀಯ ಹಾಗು ಸಾಂಸ್ಕೃತಿಕ ಮೌಲ್ಯಗಳ ಜೊತೆಯಲ್ಲಿ, ಸಾರ್ವತ್ರಿಕಮೌಲ್ಯಗಳಾದ ಪ್ರೀತಿ, ಶಾಂತಿ, ಗೌರವ, ಸಹಿಷ್ಣುತೆ, ಕ್ಷಮೆ, ಸಹಬಾಳ್ವೆ ಮತ್ತು ಅಹಿಂಸೆ – ಇವುಗಳನ್ನು ನಮ್ಮ ಇಂದಿನ ಯುವ ನೇತಾರರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ.

- ನೀವು ಯಾವುದನ್ನು ಇಷ್ಟಪಡುವುದಿಲ್ಲವೋ ಅದನ್ನು ಇತರರಿಗೂ ಕೂಡ ಮಾಡಬೇಡಿ.

- ನಮ್ಮ ರಾಷ್ಟ್ರೀಯಮೌಲ್ಯಗಳು ಹಾಗು ಸಚ್ಚಾರಿತ್ರ್ಯಗಳ ಸಾರವಾದ ಸತ್ಯಸಂಧತೆ, ನೈರ್ಮಲ್ಯ ಹಾಗು ಸಂವೇದನಾನಿಯಂತ್ರಣಗಳು ದೇಶದ ಹಿತ ಮತ್ತು ಅಭಿವೃದ್ಧಿಗಳನ್ನು ಉಳಿಸಿ ಬೆಳೆಸುವುದಕ್ಕೆ ಅವಶ್ಯವಿರುವ ಪ್ರಮುಖ ಸಾಧನಗಳು.
- ಮಾನವನ ಸಾಕಾರರೂಪವಿರುವುದೇ ಈ ಮೌಲ್ಯಗಳ ನಿಧಿಯನ್ನು ಪಡೆದುಕೊಳ್ಳುವುದಕ್ಕೆ. ಆದ್ದರಿಂದ ಈ ಮೂರ್ತರೂಪವನ್ನು ಪೌಷ್ಟಿಕಆಹಾರ, ವ್ಯಾಯಾಮ ಮತ್ತು ವಿರಾಮಗಳಿಂದ ಪೋಷಿಸಿ, ನಿಮ್ಮ ಅವಶ್ಯಕತೆಗಳಿಗಿಂತ ಇತರರ ಸೇವೆಯಲ್ಲಿ ಹೆಚ್ಚು ತೊಡಗಿಸಿ.
- ಶ್ರೀಮಂತರ ಸಂಪತ್ತು ಇರುವುದೇ ಇತರರ ಸಹಾಯ ಮತ್ತು ಸೇವೆಗಾಗಿ.
- ಕೇವಲ ರಕ್ತಸಂಬಂಧಿಕರು ಮಾತ್ರ ನಿಮ್ಮ ಕುಟುಂಬಕ್ಕೆ ಸೇರಿದವರಲ್ಲ. ಇಡೀ ಸಮಾಜವನ್ನು ತಮ್ಮ ಕುಟುಂಬವೆಂದು ತಿಳಿದು ತೆರೆದಹೃದಯದಿಂದ ಅಪ್ಪಿಕೊಳ್ಳುವಂತಹ ಸಮಾಜ ನಿರ್ಮಾಣವಾಗಬೇಕು. "ವಸುದೈವಕುಟುಂಬಕಂ " ಎಂಬ ವ್ಯಾಖ್ಯೆ ಸಾರ್ವಕಾಲಿಕ ಸತ್ಯ.
- ಜ್ಞಾನವೇ ಪರಮೋಚ್ಚ ಶಕ್ತಿ ಹಾಗು ಸಂಪತ್ತು.
- ಸತ್ಯಸಂಧತೆಗಿಂತ ಹೆಚ್ಚಿನ ಅನುಷ್ಠಾನ ಮತ್ತೊಂದಿಲ್ಲ.
- ನೈಸರ್ಗೀಯಸಂಪತ್ತುಗಳನ್ನು ನ್ಯಾಯಯುತವಾಗಿ ಬಳಸಿರಿ. ಅದರ ಅನಗತ್ಯ ಸವಕಳಿಯ ಬಗ್ಗೆ ಎಚ್ಚರವಹಿಸಿ. ಭೂ, ಜಲ ಹಾಗು ವಾಯುಮಾಲಿನ್ಯಕ್ಕೆ ಕಾರಣರಾಗಬೇಡಿ. ನಿಸರ್ಗಸಂಪತ್ತನ್ನು ಸಂರಕ್ಷಿಸಿ ಅದನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದ ಗುರುತರ ಜವಾಬ್ದಾರಿ ನಮ್ಮ ಮೇಲಿದೆ.
- ಹಚ್ಚಹಸಿರಿನಿಂದ ಸಂಪದ್ಭರಿತವಾದ ಭೂಮಿಯು ಎಲ್ಲಾ ಜೀವಜಂತುಗಳಿಗೆ ಅತ್ಯಗತ್ಯ. ಅರಣ್ಯಗಳು, ಉದ್ಯಾನವನಗಳು ಹಾಗು ಕೃಷಿಭೂಮಿಗಳನ್ನು ಜತನದಿಂದ ಕಾಪಾಡಿ. "ಒಂದುಮರವು ಹತ್ತುಮಕ್ಕಳಿಗೆ ಸಮ ", ನೆನಪಿರಲಿ.

# ಅನುಬಂಧ – 2: ಶಿಕ್ಷಕರಿಗೆ ಮಾರ್ಗಸೂಚಿ

ಈ ಎಲ್ಲಾ ಚಟುವಟಿಕೆಗಳ ಮೂಲ ಉದ್ದೇಶದಗುರಿ ಏನೆಂದರೆ, ಮಕ್ಕಳ ಸಾಮಾಜಿಕ ಹಾಗು ಭಾವನಾತ್ಮಕ ಕೌಶಲ್ಯಗಳ ವಿಕಾಸ, ಬಾಂಧವ್ಯಗಳ ಬೆಳವಣಿಗೆ, ಹೊಸಅನುಭವಗಳ ಆನಂದ ಮತ್ತು ಅಂತಿಮವಾಗಿ ಬದುಕಿನಲ್ಲಿ ಎದುರಾಗುವ ಸನ್ನಿವೇಶಗಳನ್ನು ವಿಭಿನ್ನ ವಿಧಾನಗಳ ಮೂಲಕ ಎದುರಿಸುವ ಆತ್ಮಸ್ಥೈರ್ಯದ ನಿರ್ಮಾಣ.

ಈ ಶಿಕ್ಷಕರ ಕೈಪಿಡಿಯು ಹಲವಾರು ಕಾರ್ಯಚಟುವಟಿಕೆಗಳ ಸಂಗ್ರಹವಾಗಿದ್ದು, ಇದನ್ನು 4 ಮತ್ತು 5 ನೇ ತರಗತಿಯ ಮಕ್ಕಳಿಗೆ ಆಧಾರವಾಗಿ ಬಳಸಿಕೊಳ್ಳಬಹುದಾಗಿದೆ. ವಿಶೇಷವಾದ ಶೈಕ್ಷಣಿಕ ವಿಧಾನಗಳನ್ನು ಕಾರ್ಯರೂಪಕ್ಕೆ ತರುವಂತೆ ಇದನ್ನು ರಚಿಸಲಾಗಿದೆ. ಈ ಕೆಳಗಿನ ಅಂಶಗಳಿಗೆ ಇದನ್ನು ಅನ್ವಯಿಸಬಹುದಾಗಿದೆ:

- ಮಕ್ಕಳ ಸಾಮಾಜಿಕ, ಭಾವನಾತ್ಮಕ, ಸಂಬಂಧಿತ ಹಾಗು ಅಂತರ್ಗತ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿ ಉತ್ತಮಪಡಿಸಿ.
- ಮಕ್ಕಳ ಅಂತರಸಾಂಸ್ಕೃತಿಕ ತಿಳುವಳಿಕೆಯನ್ನು ಉತ್ತೇಜಿಸಿ.
- ಮಕ್ಕಳಲ್ಲಿರಬಹುದಾದ ವಿಭಿನ್ನ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಿ.

ಈ ಕೈಪಿಡಿಯಲ್ಲಿರುವ ಚಟುವಟಿಕೆಗಳು ಹಲವು ವಿಭಿನ್ನಮೂಲಗಳು ಹಾಗೂ ಹಲವು ವಿಭಿನ್ನ ಸಾಮಾಜಿಕ – ಸಾಂಸ್ಕೃತಿಕ ಪರಿಸರಗಳಿಂದ ಬಂದವುಗಳಾಗಿವೆ.

ಆದಾಗ್ಯೂ, ಸಾಮಾಜಿಕ, ಭಾವನಾತ್ಮಕ ಹಾಗು ಸಂಬಂಧಿತ ಸಾಮರ್ಥ್ಯಗಳು ಕೇವಲ ಒಂದು ದಿನದಲ್ಲಿ ಘಟಿಸುವಂತದ್ದಲ್ಲ. ಅವು ಹಲವಾರು ಅಂಶಗಳ ಮೇಲೆ ಅವಲಂಬಿತವಾಗಿದೆ. ಸಾಮಾಜೀಕೀಕರಣ ಹಂಚಿಕೆಯು ಬೋಧನಾತ್ಮಕ ಮತ್ತು ಕಲಿಕೆಯ ಪರಿಸರಕ್ಕೆ ಒಂದು ಸವಾಲಾಗಿದೆ.

ಪ್ರಿಸ್ಕೂಲ್ ಅಥವಾ ಪ್ರಾಥಮಿಕಶಾಲೆಯಲ್ಲಿ ಕೇವಲ ಒಂದೇ ಒಂದು ಚಟುವಟಿಕೆ ಅಥವಾ ಒಂದು ವೈಶಿಷ್ಟ್ಯವಾರದ ಮೂಲಕ ಸಾಮಾಜಿಕ, ಅನುಭೂತಿ ಮತ್ತು ಸಂಬಂಧಿತ ಸಾಮರ್ಥ್ಯಗಳನ್ನು ನಿರ್ಮಿಸಲಾಗುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಈ ಸಾಮರ್ಥ್ಯಗಳು ಕ್ರಮಬದ್ಧವಾದ ಕಲಿಕೆಯ ಪ್ರಕ್ರಿಯೆಯಿಂದ ಹಂತಹಂತವಾಗಿ ಬೆಳೆಯುತ್ತವೆ. ಅಲ್ಲಿ ಮಕ್ಕಳು ಪರಿಣಾಮಕಾರಿಯಾದ ಮತ್ತು ಅರಿವಿನ ಹಂತದ ಅನುಭವವನ್ನು ಪಡೆಯುತ್ತಾರೆ.

ಎಲ್ಲಾಮಕ್ಕಳನ್ನೂ ಅವರಲ್ಲಿರುವ ವಿಭಿನ್ನತೆಗಳ ಹೊರತಾಗಿಯೂ ಒಪ್ಪಿಕೊಂಡು ಸ್ವಾಗತಿಸುವ ಒಂದು ಸಮುದಾಯದಲ್ಲಿ ಗೌರವ ಮತ್ತು ಸಮಾನತೆ ಗಳಿಸುವುದು ಎಂದರೆ ಏನೇಂಬುದನ್ನು ಮಕ್ಕಳು ಕಲಿಕೆಯ ಪ್ರಕ್ರಿಯೆಯ ಜೊತೆಜೊತೆಯಾಗಿ ಅರಿಯುತ್ತಾರೆ.

* * * * * * * *